ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಡಬ್ಲ್ಯುಪಿಎಲ್-ಬ್ರಂಟ್ ಚೊಚ್ಚಲ ಶತಕ

ಮುಂಬೈ ಇಂಡಿಯನ್ಸ್ ತಂಡದ ನ್ಯಾಟ್ ಶಿವರ್ ಬ್ರಂಟ್ ವಡೋದರದಲ್ಲಿ ಸೋಮವಾರ ಆರ್‌ಸಿಬಿ ಎದುರು ಶತಕ ಗಳಿಸಿದರು. ಡಬ್ಲ್ಯುಪಿಎಲ್‌ನಲ್ಲಿ ದಾಖಲಾದ ಮೊದಲ ಶತಕ ಇದು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಚಿನ್ನ (Std. 10g) ₹1,67,590 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,64,105 (ಬೆಂಗಳೂರು)

'ಸಿಂಧೂರ' ದರ್ಶನ, ಸಂಸ್ಕೃತಿ ಅನಾವರಣ | 'ಒಕ್ಕೂಟ ವ್ಯವಸ್ಥೆ ಉಳಿಸಿಕೊಳ್ಳಿ' ವಿವರ ಪುಟ 5

ಮುಕ್ತ ವ್ಯಾಪಾರ: ಚರ್ಚೆ ಅಪಾರ

ಐರೋಪ್ಯ ಒಕ್ಕೂಟದ ಜೊತೆಗಿನ ವ್ಯಾಪಾರ ಒಪ್ಪಂದದ ಬಗ್ಗೆ ಇಂದು ಘೋಷಣೆ ಹೊರಬೀಳುವ ನಿರೀಕ್ಷೆ ಇದೆ. ವ್ಯಾಪಾರ ಒಪ್ಪಂದಕ್ಕಾಗಿ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ಮಾರ್ಚ್ ಮೊದಲ ವಾರದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಈ ಮಧ್ಯೆ, ಭಾರತದ ಜೊತೆಗಿನ ಒಪ್ಪಂದ ವಿಳಂಬ ಆಗಿರುವುದಕ್ಕೆ ಅಮೆರಿಕದಲ್ಲಿ ಅಪಸ್ವರವೂ ಎದ್ದಿದೆ...

ಭಾರತದ ಉತ್ಪನ್ನಗಳಿಗೆ ಇ.ಯು ಸುಂಕ ಇಳಿಕೆ?

ನವದೆಹಲಿ (ಪಿಟಿಐ): ಕಾರ್ಮಿಕರ ಶ್ರಮ, ಅವರ ಭಾಗೀದಾರಿಕೆ ತೀವ್ರ ಪ್ರಮಾಣದಲ್ಲಿ ಇರುವ ವಲಯಗಳಿಗೆ ಸೇರಿದ ಉತ್ಪನ್ನಗಳ ಮೇಲಿನ ಸುಂಕ ಇಳಿಕೆಯು ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಭಾಗವಾಗಿರುವ ನಿರೀಕ್ಷೆ ಇದೆ.

ಅಂದರೆ, ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಜಾರಿಗೆ ಬಂದ ನಂತರದಲ್ಲಿ ಯುರೋಪಿನ ಕಾರುಗಳು, ವೈನ್‌ನಂತಹ ಉತ್ಪನ್ನಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ಇಳಿಕೆಯಾಗಬಹುದು ಎಂದು ಅಂದಾಜು ಮಾಡಲಾಗಿದೆ. ಎಫ್‌ಟಿಎ ಕುರಿತ ಮಾತುಕತೆಗಳು ಪೂರ್ಣಗೊಂಡಿರುವ ವಿಚಾರವನ್ನು ಭಾರತ ಹಾಗೂ ಇ.ಯು ಪ್ರಮುಖರು ಮಂಗಳವಾರ ಘೋಷಿಸಲಿದ್ದಾರೆ.

ಸೇವಾ ವಲಯಗಳಿಗೆ ಸಂಬಂಧಿಸಿದ ಹಲವು ನಿಯಮಗಳಲ್ಲಿ ಸಡಿಲಿಕೆ ತರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಭಾರತದ ತನ್ನ ಜವಳಿ, ಚರ್ಮೋದ್ಯಮ, ವಸ್ತ್ರ, ಆಭರಣ ಮತ್ತು ಹರಳು, ಕರಕುಶಲ ಉತ್ಪನ್ನಗಳಿಗೆ ಯುರೋಪಿನ ಮಾರುಕಟ್ಟೆಗೆ ಸುಂಕರಹಿತವಾಗಿ ಪ್ರವೇಶಿಸಲು ಅವಕಾಶ ಸಿಗಬೇಕು ಎಂದು ಒತ್ತಾಯಿಸಿದೆ. ಭಾರತವು ಅಂತಿಮಗೊಳಿಸಿರುವ ಎಲ್ಲ ಎಫ್‌ಟಿಎಗಳಲ್ಲಿ ಇದೇ ಬೇಡಿಕೆಯನ್ನೇ ಪ್ರಮುಖವಾಗಿ ಇರಿಸಲಾಗಿದೆ. ಅಲ್ಲದೆ, ಭಾರತದ ಜೊತೆ ಎಫ್‌ಟಿಎ ಅಂತಿಮಗೊಳಿಸಿರುವ ಬ್ರಿಟನ್, ಯುಎಇ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಎಲ್ಲ ದೇಶಗಳು ಈ ಬೇಡಿಕೆಗೆ ಒಪ್ಪಿವೆ.

ಐರೋಪ್ಯ ಒಕ್ಕೂಟವು ತನ್ನಲ್ಲಿ ತಯಾರಾಗುವ ವಾಹನಗಳು, ವೈನ್ ಸೇರಿದಂತೆ ವಿವಿಧ ಬಗೆಯ ಮದ್ಯಕ್ಕೆ ಸುಂಕ ಇಳಿಕೆಯ ಪ್ರಯೋಜನ ನೀಡುವಂತೆ ಒತ್ತಾಯಿಸುತ್ತಿದೆ. ಭಾರತವು ಬ್ರಿಟನ್ ಜೊತೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದದಲ್ಲಿ, ವಾಹನ ವಲಯಕ್ಕೆ ಕೋಟಾ ಆಧಾರಿತ ಸುಂಕ ವಿನಾಯಿತಿ ನೀಡಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಜೊತೆಗಿನ ಒಪ್ಪಂದಗಳಲ್ಲಿ ವೈನ್‌ಗಳ ಬಗ್ಗೆ ಪ್ರಸ್ತಾಪ ಇದೆ. ಆಸ್ಟ್ರೇಲಿಯಾದ ವೈನ್‌ಗಳಿಗೆ ಭಾರತವು 10 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ರಿಯಾಯಿತಿಗಳನ್ನು ಒದಗಿಸಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ವಿಶೇಷ ಕಾರ್ಯದರ್ಶಿ ಆಗಿದ್ದ (ಈಗ ವಾಣಿಜ್ಯ ಕಾರ್ಯದರ್ಶಿ) ರಾಜೇಶ್ ಅಗರ್ವಾಲ್ ಅವರು, 'ಪ್ರಸ್ತಾವಿತ ಒಪ್ಪಂದವು ಭಾರತದ ಆಟೊಮೊಬೈಲ್ ಉದ್ಯಮಕ್ಕೆ ರಫ್ತು ಹೆಚ್ಚಿಸಲು ದೊಡ್ಡ ಅವಕಾಶ ಒದಗಿಸಲಿದೆ, ಅಲ್ಲಿನ ಕಂಪನಿಗಳ ಜೊತೆ ಪಾಲುದಾರಿಕೆಗೆ ನೆರವಾಗಲಿದೆ' ಎಂದು ಎಂದಿದ್ದರು. ▶8

ಒಪ್ಪಂದ ವಿಳಂಬ: ಟ್ರಂಪ್ ಟೀಕಿಸಿದ ಸೆನೆಟರ್

ವಾಷಿಂಗ್ಟನ್ (ಪಿಟಿಐ): ಭಾರತದೊಟ್ಟಿಗೆ ವ್ಯಾಪಾರ ಒಪ್ಪಂದ ಅಂತಿಮಗೊಳಿಸದ ಕಾರಣಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆ.ಡಿ. ವಾನ್ಸ್ ಹಾಗೂ ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವಾರೊ ಅವರನ್ನು ಸೆನೆಟರ್ ಟೆಡ್ ಕ್ರೂಜ್ ಟೀಕಿಸಿದ್ದಾರೆಂದು 'ಆಕ್ಸಿಯೋಸ್' ಮಾಧ್ಯಮವು ವರದಿ ಮಾಡಿದೆ.

ದಾನಿಗಳೊಂದಿಗೆ ನಡೆದ ಖಾಸಗಿ ಸಭೆಯಲ್ಲಿ ಕ್ರೂಜ್ ಅವರು ಈ ರೀತಿ ಟೀಕೆ ಮಾಡಿದ್ದಾರೆ ಎಂದು ಹೇಳಲಾಗಿದೆ. ಕ್ರೂಜ್ ಅವರ ಧ್ವನಿಯನ್ನು ಆಧರಿಸಿ ಮಾಧ್ಯಮವು ಈ ವರದಿ ಮಾಡಿದೆ. ಆ ಧ್ವನಿ ಅವರದ್ದೇ ಎನ್ನುವುದು ಇನ್ನೂ ದೃಢಪಟ್ಟಿಲ್ಲ.

'ಒಪ್ಪಂದಕ್ಕೆ ಅಡ್ಡಿಯಾಗುತ್ತಿರುವುದು ಯಾರು' ಎಂದು ದಾನಿಗಳು ಪ್ರಶ್ನಿಸಿದಾಗ ಕ್ರೂಜ್ ಅವರು, ನವಾರೊ, ವ್ಯಾನ್ಸ್ ಮತ್ತು ಟ್ರಂಪ್ ಅವರ ಹೆಸರನ್ನು ಉಲ್ಲೇಖಿಸಿದ್ದಾರೆ. ಟ್ರಂಪ್ ಸುಂಕ ನೀತಿಯು ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಬಹುದು ಮತ್ತು ಅವರ ವಾಗ್ದಂಡನೆಗೂ ಕಾರಣವಾಗಬಹುದು ಎಂದು ಕ್ರೂಜ್ ಎಚ್ಚರಿಸಿದ್ದಾರೆ.

ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿದ ಬಳಿಕ ಭಾರತ–ಅಮೆರಿಕ ವ್ಯಾಪಾರ ಒಪ್ಪಂದವು ನನೆಗುದಿಗೆ ಬಿದ್ದಿದೆ. ಈ ಸಂಬಂಧ ಉಭಯ ದೇಶಗಳು ಹಲವು ಸುತ್ತಿನ ಮಾತುಕತೆ ನಡೆಸಿದರೂ ಯಾವುದೂ ಫಲಪ್ರದವಾಗಿಲ್ಲ. 'ಭಾರತ–ಪಾಕಿಸ್ತಾನ ಯುದ್ಧ ನಿಲ್ಲಿಸಿದ್ದು ನಾನೇ' ಎಂದು ಟ್ರಂಪ್ ಹೇಳಿಕೊಂಡ ಬಳಿಕ ಮತ್ತು ಅಮೆರಿಕವು ನೂತನ ವಲಸೆ ನೀತಿ ಜಾರಿಗೊಳಿಸಿದ ನಂತರ ಉಭಯ ದೇಶಗಳ ನಡುವಣ ಸಂಬಂಧದಲ್ಲಿ ಬಿರುಕು ಮೂಡಿದೆ.

ಮಾರ್ಚ್‌ನಲ್ಲಿ ಭಾರತಕ್ಕೆ ಕೆನಡಾ ಪ್ರಧಾನಿ?

ಒಟ್ಟಾವಾ: ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ಮಾರ್ಚ್ ಮೊದಲ ವಾರದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಕೆನಡಾದಲ್ಲಿನ ಭಾರತ ಹೈಕಮಿಷನರ್ ದಿನೇಶ್ ಪಟ್ನಾಯಕ್ ತಿಳಿಸಿದ್ದಾರೆ. ಭೇಟಿ ಸಂದರ್ಭದಲ್ಲಿ ಯುರೇನಿಯಂ, ಇಂಧನ, ಖನಿಜಗಳು ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ಸೇರಿದಂತೆ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ ಎಂದು ಅವರು ಹೇಳಿದ್ದಾರೆ. ▶8

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಬ್ಯಾಂಕ್ ನೌಕರರ ಮುಷ್ಕರ ಇಂದು

ನವದೆಹಲಿ (ಪಿಟಿಐ): ವಾರದಲ್ಲಿ ಐದು ದಿನಗಳ ಕೆಲಸದ ವ್ಯವಸ್ಥೆಯನ್ನು ತಕ್ಷಣವೇ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಬ್ಯಾಂಕ್ ನೌಕರರು ಮಂಗಳವಾರ ರಾಷ್ಟ್ರವ್ಯಾಪಿ ಮುಷ್ಕರ ನಡೆಸಲಿದ್ದಾರೆ.

ಜನವರಿ 23ರಂದು ಮುಖ್ಯ ಕಾರ್ಮಿಕ ಆಯುಕ್ತರೊಂದಿಗೆ ನಡೆದ ಸಂಧಾನ ಸಭೆ ಸಕಾರಾತ್ಮಕ ಫಲಿತಾಂಶವನ್ನು ನೀಡದ ಕಾರಣ, ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಮುಷ್ಕರಕ್ಕೆ ಕರೆ ನೀಡಿದೆ.

ಈ ಮುಷ್ಕರದಿಂದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಸೇರಿದಂತೆ ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕ್‌ಗಳ ಶಾಖೆಗಳಲ್ಲಿ ಠೇವಣಿ, ಹಣ ಹಿಂಪಡೆಯುವಿಕೆ, ಚೆಕ್ ಕ್ಲಿಯರೆನ್ಸ್‌ನಂತಹ ಸೇವೆಗಳ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಆದರೆ, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಸೇರಿದಂತೆ ಖಾಸಗಿ ವಲಯದ ಬ್ಯಾಂಕ್‌ಗಳ ನೌಕರರು ಮುಷ್ಕರದಲ್ಲಿ ಭಾಗಿಯಾಗುತ್ತಿಲ್ಲ. ಹೀಗಾಗಿ ಖಾಸಗಿ ಬ್ಯಾಂಕ್‌ಗಳ ವಹಿವಾಟಿನ ಮೇಲೆ ಮುಷ್ಕರವು ಪರಿಣಾಮ ಬೀರದು ಎನ್ನಲಾಗಿದೆ. ▶8

ರಾಜೀವ್ ಗೌಡ ಸೆರೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಆಯುಕ್ತೆ ಅಮೃತಾ ಗೌಡ ಅವರಿಗೆ ದೂರವಾಣಿಯಲ್ಲಿ ಧಮ್ಕಿ ಹಾಕಿದ್ದ ಸ್ಥಳೀಯ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಪೊಲೀಸರು ಸೋಮವಾರ ಕೇರಳದಲ್ಲಿ ಬಂಧಿಸಿದ್ದಾರೆ.

ರಾಜೀವ್ ಗೌಡ ಜ.22ರಂದು ಮಂಗಳೂರು ರೈಲು ನಿಲ್ದಾಣದಲ್ಲಿ ಕಾರು ನಿಲ್ಲಿಸಿ ಕೇರಳಕ್ಕೆ ತೆರಳಿದ್ದರು. ಕೇರಳದಿಂದ ಗೋವಾಕ್ಕೆ ಪ್ರಯಾಣಿಸುವ ವೇಳೆ ಬಂಧಿಸಲಾಗಿದೆ. ಅವರನ್ನು ಶಿಡ್ಲಘಟ್ಟ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬಂಧನವಾಗಿರುವುದು ಖಚಿತ. ಸದ್ಯ ಹೆಚ್ಚಿನ ಮಾಹಿತಿ ನೀಡುವುದಿಲ್ಲ. ಮಂಗಳವಾರ (ಜ.27) ಸಮಗ್ರವಾಗಿ ವಿವರ ನೀಡಲಾಗುವುದು' ಎಂದು ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜೀವ್ ಗೌಡ

ರಾಜೀವ್ ಗೌಡ ಬಂಧನಕ್ಕೆ ಮೂರು ತಂಡ ರಚಿಸಲಾಗಿತ್ತು. ಚಿಕ್ಕಬಳ್ಳಾಪುರ ಸಿಇಎನ್ ಠಾಣೆ ಇನ್‌ಸ್ಪೆಕ್ಟರ್ ಸೂರ್ಯಪ್ರಕಾಶ್, ಶಿಡ್ಲಘಟ್ಟ ವೃತ್ತ ಇನ್‌ಸ್ಪೆಕ್ಟರ್ ಆನಂದ್ ಕುಮಾರ್ ನೇತೃತ್ವದ ತಂಡ ಆರೋಪಿಯನ್ನು ಬಂಧಿಸಿದೆ. ▶3B

ಜಾಹೀರಾತು

ಮಂಡಿ ನೋವು ಮುಕ್ತ ಜೀವನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

ಸ್ಟೀರಾಯ್ಡ್ ಎಂಬ ಹಾನಿಕಾರಕ ಶಾರ್ಟ್‌ಕಟ್ ಬೇಡ | ದೇಹದ ಆಂತರಿಕ ಶಕ್ತಿಯೇ ಪರಮ ಔಷಧ

ಬೆಂಗಳೂರು: ಮೊಣಕಾಲಿನ ನೋವು (Knee Pain) ಇಂದು ಅನೇಕ ಜನರ ಜೀವನವನ್ನು ತುಂಬಾ ಕಷ್ಟಕರವಾಗಿಸಿದೆ. ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರ ವರೆಗೆ, ಹಲವರು ಗಾಯ, ಕೀಲು ಸವೆತ ಮತ್ತು ಸಂಧಿವಾತದಿಂದ ತೀವ್ರ ನೋವಿನ ಹಿಡಿತದಲ್ಲಿ ನರಳುತ್ತಿದ್ದಾರೆ.

ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟ, ಪೇನ್ ಕಿಲ್ಲರ್ಸ್ ಮೇಲೆ ಅತಿಯಾದ ಅವಲಂಬನೆ, ಕುಳಿತಿದ್ದ ಜಾಗದಿಂದ ಎದ್ದೇಳಲು ಕಷ್ಟಕರ ಇವೆಲ್ಲವೂ ಅಸ್ಥಿಸಂಧಿವಾತದ ಲಕ್ಷಣಗಳಾಗಿವೆ.

ನೀವು ಗಮನಿಸಬೇಕಾದ ವಿಷಯ: 'ನೋವು' ನಿಮ್ಮ ದೇಹದೊಳಗೆ ಅಡಗಿರುವ ಸಮಸ್ಯೆ ಸೂಚಿಸುವ ಒಂದು 'ಎಚ್ಚರಿಕೆ ಸಂದೇಶ' ವಷ್ಟೇ.

ನೋವು ಕಂಡಾಗ, ಬೇಗ ಪರಿಹಾರ ಸಿಗಲಿ ಎಂದು ನಾವು ಬಾಮ್ ಹಚ್ಚುತ್ತೇವೆ, ಪೇನ್ ಕಿಲ್ಲರ್ ಮಾತ್ರೆ ನುಂಗುತ್ತೇವೆ. ಇಂತಹ ತಾತ್ಕಾಲಿಕ ಪರಿಹಾರಗಳನ್ನು ಬಳಸಿದಾಗ, ನೋವಿನ 'ಎಚ್ಚರಿಕೆ ಸಂದೇಶ' ಸ್ವಲ್ಪ ಕಾಲಕ್ಕೆ ಮಾಯವಾದಂತೆ ಅನಿಸಿದರೂ, ಸಮಸ್ಯೆಯ ಮುಖ್ಯ ಕಾರಣ (ಕೀಲುಗಳ ಹಾನಿ) ಹಾಗೆಯೇ ಬುಡದಲ್ಲಿ ಉಳಿದುಬಿಡುತ್ತದೆ.

ಬೆಂಗಳೂರಿನಲ್ಲಿರುವ ಸುಪ್ರಸಿದ್ಧ ಅಲಿವಿಯೇಟ್ ಪೇನ್ ಕ್ಲಿನಿಕ್‌ನಲ್ಲಿ ಲಭ್ಯವಿರುವ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'PRP' ಚಿಕಿತ್ಸೆಯನ್ನು ಆರಿಸಿಕೊಳ್ಳುವುದು ಉತ್ತಮ ಆಯ್ಕೆಯಾಗಿದೆ.

ಪಿಆರ್‌ಪಿ ಥೆರಪಿ: ನಿಮ್ಮ ದೇಹದ ಸ್ವಯಂ ಗುಣಪಡಿಕೆಯ ಸಾಮರ್ಥ್ಯ ಉತ್ತೇಜಿಸಿ ನೋವು ಮಾಯ

ಪಿಆರ್‌ಪಿ ಹೇಗೆ ಕೆಲಸ ಮಾಡುತ್ತದೆ?

ನಿಮ್ಮ ಕೈಮೇಲಾದ ಸಣ್ಣ ಗಾಯ ತನ್ನಷ್ಟಕ್ಕೆ ತಾನೇ ವಾಸಿಯಾಗುವುದನ್ನು ನೀವು ಗಮನಿಸಿರಬಹುದು. ಇದಕ್ಕೆ ಕಾರಣ ನಮ್ಮ ರಕ್ತದಲ್ಲಿರುವ 'ನೈಸರ್ಗಿಕ ಬೆಳವಣಿಗೆಯ ಅಂಶಗಳು' (Natural Growth Factors).

PRP ಚಿಕಿತ್ಸೆ ಇದೇ ತತ್ವವನ್ನು ಬಳಸಿ **ದೇಹದ ಗುಣಪಡಿಕೆಯ ಸ್ವಯಂ ಸಾಮರ್ಥ್ಯ ಉತ್ತೇಜಿಸಿ** ಮೊಣ ಕಾಲಿಗೆ ಆಗಿರುವ ಹಾನಿ ಗುಣಪಡಿಸುತ್ತದೆ.

ಪಿಆರ್‌ಪಿ ಚಿಕಿತ್ಸೆಯ ವಿಶೇಷತೆ:

- **ಮೂಲಕ್ಕೆ ಚಿಕಿತ್ಸೆ:** ಹಾನಿಗೊಳಗಾದ ಅಂಗಾಂಶಗಳನ್ನು ಸರಿಪಡಿಸುವ ಮೂಲಕ ನೋವನ್ನು ಬುಡದಿಂದಲೇ ಉಪಶಮಿಸುತ್ತದೆ.
- **ದೀರ್ಘಕಾಲೀನ ಆರಾಮ:** ಇದು ತಾತ್ಕಾಲಿಕವಲ್ಲದೆ, ದೀರ್ಘಕಾಲದ ನೋವುಮುಕ್ತ ಜೀವನಕ್ಕೆ ಪೂರಕವಾದ ಸುರಕ್ಷಿತ ಮಾರ್ಗ.
- **ಶಸ್ತ್ರಚಿಕಿತ್ಸೆಗೆ ಸೂಕ್ತ ಪರ್ಯಾಯ:** ಆಪರೇಷನ್ ಬೇಡ ಎನ್ನುವವರಿಗೆ ಅಥವಾ ಶಸ್ತ್ರಚಿಕಿತ್ಸೆ ಸಾಧ್ಯವಿಲ್ಲದವರಿಗೆ ಈ ಚಿಕಿತ್ಸೆ ಒಂದು ವರದಾನ.

- ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಿ

ಇನ್ನೇಕೆ ವಿಳಂಬ? ಇದೀಗಲೇ ಕರೆ ನೀಡಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಡಾಕ್ಟರ್ ಅಪಾಯಿಂಟ್‌ಮೆಂಟ್ ಪಡೆದು, ನೋವಿಲ್ಲದ ಆರೋಗ್ಯಕರ ಜೀವನವನ್ನು ನಿಮ್ಮದಾಗಿಸಿಕೊಳ್ಳಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿವೆ

ಅಲಿವಿಯೇಟ್

ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ

ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

080 25256878
080 23614888

ಸೂರ್ಯೋದಯ: 6:46 ಸೂರ್ಯಾಸ್ತ : 6:18 | ಚಂದ್ರೋದಯ: ಬೆ. 11:54 ಚಂದ್ರಾಸ್ತ: ರಾ. 12:00 | ಸೋಮವಾರದ ಉಷ್ಣಾಂಶ : ಗರಿಷ್ಠ 26° ಕನಿಷ್ಠ 18°

ಮಂಗಳವಾರದ ಉಷ್ಣಾಂಶ 26° ಗರಿಷ್ಠ | 18° ಕನಿಷ್ಠ | ಬುಧವಾರ 26° : 17° | ಗುರುವಾರ 27° : 17° | ಶುಕ್ರವಾರ 28° : 17°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ

ರೌಡಿ 'ಆಟೊ' ನಾಗನ ಕೊಲೆ

ನೆಲಮಂಗಲ: ಪಾರ್ಟಿ ನಡೆಸಲು ರೌಡಿಯನ್ನು ಫಾರ್ಮ್ ಹೌಸ್‌ಗೆ ಕರೆಸಿಕೊಂಡು, ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದಾರೆ.

ನಾಗ ರಾಜ್ ಅಲಿಯಾಸ್ ಆಟೊ ನಾಗ (32) ಕೊಲೆ ಆದವರು.

ನಾಗ

ನಗರೂರಿನ ಬಾಲಾಜಿ ಫಾರ್ಮ್ ಹೌಸ್‌ನಲ್ಲಿ ಪಾರ್ಟಿ ಮಾಡುತ್ತಿದ್ದಾಗ ಹಣಕಾಸು ವಿಚಾರಕ್ಕೆ ನಾಗರಾಜ್ ಅವರನ್ನು 3ರಿಂದ 4 ಮಂದಿ ಸ್ನೇಹಿತರು ಕೊಲೆ ಮಾಡಿದ್ದಾರೆ. ಆರೋಪಿಗಳು ನಾಗರಾಜ್ ಅವರಿಗೆ ಮದ್ಯ ಕುಡಿಸಿದ್ದರು ಎಂದು ಮೂಲಗಳು ಹೇಳಿವೆ. ಲಗ್ಗೆರೆ ಮತ್ತು ಹುಲಿಯೂರು ದುರ್ಗ ಪೊಲೀಸ್ ಠಾಣೆ ರೌಡಿ ಪಟ್ಟಿಯಲ್ಲಿ ನಾಗರಾಜ್ ಹೆಸರು ಇದೆ. ಅರಿಶಿನಕುಂಟೆಯಲ್ಲಿ ನೆಲಸಿದ್ದ ನಾಗರಾಜ್ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಮಾದನಾಯಕನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಮರಕ್ಕೆ ಕಾರು ಡಿಕ್ಕಿ ಹೊಡೆಸಿ ಸ್ನೇಹಿತನ ಕೊಲೆ

ಕೃತ್ಯ ಎಸಗಿದ ಟೆಕಿ ಬಂಧನ • ಹೆಬ್ಬಗೋಡಿ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕಮ್ಮಸಂದ್ರದ ಆಟದ ಮೈದಾನದ ಬಳಿ, ಕಾರನ್ನು ಮರಕ್ಕೆ ಡಿಕ್ಕಿ ಹೊಡೆಸಿ ಸ್ನೇಹಿತನನ್ನು ಕೊಲೆ ಮಾಡಲಾಗಿದೆ.

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಹೋಬಳಿಯ ಎಲೆಕ್ಟ್ರಾನಿಕ್ ಸಿಟಿಯ ವೀರಸಂದ್ರದ ನಿವಾಸಿ ಪ್ರಶಾಂತ್ (33) ಕೊಲೆಯಾದವರು.

ಪ್ರಶಾಂತ್ ಅವರ ತಾಯಿ ಎಂ.ಅನು ಅವರು ನೀಡಿದ ದೂರಿನ ಮೇರೆಗೆ ವಿಜ್ಞಾನ ನಗರದ ನಿವಾಸಿ, ಸಾಫ್ಟ್‌ವೇರ್ ಎಂಜಿನಿಯರ್ ರೋಷನ್ ಹೆಗ್ಡೆ (36) ಅವರ ವಿರುದ್ಧ ಕೊಲೆ ಆರೋಪದಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಕಾರು ಚಾಲನೆ ಮಾಡುತ್ತಿದ್ದ ರೋಷನ್ ಹೆಗ್ಡೆಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ವಶಕ್ಕೆ ಪಡೆದುಕೊಳ್ಳಲಾಯಿತು. ಪ್ರಶಾಂತ್

ಎಂ.ಪ್ರಶಾಂತ್

ರೋಷನ್ ಹೆಗ್ಡೆ

ಅವರ ತಾಯಿ ನೀಡಿದ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಕಲಂ 103 ಅಡಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

ಅನು ಅವರಿಗೆ ಪ್ರತಾಪ್ ಹಾಗೂ ಪ್ರಶಾಂತ್ ಇಬ್ಬರು ಮಕ್ಕಳು. ಪ್ರತಾಪ್ ಅವರಿಗೆ ಮದುವೆಯಾಗಿದೆ. ಅನು ಅವರು ಎಂ–5 ಮಾಲ್ ಬಳಿ ಟೀ ಅಂಗಡಿ ನಡೆಸುತ್ತಿದ್ದಾರೆ. ಟೀ ಅಂಗಡಿಯಲ್ಲಿ ತಾಯಿಗೆ ಪ್ರಶಾಂತ್ ನೆರವು ನೀಡುತ್ತಿದ್ದರು. ಹೆಬ್ಬಗೋಡಿಯ ಕಮ್ಮಸಂದ್ರದಲ್ಲಿ ಜ.24ರಂದು ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿತ್ತು. ಪ್ರಶಾಂತ್ ಹಾಗೂ ಸ್ನೇಹಿತರು ಆ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದರು. ಅಂದು ಸಂಜೆ 6 ಗಂಟೆ ವೇಳೆಗೆ ಪಂದ್ಯಾವಳಿ ಮುಗಿದ ಕಾರಣ ಎಲ್ಲರೂ ಮನೆಗೆ ತೆರಳಿದ್ದರು. ಕ್ರಿಕೆಟ್‌ನಲ್ಲಿ ತಂಡ ಸೋತಿರುವುದಕ್ಕೆ ಪ್ರಶಾಂತ್ ಬೇಸರಗೊಂಡಿದ್ದರು. ತಾಯಿ ಜತೆಗೆ ಸ್ವಲ್ಪ ಸಮಯ ಮಾತನಾಡಿ ಅಂದು ಮನೆಯಲ್ಲಿ ಉಳಿದಿದ್ದರು ಎಂದು ಪೊಲೀಸರು ಹೇಳಿದರು.



ಕಾರು ಮರಕ್ಕೆ ಡಿಕ್ಕಿ ಹೊಡೆಸಿರುವ ದೃಶ್ಯ

ಜ.25ರಂದು ದಿನವಿಡೀ ಪ್ರಶಾಂತ್ ಮನೆಯಲ್ಲಿಯೇ ಇದ್ದರು. ಅಂದು ಸಂಜೆ ಪಾರ್ಟಿಗೆಂದು ಪ್ರಶಾಂತ್ ಅವರನ್ನು ರೋಷನ್ ಕರೆಸಿಕೊಂಡಿದ್ದರು. ರಾತ್ರಿ 7.30ರ ಸುಮಾರಿಗೆ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಾ ಪ್ರಶಾಂತ್ ಮನೆಯಿಂದ ಹೊರಕ್ಕೆ ಹೋಗಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪಾರ್ಟಿಗೆ ತೆರಳಿದ್ದಾಗ ಗಲಾಟೆ: ಕೆಲವು ಸ್ನೇಹಿತರು ಕ್ರೀಡಾಂಗಣದ ಒಂದು ಬದಿಯಲ್ಲಿ ಕುಳಿತು ಮದ್ಯಪಾನ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಪ್ರಶಾಂತ್ ಸಿಗರೇಟ್ ಹಚ್ಚಲು ರೋಷನ್ ಬಳಿ ಲೈಟರ್ ಕೇಳಿದ್ದರು. ಇದೇ ವಿಚಾರಕ್ಕೆ ಇವರಿಬ್ಬರ ನಡುವೆ ಜಗಳವಾಗಿತ್ತು. ಕೋಪದಲ್ಲಿ ಪ್ರಶಾಂತ್‌ಗೆ ರೋಷನ್ ಕೈಗಳಿಂದ ಹೊಡೆದಿದ್ದರು. ಸ್ಥಳದಲ್ಲಿದ್ದ ಸ್ನೇಹಿತರು ಜಗಳ ಬಿಡಿಸಿದ್ದರು. ನಂತರ, ರಾತ್ರಿ 8.30ರ ಸುಮಾರಿನಲ್ಲಿ ರೋಷನ್ ತನ್ನ ಕಾರು ಚಲಾಯಿಸಿಕೊಂಡು ಹೋಗಲು ಮುಂದಾಗಿದ್ದರು. ಆಗ, ಪ್ರಶಾಂತ್ ಕಾರಿನ ಬಳಿ ಹೋಗಿ ಡೋರ್ ಹಿಡಿದುಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಕಾರು ಮುಂದಕ್ಕೆ ಸಾಗಿದರೂ ಪ್ರಶಾಂತ್ ಅವರು ಡೋರ್ ಕೈಬಿಟ್ಟಿರಲಿಲ್ಲ ಎಂದು ಪೊಲೀಸರು ಹೇಳಿದರು.

ಫುಟ್‌ರೆಸ್ಟ್ ಮೇಲೆ ನಿಲ್ಲಿಸಿಕೊಂಡು ಕೃತ್ಯ: ನಂತರ ಟಾಟಾ ಸಫಾರಿ ಕಾರಿನ ಫುಟ್‌ರೆಸ್ಟ್ ಮೇಲೆ ಪ್ರಶಾಂತ್ ಅವರು ನಿಂತಿದ್ದರು. ಆಗ ಕಾರನ್ನು ಕಮ್ಮಸಂದ್ರದ ಆಟದ ಮೈದಾನದಿಂದ 400 ಮೀಟರ್ ಮುಂದಕ್ಕೆ ತೆಗೆದುಕೊಂಡು ಹೋಗಿ ಮರಕ್ಕೆ ಡಿಕ್ಕಿ ಹೊಡೆಸಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆ

ಘಟನೆಯ ದೃಶ್ಯಾವಳಿ ಕಾರಿನ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ದೃಶ್ಯಾವಳಿಯನ್ನು ಪಡೆದು, ತನಿಖೆ ನಡೆಸಲಾಗುತ್ತಿದೆ. ದೊಮ್ಮಲೂರಿನ ಆಟೊ ಡೆಸ್ಕ್ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ರೋಷನ್ ಹೆಗ್ಡೆ ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ರೋಷನ್ ವಿಜ್ಞಾನ ನಗರದಲ್ಲಿ ನೆಲಸಿದ್ದರು ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಟಿಕೆಟ್ ರಹಿತ ಪ್ರಯಾಣ 2,801 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಡಿಸೆಂಬರ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 2,801 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಡಿಸೆಂಬರ್‌ನಲ್ಲಿ 18,409 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದವರನ್ನು ಪತ್ತೆ ಹಚ್ಚಿ ಅವರಿಂದ ₹ 6,34,865 ದಂಡ ವಸೂಲಿ ಮಾಡಲಾಯಿತು. ಕರ್ತವ್ಯ ಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 1,748 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 250 ಪುರುಷ ಪ್ರಯಾಣಿಕರಿಗೆ ₹25,000 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ರೈಲಿಗೆ ತಾಗಿದ ಬಸ್: ತಪ್ಪಿದ ದುರಂತ

ಬೆಂಗಳೂರು: ಸಾದರಮಂಗಲದಲ್ಲಿ ನಿರ್ಲಕ್ಷ್ಯದಿಂದ ಹಿಂದಕ್ಕೆ ಚಲಾಯಿಸಿದ ಬಿಎಂಟಿಸಿ ಬಸ್‌ಗೆ ರೈಲು ತಾಗಿದ್ದು, ಬಸ್‌ನ ಹಿಂಭಾಗಕ್ಕೆ ಹಾನಿಯಾಗಿದೆ. ಬಸ್‌ನಲ್ಲಿ ಪ್ರಯಾಣಿಕರು ಇಲ್ಲದ ಕಾರಣ ದುರಂತ ತಪ್ಪಿದೆ.

ರೈಲಿನ ಹಳಿ ಇಲ್ಲಿ ರಸ್ತೆ ಅಕ್ಕಪಕ್ಕದಲ್ಲಿಯೇ ಹಾದು ಹೋಗಿದೆ. ಸಾದರಮಂಗಲದ ಬಿಎಂಟಿಸಿ ಘಟಕದಿಂದ (51ನೇ ಘಟಕ) ಕಾಡುಗೋಡಿಗೆ ಬಸ್ ಸೋಮವಾರ ಬೆಳಿಗ್ಗೆ 9.15ರ ವೇಳೆಗೆ ಹೊರಟಿತು. ಅಲ್ಲೇ ಮುಂದೆ ರೈಲ್ವೆ ಕಾಮಗಾರಿ ನಡೆಯುತ್ತಿದ್ದು, ಅಲ್ಲಿ ಬಸ್ ಅನ್ನು ಹಿಂದಕ್ಕೆ ತೆಗೆಯುವ ವೇಳೆ ಚಾಲಕನ ನಿರ್ಲಕ್ಷ್ಯದಿಂದಾಗಿ ಬಸ್ ಹಳಿ ಕಡೆಗೆ ಹೆಚ್ಚು ಹಿಂದಕ್ಕೆ ಸಾಗಿತ್ತು. ಅದೇ ಸಮಯದಲ್ಲಿ ಎಸ್‌ಎಂವಿಟಿ ಬೆಂಗಳೂರು– ಟಾಟಾನಗರ (ಜಾರ್ಖಂಡ್) ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಬಂದಿದ್ದು, ಬಸ್‌ಗೆ ತಾಗಿದೆ.

ಬಿಎಂಟಿಸಿ ವಿಭಾಗೀಯ ನಿರ್ವಾಹಕ ಎಂಜಿನಿಯರ್ ಸ್ಥಳಕ್ಕೆ ಭೇಟಿ ನೀಡಿದ್ದರು. ಸುರಕ್ಷತೆಗೆ ಅಪಾಯ ತರುವ ಘಟನೆ ಇದು ಎಂದು ಪರಿಗಣಿಸಿ ನೈರುತ್ಯ ರೈಲ್ವೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

12 ಮಂದಿ ವಿರುದ್ಧ 'ಕೋಕಾ ಅಸ್ತ್ರ' ಪ್ರಯೋಗಿಸಲು ಮುಂದಾಗಿರುವ ಪೊಲೀಸರು

ಪ್ರಾಬಲ್ಯ ಸಾಧಿಸಲು ರೌಡಿಶೀಟರ್ ಶಬ್ಬೀರ್ ಕೊಲೆ

ಪ್ರಜಾವಾಣಿ ವಾರ್ತೆ

ಶಬ್ಬೀರ್, ಇಮ್ರಾನ್, ಉಮ್ರೇಜ್, ನದೀಂ, ನಯಾಜ್, ನೂರುಲ್ಲಾ, ಅಲಿ, ಸಲ್ಮಾನ್ ಖಾನ್, ಆಶೀಕ್, ಇಸ್ಮಾಯಿಲ್, ಖಲೀಂ, ಮುಬಾರಕ್, ಸಿದ್ದಿಕ್ಕಿ

ಬೆಂಗಳೂರು: ಕೋರಮಂಗಲ ಪೊಲೀಸ್ ಠಾಣೆಯ ರೌಡಿಶೀಟರ್ ಶಬ್ಬೀರ್ ಅಲಿಯಾಸ್ ಸೈಯದ್ ಶಬ್ಬೀರ್ ಅವರ ಕೊಲೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ. ಈ ಹಿಂದೆ 8 ಮಂದಿಯನ್ನು ಬಂಧಿಸಿದ್ದ ಬಂಡೇಪಾಳ್ಯ ಠಾಣೆಯ ಪೊಲೀಸರು ಮತ್ತೆ ನಾಲ್ವರನ್ನು ಬಂಧಿಸಿದ್ದಾರೆ.

ಎಲ್ಲ ಆರೋಪಿಗಳ ವಿರುದ್ಧವೂ 'ಕೋಕಾ' ಕಾಯ್ದೆ (ಕರ್ನಾಟಕ ಸಂಘಟಿತ ಅಪರಾಧ ತಡೆ ಕಾಯ್ದೆ) ಅಸ್ತ್ರ ಪ್ರಯೋಗಿಸಲು ಪೊಲೀಸರು ಮುಂದಾಗಿದ್ದಾರೆ.

ಜ.12ರಂದು ಆಟೊದಲ್ಲಿ ತೆರಳುತ್ತಿದ್ದ ಶಬ್ಬೀರ್ ಅವರನ್ನು ಆರೋಪಿಗಳು ಅಡ್ಡಗಟ್ಟಿ ಖಾರದಪುಡಿ ಎರಚಿ ಕೊಲೆ ಮಾಡಿದ್ದರು. ಕೊಲೆ ಪ್ರಕರಣ ಸಂಬಂಧ ಮಂಗಮ್ಮನಪಾಳ್ಯದ ನೂರ್ (33), ನದೀಂ(34), ಸಲ್ಮಾನ್ ಖಾನ್ ಅಲಿಯಾಸ್ ಸಲ್ಮಾನ್ (27), ಅಲಿ (29), ಸೈಯದ್ ಇಸ್ಮಾಯಿಲ್(30), ಸಿದ್ದಿಕ್ 30), ಖಲೀಂ (32), ಉಮ್ರೇಜ್ (26), ಇಮ್ರಾನ್ (33), ನವಾಜ್ (28), ಸಲ್ಮಾನ್ ಖಾನ್ ಅಲಿಯಾಸ್ ಆಶೀಕ್ (27) ಹಾಗೂ ಸೈಯದ್ ಮುಬಾರಕ್ ಬಂಧಿತರು.

ಸೈಯದ್ ಶಬ್ಬೀರ್ ಅವರಿಗೆ ಅಪರಾಧ ಹಿನ್ನೆಲೆ ಇತ್ತು. ಅವರ ವಿರುದ್ಧ ಕೋರಮಂಗಲ, ಪರಪ್ಪನ ಅಗ್ರಹಾರ, ಕೋಣನಕುಂಟೆ, ಬಂಡೇಪಾಳ್ಯ ಹಾಗೂ ಆಗುಂಬೆ, ಸಾಗರ, ಹಿರೀಸಾವೆ, ಚನ್ನರಾಯಪಟ್ಟಣ ಸೇರಿದಂತೆ ಹಲವು ಠಾಣೆಗಳಲ್ಲಿ 15ಕ್ಕೂ ಹೆಚ್ಚು ಅಪರಾಧ ಪ್ರಕರಣಗಳು ದಾಖಲಾಗಿದ್ದವು.

ಶಬ್ಬೀರ್ ಅವರು ಜ.12ರ ರಾತ್ರಿ ಸ್ನೇಹಿತರೊಂದಿಗೆ ಆಟೊದಲ್ಲಿ ಮಂಗಮ್ಮನಪಾಳ್ಯಕ್ಕೆ ತೆರಳುತ್ತಿದ್ದರು. ಆಗ ದುಷ್ಕರ್ಮಿಗಳ ತಂಡವು ಆಟೊ ಅಡ್ಡಗಟ್ಟಿ ಖಾರದ ಪುಡಿ ಎರಚಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು ಎಂದು ಪೊಲೀಸರು ಹೇಳಿದರು.

ಹಫ್ತಾ ವಸೂಲಿ ಮತ್ತು ಮಂಗಳಮ್ಮಪಾಳ್ಯದ ಸುತ್ತಮುತ್ತ ತಮ್ಮ ಪ್ರಾಬಲ್ಯ ಸಾಧಿಸಲು ಹೊಂಚು ಹಾಕಿ ಶಬ್ಬೀರ್ ಅವರನ್ನು ಕೊಲೆ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

'ಕೊಲೆಯಾದ ಶಬ್ಬೀರ್ ಅವರು ಗುಜರಿ ಅಂಗಡಿ ಮಾಲೀಕರಿಂದ ಹಾಗೂ ಸಣ್ಣಪುಟ್ಟ ವ್ಯಾಪಾರಿಗಳಿಂದ ನಿಯಮಿತವಾಗಿ ಹಫ್ತಾ ವಸೂಲಿ ಮಾಡುತ್ತಿದ್ದರು. ಇದರಿಂದ ಸ್ಥಳೀಯರು ತೊಂದರೆ ಅನುಭವಿಸುತ್ತಿದ್ದರು. ಅಲ್ಲದೇ ಪ್ರಾರ್ಥನಾ ಮಂದಿರದ ಪಕ್ಕದಲ್ಲಿದ್ದ ಆರೋಪಿ ನೂರ್ ಅಲಿಯಾಸ್ ಸನ್ನಿ ಎಂಬಾತನ ಸಹೋದರಿಯ ಜಾಗದ ಮೇಲೆ ಶಬ್ಬೀರ್ ಕಣ್ಣು ಹಾಕಿದ್ದರು. ನನಗೆ ಆಜಾಗ ಬಿಟ್ಟುಕೊಡದೆ ಇದ್ದರೆ ನಾನೇ ಇಲ್ಲಿ ಕಾಂಪೌಂಡ್ ಹಾಕುತ್ತೇನೆ ಎಂದು ಧಮ್ಕಿ ಹಾಕಿದ್ದರು. ಶಬ್ಬೀರ್ ಕಿರುಕುಳ ಮಿತಿಮೀರಿದಾಗ, ಸನ್ನಿ ಮತ್ತು ಅವರ 11 ಮಂದಿ ಸಹಚರರು ಶಬ್ಬೀರ್ ಅವರನ್ನು ಮುಗಿಸಲು ಗ್ಯಾರೇಜ್‌ನಲ್ಲಿ ಕುಳಿತು ಸಂಚು ರೂಪಿಸಿದ್ದರು' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ದಲಿತರೊಬ್ಬರು ಮುಖ್ಯಮಂತ್ರಿ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ದಲಿತರೊಬ್ಬರು ಮುಖ್ಯಮಂತ್ರಿ ಆಗಬೇಕು. ಆಗ ಮಾತ್ರ ಕರ್ನಾಟಕಕ್ಕೆ ವಿಮೋಚನೆ ಸಿಗಲಿದೆ' ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೇಳಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕ ಹಾಗೂ ದಲಿತ ಸಂಘರ್ಷ ಸಮಿತಿ (ಭೀಮವಾದ) ಸೋಮವಾರ ಆಯೋಜಿಸಿದ್ದ ಸಂವಿಧಾನ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ರೈತನೊಬ್ಬನ ಮಗನನ್ನು ಪ್ರಧಾನಿ ಹಾಗೂ ಕುರಿ ಕಾಯುವವನ ಮಗನನ್ನು ಮುಖ್ಯಮಂತ್ರಿ ಮಾಡಿದ್ದಾಯಿತು. ದಲಿತರೊಬ್ಬರನ್ನು ಮುಖ್ಯಮಂತ್ರಿ ಮಾಡುವುದು ನಮ್ಮ ಗುರಿ. ಈ ಹೋರಾಟಕ್ಕೆ ನೀವೆಲ್ಲರೂ ಬೆಂಬಲ ನೀಡಬೇಕು' ಎಂದು ಕರೆ ನೀಡಿದರು.

'ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಶೇ 60ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇವೆ. ದಲಿತ ಸಚಿವರು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ' ಎಂದರು.

ಆರ್‌ಪಿಐ ರಾಜ್ಯ ಘಟಕದ ಅಧ್ಯಕ್ಷ ಆರ್. ಮೋಹನ್‌ರಾಜ್, ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಎಂ. ಗೋಪಿನಾಥ್, ಸ್ವಪ್ನಾ ಮೋಹನ್ ಉಪಸ್ಥಿತರಿದ್ದರು.

ಒಂದೂವರೆ ವರ್ಷದಲ್ಲಿ ರೋಪ್ ವೇ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿಶ್ವವಿಖ್ಯಾತ ನಂದಿ ಬೆಟ್ಟಕ್ಕೆ ರೋಪ್ ವೇ ನಿರ್ಮಿಸುವ ವಿಚಾರವಾಗಿ ಈ ಹಿಂದಿನಿಂದ ಸರ್ಕಾರ ಯಾವುದೇ ಕ್ರಮವಹಿಸಿರಲಿಲ್ಲ. ರೋಪ್ ವೇ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆಗಳನ್ನು ನಮ್ಮ ಸರ್ಕಾರ ಪರಿಹರಿಸಿದೆ. ಒಂದೂವರೆ ವರ್ಷದೊಳಗೆ ರೋಪ್ ವೇ ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಭರವಸೆ ನೀಡಿದರು.

ಇಲ್ಲಿನ ಸರ್. ಎಂ. ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ 77ನೇ ಗಣ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ನಂದಿ ಕ್ರಾಸ್‌ನಲ್ಲಿ ನೂತನ ಹೂವಿನ ಮಾರುಕಟ್ಟೆ ನಿರ್ಮಾಣಕ್ಕಾಗಿ 20 ಎಕರೆ ಜಮೀನು ಮಂಜೂರಾಗಿದೆ. ಈ ಜಮೀನಿನಲ್ಲಿ ₹140 ಕೋಟಿ ಅಂದಾಜು ವೆಚ್ಚದಲ್ಲಿ ನೂತನ ಹೂವಿನ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಲು ನೀಲ ನಕ್ಷೆಯನ್ನು ಸಿದ್ಧಪಡಿಸಲಾಗಿದೆ ಎಂದು ಅವರು ವಿವರಿಸಿದರು.

ನೈರುತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: E-GSU-ELE-2025-26-OT-6A

ದಿನಾಂಕ: 20.01.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಕಂಟೋನ್ಮೆಂಟ್ ಯಾರ್ಡ್‌ನಲ್ಲಿ ಪ್ರಸ್ತಾವಿತ ಪಾಯಿಂಟ್‌ಗಳ ಮತ್ತು ಕ್ರಾಸಿಂಗ್‌ಗಳ ಸ್ಥಳಾಂತರಗಳಿಗೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು.	ರೂ. 1,55,30,559.48

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.02.2026, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರ್ರಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಗತಿ ಶಕ್ತಿ ಘಟಕ ಬೆಂಗಳೂರು

PUB/845/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಅತ್ಯಾಚಾರಕ್ಕೆ ಯತ್ನಿಸಿ ಟೆಕಿ ಕೊಲೆ: ರಹಸ್ಯ ಬಯಲು

ಬೆಂಗಳೂರು: ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸುಬ್ರಹ್ಮಣ್ಯ ಲೇಔಟ್‌ನಲ್ಲಿ ಟೆಕಿ ಕೊಲೆ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ವಿಚಾರಣೆ ವೇಳೆ ಆರೋಪಿ ಸತ್ಯ ಬಿಚ್ಚಿಟ್ಟಿದ್ದಾನೆ.

'ಟೆಕಿ ನೆಲಸಿದ್ದ ಮನೆಯ ಪಕ್ಕದ ನಿವಾಸಿ, ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣದ ಅರಸುನಗರ ನಿವಾಸಿ ಕರ್ನಲ್ ಕುರ್ಯೆ (18) ಎಂಬಾತನನ್ನು ರಾಮಮೂರ್ತಿನಗರ ಠಾಣೆಯ ಪೊಲೀಸರು ಬಂಧಿಸಿ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಿದ್ದರು. ಆರಂಭದಲ್ಲಿ ಟೆಕಿಯ ಮೇಲೆ ದೌರ್ಜನ್ಯ ನಡೆಸಿಲ್ಲ ಎಂದು ಹೇಳಿದ್ದ. ವಿಚಾರಣೆ ಮುಂದುವರಿಸಿದಾಗ ಅತ್ಯಾಚಾರ ಮಾಡಲು ಯತ್ನಿಸಿರುವುದಾಗಿ ಒಪ್ಪಿಕೊಂಡಿದ್ದಾನೆ' ಎಂದು ಮೂಲಗಳು ಹೇಳಿವೆ.

'34 ವರ್ಷದ ಟೆಕಿಯನ್ನು ಆರೋಪಿ ಪ್ರೀತಿಸುತ್ತಿದ್ದ. ಪ್ರತಿನಿತ್ಯ ಮನೆಯ ಮಹಡಿ ಮೇಲೆ ಹೋಗಿ ಯುವತಿಯ ಚಲನವಲನ ಗಮನಿಸುತ್ತಿದ್ದ. ಅವರು ಕೆಲಸಕ್ಕೆ ಹೋಗುವಾಗಲೂ ಹಿಂಬಾಲಿಸುತ್ತಿದ್ದ ಯುವಕ, ಕೆಲಸ ಮುಗಿಸಿ ವಾಪಸ್ ಬರುವ ವೇಳೆ ಕಾದು ಕೂರುತ್ತಿದ್ದ' ಎಂಬುದು ಗೊತ್ತಾಗಿದೆ.

ಕರ್ನಲ್ ಕುರ್ಯೆ

ಜ.3ರ ರಾತ್ರಿ ಟೆಕಿಯ ಮನೆಗೆ ನುಗ್ಗಿ ಅತ್ಯಾಚಾರಕ್ಕೆ ಪ್ರಯತ್ನ ಪಟ್ಟಿದ್ದಾಗಿ ವಿಚಾರಣೆಯಲ್ಲಿ ಆರೋಪಿ ಬಾಯ್ಬಿಟ್ಟಿದ್ದಾನೆ ಎಂದು ಮೂಲಗಳು ಹೇಳಿವೆ. ದೌರ್ಜನ್ಯ ಎಸಗಲು ಮುಂದಾದ ಮೇಲೆ ಟೆಕಿ ಜೋರಾಗಿ ಕಿರುಚಿಕೊಂಡಿದ್ದರು. ಬಾಯಿಯನ್ನು ಗಟ್ಟಿಯಾಗಿ ಮುಚ್ಚಿದ್ದ ಆರೋಪಿ, ಬಳಿಕ ಕತ್ತು ಹಿಸುಕಿ ಕೊಲೆ ಮಾಡಿದ್ದ. ಆ ಬಳಿಕ ಟಿಶ್ಯು ಪೇಪರ್ ಹಾಸಿಗೆ ಮೇಲಿಟ್ಟು ಬೆಂಕಿ ಹಚ್ಚಿದ್ದ. ಬಾಲ್ಕನಿ ಡೋರ್ ಮೂಲಕವೇ ಜಿಗಿದು ಪರಾರಿಯಾಗಿದ್ದ. ಅಗ್ನಿ ಅವಘಡದಿಂದಾಗಿ ಟೆಕಿ ಮೃತಪಟ್ಟಿದ್ದಾರೆ ಎಂದು ಬಿಂಬಿಸಲು ಪ್ರಯತ್ನಿಸಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಯುವತಿ ಸುಬ್ರಹ್ಮಣ್ಯ ಲೇಔಟ್‌ನ ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಕೊಠಡಿಯಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಭಾವಿಸಲಾಗಿತ್ತು. ಮೃತ ಯುವತಿ ಸ್ನೇಹಿತ ಕೆ.ರೋಹಿತ್ ಅವರ ದೂರು ಆಧರಿಸಿ, ಪೊಲೀಸರು ತನಿಖೆ ಕೈಗೊಂಡು, ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಸತ್ಯ ಗೊತ್ತಾಗಿದೆ.

ವರದಕ್ಷಿಣೆ ಕಿರುಕುಳ: ಪತ್ನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರದಕ್ಷಿಣೆ ಕಿರುಕುಳದಿಂದ ಮನನೊಂದ ಕೀರ್ತಿ (24) ಎಂಬುವವರು ಯಡಿಯೂರಿನ ಮನೆಯಲ್ಲಿ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿ ಗುರುಪ್ರಸಾದ್ ಹಾಗೂ ಅವರ ಕುಟುಂಬದ ಸದಸ್ಯರ ವಿರುದ್ಧ ವರದಕ್ಷಿಣೆ ಕಿರುಕುಳ, ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತುಮಕೂರು ಜಿಲ್ಲೆ ಮಧುಗಿರಿಯ ಕೀರ್ತಿ ಅವರು 2023ರ ನವೆಂಬರ್‌ನಲ್ಲಿ ಗುರುಪ್ರಸಾದ್ ಅವರನ್ನು ಮದುವೆ ಆಗಿದ್ದರು. ಜಿಮ್ ತರಬೇತುದಾರರಾಗಿ ಗುರುಪ್ರಸಾದ್ ಅವರು ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ನಗರದ ಬಡಾವಣೆಯೊಂದರಲ್ಲಿ ಹೊಸ ಮನೆ ನಿರ್ಮಿಸಲು ಗುರುಪ್ರಸಾದ್ ಆರಂಭಿಸಿದ್ದರು. ಆಗ, ₹10 ಲಕ್ಷ ಕೊಡುವಂತೆ ಕೀರ್ತಿ ಅವರ ಪೋಷಕರಲ್ಲಿ ಗುರುಪ್ರಸಾದ್ ಕೇಳಿಕೊಂಡಿದ್ದರು. ಕೀರ್ತಿ ಪೋಷಕರು, 2025ರ ಡಿಸೆಂಬರ್‌ನಲ್ಲಿ ₹8 ಲಕ್ಷ ಕೊಟ್ಟಿದ್ದರು. ಆ ನಂತರವೂ ಆತ ತವರು ಮನೆಯಿಂದ ಹೆಚ್ಚಿನ ಹಣವನ್ನು ತರುವಂತೆ ಪತ್ನಿಗೆ ಕಿರುಕುಳ ಕೊಡುತ್ತಿದ್ದರು ಎನ್ನಲಾಗಿದೆ.



ಕೀರ್ತಿ ಹಾಗೂ ಗುರುಪ್ರಸಾದ್

ಪತಿ ಮತ್ತು ಅವರ ಪೋಷಕರ ಕಿರುಕುಳದಿಂದ ಮನನೊಂದಿದ್ದ ಕೀರ್ತಿ, ಮನೆಯಲ್ಲಿ ನೇಣು ಹಾಕಿಕೊಂಡಿದ್ದಾರೆ. ನೇಣು ಬಿಗಿದ ಸ್ಥಿತಿಯಲ್ಲಿ ಕೀರ್ತಿ ಅವರ ಶವ ಪತ್ತೆ ಆಗಿದೆ. ಪುತ್ರಿ ಸಾವಿಗೆ ಅಳಿಯ ಗುರುಪ್ರಸಾದ್, ಆತನ ಮತ್ತು ಕುಟುಂಬದ ಸದಸ್ಯರ ವರದಕ್ಷಿಣೆ ಕಿರುಕುಳವೇ ಕಾರಣವೆಂದು ಕೀರ್ತಿಯ ತಂದೆ ದೂರು ಕೊಟ್ಟಿದ್ದಾರೆ ಎಂದು ಬನಶಂಕರಿ ಠಾಣೆ ಪೊಲೀಸರು ಹೇಳಿದರು.

ಮದುವೆಗೆ ₹ 35 ಲಕ್ಷ ಖರ್ಚು: '₹35 ಲಕ್ಷ ಖರ್ಚು ಮಾಡಿ ಗುರುಪ್ರಸಾದ್ ಜತೆ ಅದ್ಧೂರಿಯಾಗಿ ಮದುವೆ ಮಾಡಿದ್ದೆವು. ಮದುವೆ ಸಂದರ್ಭದಲ್ಲಿ ಗುರುಪ್ರಸಾದ್‌ಗೆ ವರದಕ್ಷಿಣೆಯಾಗಿ ಹಣ ಹಾಗೂ ಚಿನ್ನಾಭರಣ ಕೊಟ್ಟಿದ್ದೆವು'.

'ಆ ನಂತರವೂ ಗುರುಪ್ರಸಾದ್ ಮತ್ತು ಆತನ ಕುಟುಂಬದ ಸದಸ್ಯರು ಕಿರುಕುಳ ಕೊಡುತ್ತಿದ್ದರು. ಈ ಬಗ್ಗೆ ಮಗಳು ಮಾಹಿತಿ ನೀಡಿದ್ದಳು. ಹಿಂದೆಯೂ ಗುರುಪ್ರಸಾದ್ ಅವರ ಜತೆ ಸಂಧಾನ ನಡೆಸಲಾಗಿತ್ತು. ಮತ್ತೆ ಕಿರುಕುಳ ನೀಡಿದ್ದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಕೀರ್ತಿ ಅವರ ತಂದೆ ದೂರಿನಲ್ಲಿ ಆರೋಪಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

MSME LOAN Available for Any Start-Ups Companies And Existing Running Companies Hotels,Shops Establishments Etc. Contact- 7204995189.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

ಸ್ವಾತಂತ್ರ್ಯ ಉದ್ಯಾನ ಸುತ್ತ ಸಂಚಾರ ಮಾರ್ಪಾಡು

ಬೆಂಗಳೂರು: ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಶೇಷಾದ್ರಿರಸ್ತೆಯ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ (ಜನವರಿ 27) ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ಪ್ರತಿಭಟನೆ ಇರುವುದರಿಂದ ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಲಾಗಿದೆ. ವಾಹನ ಸವಾರರು ಪರ್ಯಾಯ ರಸ್ತೆಗಳನ್ನು ಬಳಸಲು ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿರ್ಬಂಧ

- ಶಾಂತಾಲಾ ಜಂಕ್ಷನ್ ಮತ್ತು ಖೋಡೆ ವೃತ್ತದಿಂದ ಆನಂದ ರಾವ್ ಮೇಲ್ಸೇತುವೆ, ಜೆಡಿಎಸ್‌ನ ಹಳೆಯ ಕಚೇರಿ, ಶೇಷಾದ್ರಿ ರಸ್ತೆಯಿಂದ ಫ್ರೀಡಂ ಪಾರ್ಕ್ ಕಡೆಗೆ
- ಮೈಸೂರು ಬ್ಯಾಂಕ್ ಜಂಕ್ಷನ್ ಕಡೆಯಿಂದ ಚಾಲುಕ್ಯ ವೃತ್ತದ ಕಡೆಗೆ
- ಚಾಲುಕ್ಯ ವೃತ್ತದಿಂದ ಮೈಸೂರು ಬ್ಯಾಂಕ್ ಕಡೆಗೆ
- ಕಾಳಿದಾಸ ರಸ್ತೆಯಲ್ಲಿ ಕನಕದಾಸ ಜಂಕ್ಷನ್ ಕಡೆಯಿಂದ ಫ್ರೀಡಂ ಪಾರ್ಕ್ ಕಡೆಗೆ
- ಮೌರ್ಯ/ಸುಬ್ಬಣ್ಣ ಜಂಕ್ಷನ್‌ನಿಂದ ಸ್ವಾತಂತ್ರ್ಯ ಉದ್ಯಾನದ ಕಡೆಗೆ

ಪರ್ಯಾಯ ಮಾರ್ಗ

- ಲುಲು ಮಾಲ್, ಕೆಎಫ್‌ಎಂ, ರಾಜೀವ್ ಗಾಂಧಿ ವೃತ್ತ, ಮಂತ್ರಿ ಮಾಲ್, ಸ್ವಸ್ತಿಕ್ ವೃತ್ತ, ಶೇಷಾದ್ರಿಪುರ, ನೆಹರೂ ವೃತ್ತ, ರೇಸ್ ಕೋರ್ಸ್ ಮೇಲ್ಸೇತುವೆ ಮೂಲಕ ಸಂಚರಿಸಬಹುದು
- ಕೆ.ಜಿ ರಸ್ತೆ, ಮೈಸೂರು ಬ್ಯಾಂಕ್ ಜಂಕ್ಷನ್, ಸಾಗರ್ ಜಂಕ್ಷನ್, ಕೆ.ಜಿ ಜಂಕ್ಷನ್, ಎಲೈಟ್, ಟಿ.ಬಿ ರಸ್ತೆ, ಕೆಎಫ್‌ಎಂ, ರಾಜೀವ್ ಗಾಂಧಿ ವೃತ್ತ, ಸ್ವಸ್ತಿಕ್, ನೆಹರೂ ವೃತ್ತ, ರೇಸ್ ಕೋರ್ಸ್ ಮೇಲ್ಸೇತುವೆ ರಸ್ತೆಯ ಮೂಲಕ ವಾಹನಗಳು ಸಂಚರಿಸಬಹುದು
- ಚಾಲುಕ್ಯ ವೃತ್ತ, ಎಲ್‌ಆರ್‌ಡಿ, ರಾಜಭವನ ರಸ್ತೆ, ಇನ್‌ಫೆಂಟ್ರಿ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದಿಂದಸಂಚರಿಸಬಹುದು
- ಸುಬ್ಬಣ್ಣ ಜಂಕ್ಷನ್‌ನಿಂದ ಬಲಕ್ಕೆ ತಿರುವು ಪಡೆದು ಆನಂದ್ ರಾವ್ ಸರ್ಕಲ್ ಕಡೆಗೆ ಸಂಚರಿಸಬಹುದಾಗಿದೆ

ಡ್ರ್ಯಾಗನ್‌ನಿಂದ ಕೇಕ್ ಕತ್ತರಿಸಿದ ಇಬ್ಬರ ಸೆರೆ

ತುಮಕೂರು: ನಗರದಲ್ಲಿ ಡ್ರ್ಯಾಗನ್‌ನಿಂದ ಕೇಕ್ ಕತ್ತರಿಸಿದ ಇಬ್ಬರು ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕರನ್ನು ಬಂಧಿಸಿ, ಬಾಲಕರ ವೀಕ್ಷಣಾಲಯಕ್ಕೆ ಕಳುಹಿಸಲಾಗಿದೆ. ಶಿರಾಗೇಟ್‌ನ ಶ್ರೀದೇವಿ ಆಸ್ಪತ್ರೆ ಬಳಿಯ ಸಾರ್ವಜನಿಕ ರಸ್ತೆಯಲ್ಲಿ ಡ್ರ್ಯಾಗನ್ ಮೂಲಕ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದರು. ಸಂಭ್ರಮಾಚರಣೆ ವಿಡಿಯೊಗಳನ್ನು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದರು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ನಗರದಲ್ಲಿ ಇಂದು

'ರಾಜ್ಯಸತ್ಯವ್ರತ ಅಥವಾ ಶನಿಪ್ರಭಾವ' ನಾಟಕ ಪ್ರದರ್ಶನ: ಉದ್ಘಾಟನೆ: ಜ್ಯೋತಿಲಿಂಗಪ್ಪ ಎಂ.ಎಸ್., ಅಧ್ಯಕ್ಷತೆ: ಬಿ. ಮುನಿರಾಜು, ಅತಿಥಿಗಳು: ಉಮೇಶ್, ಎಂ.ಆರ್. ಲೋಕೇಶ್, ಸಂತೋಷ್ ಎಂ.ಜಿ., ಮುನಿರಾಜು ಸಿ., ಸ್ವಾತಿ, ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಶ್ರೀನಿವಾಸ ಸಮುದಾಯ ಭವನ, ಕೆಇಬಿ ಕಚೇರಿ ಮುಂಭಾಗ, ನೆಲಮಂಗಲ, ಮಧ್ಯಾಹ್ನ 3ರಿಂದ

'ರಂಗಕರ್ಮಿ ಟೆಲಿಕಾಂ ದತ್ತಾತ್ರೇಯ-ನೆನಪು' ರಂಗ ಸಂಗೀತ, ನೃತ್ಯರೂಪಕ, ಗೌರವ ಸನ್ಮಾನ, ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಸಿ.ಕೆ. ಗುಂಡಣ್ಣ, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಎನ್.ಆರ್. ಹೆಗಡೆ, ರಾಧಾಕೃಷ್ಣ ಹೆಗಡೆ, ಶ್ರೀನಂದ್ ಪೈಡ್ಪೆಟ್, ರಂಗ ಗೌರವ ಸ್ವೀಕರಿಸುವವರು: ಸಿ.ವಿ. ಮಂಜುನಾಥ್, ಅಮ್ಮಸಂದ್ರ ಸುರೇಶ್, 'ಪರಸಂಗದ ಗೆಂಡೆತಿಮ್ಮ' ನಾಟಕ ಪ್ರದರ್ಶನ, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

ನಾಟಕೋತ್ಸವ ಉದ್ಘಾಟನೆ: ಕೆ.ಎಂ. ಗಾಯಿತ್ರಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಕರಿಯಪ್ಪ, ಲಕ್ಷ್ಮೀಚಂದ್ರಶೇಖರ್, ಕೆ. ರಾಮಕೃಷ್ಣಯ್ಯ, ಶಶಿಧರ ಭಾರಿಘಾಟ್, ಬಿ.ಎಸ್. ವಿದ್ಯಾರಣ್ಯ, 'ಮಹಾತ್ಮರ ಬರವಿಗಾಗಿ' ನಾಟಕ ಪ್ರದರ್ಶನ: ನಿರ್ದೇಶನ: ಎನ್.ವಿ. ಶ್ರೀಕಾಂತ್, ಆಯೋಜನೆ: ಯಕ್ಷ ರಂಗಾಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ಎಸ್. ಸುದರ್ಶನ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ದಾಸರ ಪದಗಳ ಗಾಯನ: ಅನಂತ ಕುಲಕರ್ಣಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ, ಆರ್.ಕೆ. ಲೇಔಟ್, ಪದ್ಮನಾಭನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ದ್ವೇಷ ಭಾಷಣ ನಿಷೇಧ ಮಸೂದೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ ಭಾಷಣ ನಿಷೇಧ ಮಸೂದೆಗೆ ಒಪ್ಪಿಗೆ ಸೂಚಿಸದಂತೆ ಆಗ್ರಹಿಸಿ ವಿಶ್ವ ಹಿಂದೂ ಪರಿಷದ್ ಕರ್ನಾಟಕ ದಕ್ಷಿಣ ಪ್ರಾಂತದ ಪದಾಧಿಕಾರಿಗಳು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮಸೂದೆಯು ಅಸಂವಿಧಾನಿಕವಾಗಿದೆ ಎಂದು ಪದಾಧಿಕಾರಿಗಳು ಆಕ್ರೋಶ ಹೊರಹಾಕಿದರು.

ಸಂವಿಧಾನದ ಅಡಿಯಲ್ಲಿ ತಮಗೆ ನೀಡಲಾಗಿರುವ ಅಧಿಕಾರವನ್ನು ಬಳಸಿ ಮಸೂದೆಗೆ ತಡೆಯೊಡ್ಡಬೇಕು. ಅಲ್ಲದೇ ರಾಷ್ಟ್ರಪತಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರಾಂತ ಕಾರ್ಯದರ್ಶಿ ಬಿ.ಇ.ಸುರೇಶ, ಪ್ರಾಂತ ಕಾನೂನು ಪ್ರಮುಖ ಪ್ರಕಾಶ್ ಶೆಟ್ಟಿ, ಕಶ್ಯಪ ಮತ್ತು ಮುನಿರಾಜು ಹಾಜರಿದ್ದರು.

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ತೆರೆ: ₹2.74 ಕೋಟಿ ವರಮಾನ ಸಂಗ್ರಹ

8.10 ಲಕ್ಷ ಜನರಿಂದ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿದ್ದ 'ತೇಜಸ್ವಿ ವಿಸ್ಮಯ' ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನಕ್ಕೆ ಸೋಮವಾರ ತೆರೆಬಿತ್ತು. 13 ದಿನ ನಡೆದ ಈ ಫಲಪುಷ್ಪ ಪ್ರದರ್ಶನಕ್ಕೆ ಒಟ್ಟು 8.10 ಲಕ್ಷ ಜನರು ಭೇಟಿ ನೀಡಿದ್ದು, ₹2.46 ಕೋಟಿ ಪ್ರವೇಶ ಶುಲ್ಕ ಸಂಗ್ರಹವಾಗಿದೆ.

ಗಾಜಿನ ಮನೆಯ ಆವರಣದಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಜೀವನ ಗಾಥೆಯನ್ನು ಬಣ್ಣ–ಬಣ್ಣದ ಹೂವುಗಳಲ್ಲಿ ಅನಾವರಣ ಮಾಡಲಾಗಿತ್ತು. ಜನವರಿ 14ರಿಂದ 26ರವರೆಗೆ ನಡೆದ ಈ ಫಲಪುಷ್ಪ ಪ್ರದರ್ಶನವನ್ನು ಕಣ್ತುಂಬಿಕೊಳ್ಳಲು ನಿತ್ಯವೂ ಸಾವಿರಾರು ಜನರು ಭೇಟಿ ನೀಡಿದ್ದರು.

ಬಣ್ಣ ಬಣ್ಣದ ಹೂವುಗಳ ಮಧ್ಯದಲ್ಲಿ ತಲೆ ಎತ್ತಿರುವ ಬೃಹತ್ ಬೆಟ್ಟ, ಅದರ ಮೇಲೆ ತೇಜಸ್ವಿ ಅವರ ಪುತ್ಥಳಿ, ಧುಮ್ಮಿಕ್ಕುತ್ತಿರುವ ಕೃತಕ ಜಲಪಾತ, ಪುಷ್ಪಗಳಲ್ಲಿ ಅರಳಿರುವ 'ನಿರುತ್ತರ'ದ ಮನೆ ನೋಡಗರನ್ನು ಸೆಳೆಯಿತು. ತೇಜಸ್ವಿ ಅವರು ಸಂಗೀತ, ಚಿತ್ರಕಲೆ, ಬೇಟೆ, ಕೃಷಿ, ಪಕ್ಷಿ ಛಾಯಾಗ್ರಹಣ, ಹೋರಾಟ, ಸಾಹಿತ್ಯ, ಯಂತ್ರ ಹಾಗೂ ಕಂಪ್ಯೂಟರ್ ಆಸಕ್ತಿಗಳನ್ನು ಬಿಂಬಿಸುವ ಆಕರ್ಷಕ ಹಾಗೂ ಅರ್ಥಪೂರ್ಣ ವ್ಯಂಗ್ಯಚಿತ್ರಗಳನ್ನಾಧರಿಸಿದ ಪ್ರತಿಮೆಗಳು ಹೂವಿನ ಲೋಕದಲ್ಲಿ ಅನಾವರಣ ಮಾಡಲಾಗಿತ್ತು. ಇದನ್ನು ವೀಕ್ಷಿಸಲು ದೇಶ ವಿದೇಶಗಳಿಂದ ಜನರು ಬಂದಿದ್ದರು.

ಕುವೆಂಪು ಹಾಗೂ ತೇಜಸ್ವಿ ಅವರ ಕುಟುಂಬದ ಸದಸ್ಯರು ಸೋಮವಾರ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದರು.

₹2.74 ಕೋಟಿ ವರಮಾನ ಸಂಗ್ರಹ: 'ಅಂತಿಮ ದಿನವಾದ ಸೋಮವಾರ 1,94,165 ಜನರು ಫಲಪುಷ್ಪ ಪ್ರದರ್ಶನ ವೀಕ್ಷಿಸಿದರು. ₹ 65.01 ಲಕ್ಷ ಪ್ರವೇಶ ಶುಲ್ಕ ಸಂಗ್ರಹವಾಗಿದೆ. 13 ದಿನಗಳ ಈ ಫಲಪುಷ್ಪ ಪ್ರದರ್ಶನಕ್ಕೆ 8,10,973 ಜನರು ಭೇಟಿ ನೀಡಿದ್ದು, ಪ್ರವೇಶ ಶುಲ್ಕ, ಮಳಿಗೆ ಬಾಡಿಗೆ, ಪ್ರದರ್ಶನ ಪ್ರವೇಶ ಶುಲ್ಕ ಸೇರಿ ಒಟ್ಟು ₹2.74 ಕೋಟಿ ವರಮಾನ ಸಂಗ್ರಹವಾಗಿದೆ' ಎಂದು ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದ್ದಾರೆ.

ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಸೋಮವಾರ ಬಂದಿದ್ದ ಜನ —ಪ್ರಜಾವಾಣಿ ಚಿತ್ರ

ದೇಶಪ್ರೇಮದ ಗೌರವ, ಮಕ್ಕಳ ಸಾಂಸ್ಕೃತಿಕ ಕಲರವ

77ನೇ ಗಣರಾಜ್ಯೋತ್ಸವ: ಆಕರ್ಷಕ ಪಥಸಂಚಲನ, ಸಂಗೀತದ ನಿನಾದ • ನೃತ್ಯ ರೂಪದಲ್ಲಿ ಗ್ರಾಮೀಣ ಸಂಸ್ಕೃತಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಾಣೆಕ್ ಷಾ ಮೈದಾನದಲ್ಲಿ ನಡೆದ 77ನೇ ಗಣರಾಜ್ಯೋತ್ಸವ ಸಮಾರಂಭದ ಪಥ ಸಂಚಲನ, ಸಾಂಸ್ಕೃತಿಕ ಚಟುವಟಿಕೆಗಳು ಗಮನ ಸೆಳೆದವು. ದೇಶಪ್ರೇಮದ ಗೌರವ ಜತೆಗೆ ಮಕ್ಕಳ ಪ್ರತಿಭೆ ಅನಾವರಣಕ್ಕೆ ವೇದಿಕೆಯೂ ಆಯಿತು.

ಪೊಲೀಸ್, ಭಾರತೀಯ ವಾಯು ಸೇನೆ, ಸೇವಾದಳ, ವಾದ್ಯ ತಂಡ, ಎನ್‌ಸಿಸಿ, ಎನ್‌ಎಸ್‌ಎಸ್ ಜತೆಗೆ ವಿದ್ಯಾರ್ಥಿ ತಂಡದವರು ಆಕರ್ಷಕ ಪಥಸಂಚಲನದಲ್ಲಿ ಹೆಜ್ಜೆ ಹಾಕಿದರು.

ಸಮರ್ಥನಂ ಶಾಲೆ, ರಮಣ ಮಹರ್ಷಿ ಅಂಧರ ಕೇಂದ್ರದ ಮಕ್ಕಳು ಆತ್ಮವಿಶ್ವಾಸದಿಂದಲೇ ಪಥಸಂಚಲನದಲ್ಲಿ ಪಾಲ್ಗೊಂಡರು. ಅತಿಥಿಗಳಾಗಿ ಬಂದಿದ್ದ ತಮಿಳುನಾಡು ರಾಜ್ಯ ಪೊಲೀಸ್ ಪಡೆ ಸೇರಿ 40ಕ್ಕೂ ಹೆಚ್ಚು ತಂಡಗಳಿಂದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ವಂದನೆ ಸ್ವೀಕರಿಸಿದರು. 1,326 ಮಂದಿ 15 ನಿಮಿಷದ ಪಥ ಸಂಚಲನದಲ್ಲಿ ಭಾಗಿಯಾದರು.

ಬಳಿಕ ಹೆರೋಹಳ್ಳಿಯ ಸಂಯುಕ್ತ ಪದವಿಪೂರ್ವ ಕಾಲೇಜಿನ 650 ವಿದ್ಯಾರ್ಥಿಗಳು ಸಂಕ್ರಾಂತಿ ಸಡಗರಕ್ಕೆ ನೃತ್ಯ ರೂಪ ನೀಡಿ ಗ್ರಾಮೀಣ ಸಂಸ್ಕೃತಿ ಅನಾವರಣಗೊಳಿಸಿದರು. ಬಾಗಲಗುಂಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಭಾರತದ ಏಕೀಕರಣ ಹಾಗೂ ನವಭಾರತ ವೈಭವವನ್ನು ಕಟ್ಟಿಕೊಟ್ಟರೆ, ಸಾಮೂಹಿಕ ಮೇಳದಲ್ಲಿ ಪೊಲೀಸ್ ವಾದ್ಯಗಳ ಸಂಗೀತ ನಿನಾದವೂ ಗಮನ ಸೆಳೆಯಿತು.

ಬಹುಮಾನ ವಿತರಣೆ: ಪಥ ಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಸುಮಾರು 20 ತಂಡಗಳಿಗೆ ವಿವಿಧ ವಿಭಾಗಗಳಲ್ಲಿ ಬಹುಮಾನ ವಿತರಿಸಲಾಯಿತು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ನಗರ ಪೊಲೀಸ್ ಕಮೀಷನರ್ ಸೀಮಾಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜಿ.ಜಗದೀಶ್ ಹಾಜರಿದ್ದರು.

ಕಾರಾಗೃಹ ವಾಸಿಗಳ ಬೇಕರಿ ಉತ್ಪನ್ನ: ಕೇಂದ್ರ ಕಾರಾಗೃಹದ ಕೈದಿಗಳು ತಯಾರಿಸಿದ ಬೇಕರಿ ಉತ್ಪನ್ನಗಳನ್ನು ರಾಜ್ಯಪಾಲರು, ಮುಖ್ಯಮಂತ್ರಿ ಸಹಿತ ಗಣ್ಯರು ಹಾಗೂ ಅತಿಥಿಗಳು ಸವಿದಿದ್ದು ವಿಶೇಷವಾಗಿತ್ತು.

ಬಾಗಲಗುಂಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಭಾರತದ ಏಕೀಕರಣ ಮತ್ತು ನವ ಭಾರತ ಕುರಿತ ನೃತ್ಯ ರೂಪಕ ಪ್ರದರ್ಶಿಸಿದರು —ಚಿತ್ರಗಳು: ರಂಜು ಪಿ

ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹೆರೋಹಳ್ಳಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಂಕ್ರಾಂತಿ ಸಂಭ್ರಮ ನೃತ್ಯ ಪ್ರದರ್ಶಿಸಿದರು

ಬೆಂಗಳೂರಿನ ಅಭಿವೃದ್ಧಿಗೆ ಒತ್ತು

‘ಬೆಂಗಳೂರು ಮಹಾನಗರದ ಅಭಿವೃದ್ಧಿಗೆ ₹1.5 ಲಕ್ಷ ಕೋಟಿಯ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಿದೆ’ ಎಂದು ತಮ್ಮ ಭಾಷಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಉಲ್ಲೇಖಿಸಿದರು.

‘ಮೆಟ್ರೊ ಸಂಪರ್ಕ ಜಾಲ ವ್ಯವಸ್ಥಿತವಾಗಿ ವಿಸ್ತರಿಸಲಾಗುತ್ತಿದೆ. 110 ಗ್ರಾಮಗಳಿಗೆ ಕಾವೇರಿ 5ನೇ ಹಂತದ ಯೋಜನೆಯಡಿ ನೀರು ಸರಬರಾಜು ಆರಂಭಿಸಲಾಗಿದೆ. ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಪ್ರಗತಿಯೂ ಶುರುವಾಗಿದ್ದು, ನಗರ ಸಾರಿಗೆ ವ್ಯವಸ್ಥೆ ಸುಧಾರಿಸಲಾಗುತ್ತಿದೆ’ ಎಂದರು.

‘ಮಹಿಳೆಯರ ಸುರಕ್ಷತೆ ವಿಚಾರದಲ್ಲಿ ಬೆಂಗಳೂರು ನಗರ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ ಎನ್ನುವುದನ್ನು ಸಮೀಕ್ಷೆಗಳು ಹೇಳುತ್ತಿವೆ’ ಎಂದು ತಿಳಿಸಿದರು.

ಮಿತ್ರ ಶಾಲೆ ವಿದ್ಯಾರ್ಥಿಗಳ ಪಥಸಂಚಲನ ಗಮನಸೆಳೆಯಿತು

ಎನ್‌ಸಿಸಿ ಬ್ಯಾಂಡ್‌ಗೆ ಟ್ರೋಫಿ

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಮೈದಾನದಲ್ಲಿ ಸೋಮವಾರ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಥಮ ಬಹುಮಾನ ಪಡೆದ ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಎನ್‌ಸಿಸಿ ಬ್ಯಾಂಡ್ ತಂಡದ ಕೆಡೆಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ರೋಫಿ ನೀಡಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು

‘ಸಂವಿಧಾನಕ್ಕೆ ಅಗೌರವ ತೋರಿಸುವವರು ದೇಶದ್ರೋಹಿಗಳು’

‘ಎಲ್ಲರನ್ನು ಒಳಗೊಂಡ ಸಮಾಜ ನಿರ್ಮಾಣವೇ ಸಂವಿಧಾನ ಹಾಗೂ ಸರ್ಕಾರದ ಆಶಯ. ಸಂವಿಧಾನವೇ ನಮ್ಮ ಧರ್ಮ. ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುವುದೇ ನಮ್ಮ ರಾಜಧರ್ಮ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ‘ಸಂವಿಧಾನ ಉಳಿಸುವ ಸಲುವಾಗಿಯೇ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೊ ಹೆಸರಿನಲ್ಲಿ ಹೆಜ್ಜೆ ಹಾಕಿದವರು ನಾವು. ಸಂವಿಧಾನಕ್ಕೆ ಗೌರವ ಕೊಟ್ಟವನು ನಿಜವಾದ ದೇಶಭಕ್ತ. ಸಂವಿಧಾನಕ್ಕೆ ಅಗೌರವ ತೋರಿಸುವವರು ದೇಶದ್ರೋಹಿಗಳು’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್. ಎಂ. ರೇವಣ್ಣ ಮತ್ತಿತರರು ಇದ್ದರು.

ಕೆನರಾ ಬ್ಯಾಂಕ್ ಆಯೋಜಿಸಿದ್ದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹರ್ದೀಪ್ ಸಿಂಗ್ ಅಹ್ಲುವಾಲಿಯಾ ಅವರು ಧ್ವಜಾರೋಹಣ ನೆರವೇರಿಸಿ, ವಂದಿಸಿದರು

ಚಿಟಿಕೆ ಸುದ್ದಿ

ತಲೆಕೆಳಗಾಗಿ ಹಾರಾಡಿದ ರಾಷ್ಟ್ರಧ್ವಜ

ಮಂಚೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಗಣರಾಜ್ಯೋತ್ಸವದಂದು ತಹಶೀಲ್ದಾರ್ ಪೂರ್ಣಿಮಾ ಧ್ವಜಾರೋಹಣ ಮಾಡಿದಾಗ ರಾಷ್ಟ್ರಧ್ವಜ ತಲೆ ಕೆಳಗಾಗಿ ಹಾರಿತು

ಗೌರಿಬಿದನೂರು: ಮಂಚೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ತಾಲ್ಲೂಕು ಆಡಳಿತದಿಂದ ಸೋಮವಾರ ನಡೆದ 77ನೇ ಗಣರಾಜ್ಯೋತ್ಸವದ ವೇಳೆ ರಾಷ್ಟ ಧ್ವಜ ತಲೆಕೆಳಗಾಗಿ ಹಾರಾಡಿದೆ

ತಹಶೀಲ್ದಾರ್ ಪೂರ್ಣಿಮಾ ಧ್ವಜಾರೋಹಣ ಮಾಡುವ ವೇಳೆ ರಾಷ್ಟ್ರ ಧ್ವಜವು ತಲೆಕೆಳಗಾಗಿ ಹಾರಾಡಿದೆ. ನಂತರ ಎಚ್ಚೆತ್ತುಕೊಂಡ ಶಿಕ್ಷಕರು, ಆಡಳಿತ ಸಿಬ್ಬಂದಿ ರಾಷ್ಟ್ರಧ್ವಜವನ್ನು ಸರಿಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ತಹಶೀಲ್ದಾರ್ ಪೂರ್ಣಿಮಾ, ‘ಗಣರಾಜ್ಯೋತ್ಸವದ ದಿನ ಧ್ವಜಾರೋಹಣ ನಡೆಯುವ ವೇಳೆ ರಾಷ್ಟ್ರ ಧ್ವಜ ತಲೆಕೆಳಗಾಗಿ ಹಾರಿದೆ. ಈ ಕುರಿತು ಕ್ಷಮೆಯಾಚಿಸುತ್ತೇನೆ. ಪ್ರತಿ ಜಯಂತಿ ಹಾಗೂ ರಾಷ್ಟ್ರೀಯ ಹಬ್ಬಗಳು ಮಾಡಬೇಕಾದರೆ ಪೂರ್ವಭಾವಿ ಸಭೆ ಕರೆಯುತ್ತೇವೆ. ಎಲ್ಲ ಇಲಾಖೆಗಳಿಗೆ ತಮ್ಮದೇ ಆದ ಜವಾಬ್ದಾರಿ ನೀಡಿರುತ್ತೇವೆ. ಗಣರಾಜ್ಯೋತ್ಸವ ಎರಡು ದಿನದ ಹಿಂದೆಯೂ ಕೂಡ ಪೂರ್ವಭ್ಯಾಸ ಮಾಡಲಾಗಿತ್ತು. ಆದಾಗ್ಯೂ, ಕೂಡ ಕಾರ್ಯಲೋಪ ಆಗಿದೆ. ಶಿಕ್ಷಣ ಇಲಾಖೆ ಅವರಿಗೆ ಫ್ಲಾಗ್ ಕೋಡ್ ಆಫ್ ಇಂಡಿಯಾ ಪ್ರಕಾರ ಜವಾಬ್ದಾರಿ ವಹಿಸಿದ್ದು, ಇದರಲ್ಲಿ ಅವರು ವಿಫಲರಾಗಿದ್ದಾರೆ. ನಿಯಮಾನುಸಾರ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ’ ಎಂದರು.

ಬಿಜೆಪಿ ರಾಜ್ಯ ಘಟಕದ ಕಾರ್ಯಾಲಯದ ಆವರಣದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಮತ್ತು ಇತರ ನಾಯಕರು ಭಾಗವಹಿಸಿದ್ದರು.

‘ದ್ವೇಷ ಹರಡಲು ರಾಜ್ಯ ಸರ್ಕಾರದ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಆರ್ಥಿಕ ಪ್ರಗತಿ ಅದ್ಭುತ ರೀತಿಯಲ್ಲಿ ವಿಕಸಿತವಾಗಿ ಭಾರತವು ಜಾಗತಿಕ ಶಕ್ತಿಯಾಗಿ ರೂಪುಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಸೂತ್ರಗಳೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

‘ಸುಮಾರು 50 ವರ್ಷಗಳಿಗೂ ಹೆಚ್ಚು ಕಾಲ ದೇಶದ ಆಡಳಿತ ನಡೆಸಿದವರು ಸಂವಿಧಾನಕ್ಕೆ ಅಪಚಾರ ಮಾಡಿದ್ದನ್ನು ನಾವು ನೋಡಿದ್ದೇವೆ. ಸಂವಿಧಾನ ಬದ್ಧವಾದ ವೇದಿಕೆಯನ್ನು ರಾಜ್ಯಪಾಲರ ಮೂಲಕ ದುರ್ಬಳಕೆ ಮಾಡುವ ಪ್ರಯತ್ನ ಮಾಡಿದ್ದಾರೆ’ ಎಂದು ತಿಳಿಸಿದರು.

‘ರಾಜ್ಯದಲ್ಲಿ ರಾಜ್ಯಪಾಲರ ಭಾಷಣದ ಮೂಲಕ ದ್ವೇಷ ಹರಡುವ ಪ್ರಯತ್ನ ಮಾಡಿದ್ದಾರೆ. ಇದೊಂದು ಕೆಟ್ಟ ಸಂಪ್ರದಾಯವಾಗಿದ್ದು, ಇದನ್ನು ಇಡೀ ರಾಜ್ಯದ ಜನತೆ ಗಟ್ಟಿಧ್ವನಿಯಲ್ಲಿ ಖಂಡಿಸಬೇಕಾಗಿದೆ’ ಎಂದೂ ಹೇಳಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಮಾತನಾಡಿ, ‘ನಮ್ಮದೇ ಆದ ಆರ್ಥಿಕ ನೀತಿ, ರಾಜಕೀಯ ನೀತಿ, ಸಾಮಾಜಿಕ-ಶೈಕ್ಷಣಿಕ, ಧಾರ್ಮಿಕ, ಕೈಗಾರಿಕಾ ನೀತಿಯನ್ನು ನಾವು ಅಳವಡಿಸಿಕೊಂಡಿದ್ದೇವೆಯೇ ಎಂಬುದರ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಕನಸನ್ನು ನನಸು ಮಾಡುವ ದಿಸೆಯಲ್ಲಿ ಪ್ರಧಾನಿ ಮೋದಿ ಶ್ರಮಿಸುತ್ತಿದ್ದಾರೆ’ ಎಂದರು.

‘ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆ, ಕಾನೂನು-ಸುವ್ಯವಸ್ಥೆ ಸಂಪೂರ್ಣವಾಗಿ ಹಳಿ ತಪ್ಪಿದೆ. ಇದನ್ನು ನಾವೆಲ್ಲರೂ ಗಂಭೀರವಾಗಿ ಯೋಚಿಸಬೇಕಿದೆ. ರಾಜ್ಯದಲ್ಲೂ ಬದಲಾವಣೆ ತರುವ ಪ್ರಯತ್ನವನ್ನು ಎಲ್ಲರೂ ಒಗ್ಗಟ್ಟಾಗಿ ಮಾಡಬೇಕಾಗಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಸ್. ನಂದೀಶ್ ರೆಡ್ಡಿ, ಪಕ್ಷದ ಮುಖಂಡರಾದ ವೈ.ಎ.ನಾರಾಯಣಸ್ವಾಮಿ, ಅಬ್ದುಲ್ ಅಜೀಂ, ಡಾ. ಲಕ್ಷ್ಮೀ ಅಶ್ವಿನಿ ಗೌಡ, ಪ್ರಕಾಶ್ ಶೇಷರಾಘವಾಚಾರ್ ಇತರರು ಇದ್ದರು.

ನಗರದ ವಿವಿಧೆಡೆ ಗಣರಾಜ್ಯೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ವಿವಿಧೆಡೆ ಸಂಭ್ರಮದಿಂದ ಗಣರಾಜ್ಯೋತ್ಸವ ಆಚರಿಸಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯ: ವಿಶ್ವವಿದ್ಯಾಲಯಗಳು ಉತ್ತಮ ಶಿಕ್ಷಣ ಮತ್ತು ಕೌಶಲದ ಜೊತೆ ನೈತಿಕತೆ, ಸಾಮಾಜಿಕ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳಿಗೆ ಕಲಿಸುವಂತಾಗಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಜಯಕರ ಎಸ್.ಎಂ. ತಿಳಿಸಿದರು.

ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ‘ತ್ಯಾಗ, ಬಲಿದಾನಗಳಿಂದ ನಿರ್ಮಾಣವಾದ ಭಾರತ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆದರ್ಶಗಳಿಂದ ಜೀವಂತವಾಗಿದೆ’ ಎಂದು ತಿಳಿಸಿದರು.

ಮೌಲ್ಯಮಾಪನ ಕುಲಸಚಿವ ಸಿ.ಎಸ್. ಕರಿಗಾರ್, ವಿತ್ತಾಧಿಕಾರಿ ಸುನೀತಾ, ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಡೀನ್‌ಗಳು, ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಗರ ವಿಶ್ವವಿದ್ಯಾಲಯ: ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್. ಎ. ಅಹಮದ್ ಅವರು ಮಾತನಾಡಿ, ‘ಶಿಕ್ಷಣದ ಮಟ್ಟ ಹೆಚ್ಚಾಗುತ್ತಿದ್ದರೂ ಮಾನವೀಯ ಮೌಲ್ಯಗಳಲ್ಲಿ ಕುಸಿತ ಕಂಡುಬರುತ್ತಿರುವುದು ಆತಂಕಕಾರಿ ವಿಷಯ’ ಎಂದು ತಿಳಿಸಿದರು.

ಕುಲಪತಿ ಬಿ.ರಮೇಶ್, ಕುಲಸಚಿವ ಎ.ನವೀನ್ ಜೋಸೆಫ್, ಪ್ರಸಾರಾಂಗ ನಿರ್ದೇಶಕ ತಾಂಡವಗೌಡ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿಯಲ್ಲಿ ಗಣರಾಜ್ಯೋತ್ಸವ ಪ್ರಯುಕ್ತ ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿದೇವಿ ಕೆ. ಧ್ವಜಾರೋಹಣ ನೆರವೇರಿಸಿದರು.

ಮಹಾತ್ಮ ಗಾಂಧೀಜಿ, ಬಿ.ಆರ್. ಅಂಬೇಡ್ಕರ್ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು. ನಿಗಮದ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ರೈಲ್ವೆ: ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವತಿಯಿಂದ ಎಂ.ಜಿ. ಕಾಲೊನಿ ರೈಲ್ವೆ ಮೈದಾನದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಆಶುತೋಷ್‌ಕುಮಾರ್ ಸಿಂಗ್ ಧ್ವಜಾರೋಹಣ ನೆರವೇರಿಸಿದರು.

2025 ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ, ನೈಋತ್ಯ ರೈಲ್ವೆಯ ಒಟ್ಟು ಆದಾಯ ₹6,939 ಕೋಟಿಗಳಾಗಿದ್ದು ಇದು ಕಳೆದ ವರ್ಷಕ್ಕಿಂತ ಶೇ 16ರಷ್ಟು ಹೆಚ್ಚಾಗಿದೆ. ಪ್ರಯಾಣಿಕರ ಆದಾಯ ₹2,543 ಕೋಟಿ ಹಾಗೂ ಸರಕು ಸಾಗಣೆ ಆದಾಯವು ₹3,976 ಕೋಟಿಗಳಾಗಿದೆ ಎಂದು ವಿವರಿಸಿದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಪರೀಕ್ಷಿತ್ ಮೋಹನ್ ಪೂರಿಯಾ, ಪ್ರವೀಣ್ ಕಾತರಕಿ, ಹಿರಿಯ ವಿಭಾಗೀಯ ಭದ್ರತಾ ಆಯುಕ್ತ ಶ್ರೇಯಾನ್ಸ್ ಚಿಂಚ್ವಾಡೆ, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮ, ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಘಟನೆಯ ಬೆಂಗಳೂರು ವಿಭಾಗದ ಅಧ್ಯಕ್ಷೆ ರೀನಾ ಸಿಂಗ್ ಉಪಸ್ಥಿತರಿದ್ದರು.

ಜಿಕೆವಿಕೆ ಆವರಣದಲ್ಲಿ 77ನೇ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕುಲಪತಿ ಎಸ್. ವಿ. ಸುರೇಶ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ಮೇಜರ್ ಎಂ. ರಘು ರಾಮರೆಡ್ಡಿ ಅವರನ್ನು ಸನ್ಮಾನಿಸಲಾಯಿತು.

ಗಣರಾಜ್ಯೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ರವೀಂದ್ರ ಕಲಾ ಕ್ಷೇತ್ರದಲ್ಲಿ ಸೋಮವಾರ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೂಪುರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ಕಲಾವಿದರು ‘ಸತ್ಯಮೇವ ಜಯತೆ’ ಕಥಕ್ ನೃತ್ಯ ಪ್ರಸ್ತುತ ಪಡಿಸಿದರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಗಣರಾಜ್ಯೋತ್ಸವದ ಅಂಗವಾಗಿ ಎಂಜಿನಿಯರಿಂಗ್, ವೈದ್ಯಕೀಯ ಹಾಗೂ ವಿವಿಧ ಪದವಿ ವ್ಯಾಸಂಗ ಮಾಡುತ್ತಿರುವ 43 ವಿದ್ಯಾರ್ಥಿಗಳಿಗೆ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್. ಶಿವಣ್ಣ ಮಳವಳ್ಳಿ ಅವರು ಲ್ಯಾಪ್‌ಟಾಪ್ ವಿತರಿಸಿದರು

ಜಿಬಿಎ ಕೇಂದ್ರ ಕಚೇರಿಯಲ್ಲಿ ಆಚರಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕೇಂದ್ರ ಕಚೇರಿ ಆವರಣದಲ್ಲಿ ಜಿಬಿಎ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ಧ್ವಜಾರೋಹಣ ನೆರವೇರಿಸಿದರು.

ಮಹಾತ್ಮಗಾಂಧಿ ಹಾಗೂ ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಅರ್ಪಿಸಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕೆ. ಹರೀಶ್ ಕುಮಾರ್, ನಗರ ಯೋಜನಾ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್, ಜಂಟಿ ಆಯುಕ್ತೆ ಲಕ್ಷ್ಮಿದೇವಿ, ಆಡಳಿತ ಉಪ ಆಯುಕ್ತ ರವೀಂದ್ರ ಭಾಗವಹಿಸಿದ್ದರು.

ವಿವಿಧ ನಗರಪಾಲಿಕೆ ಕಚೇರಿ ಆವರಣಗಳಲ್ಲಿ ಗಣರಾಜ್ಯೋತ್ಸವ ಆಯಾ ಪಾಲಿಕೆ ಆಯುಕ್ತರ ನೇತೃತ್ವದಲ್ಲಿ ನಡೆಯಿತು.

‘ಆಮಿಷಕ್ಕೆ ಒಳಗಾಗದೇ ಮತ ಚಲಾಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘18 ವರ್ಷ ತುಂಬಿದ ಎಲ್ಲರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಕಡ್ಡಾಯವಾಗಿ ಸೇರಿಸಿ, ಯಾವುದೇ ಆಮಿಷ, ಒತ್ತಡಗಳಿಗೆ ಒಳಗಾಗದೇ ಮತ ಚಲಾಯಿಸಬೇಕು’ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ತಿಳಿಸಿದರು.

ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಭಾನುವಾರ ಆಯೋಜಿಸಿದ್ದ 16ನೇ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಅವರು ಮಾತನಾಡಿದರು. ‘ಮತದಾನದ ದಿನ ಹಕ್ಕು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ವವನ್ನು, ನಮ್ಮ ದೇಶವನ್ನು ರಕ್ಷಣೆ ಮಾಡಬೇಕು’ ಎಂದರು.

ರಾಜ್ಯದ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಮಾತನಾಡಿ, ‘ರಾಜ್ಯದಲ್ಲಿ ಈಗಾಗಲೇ 18 ವರ್ಷ ತುಂಬಿದವರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ಕ್ರಮ ವಹಿಸಲಾಗಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯಾ ಜಿಲ್ಲೆಗಳಲ್ಲಿ ವ್ಯವಸ್ಥಿತವಾಗಿ ಚಟುವಟಿಕೆ ನಡೆಸಲಾಗಿದೆ’ ಎಂದರು.

ಜಿಲ್ಲಾಧಿಕಾರಿಗಳಾದ ಶುಭಾ ಕಲ್ಯಾಣ್, ಶಿಲ್ಪಾನಾಗ್, ವಿಜಯ ಮಹಾಂತೇಶ ದಾನಮ್ಮನವರ, ಜಿ. ಜಗದೀಶ್, ಬಿ. ಸುಶೀಲ, ಸುರೇಶ್ ಇಟ್ನಾಳ ಅವರನ್ನು ಮತ್ತು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ, ತಹಶೀಲ್ದಾರ್, ವಿವಿಧ ಹಂತದ ಅಧಿಕಾರಿಗಳು, ಬಿಎಲ್‌ಒಗಳನ್ನು ಗೌರವಿಸಲಾಯಿತು.

‘ಹೆಬ್ಬಾಗಿಲು ಊರಿನ ಇತಿಹಾಸದ ಪ್ರತೀಕ’

ಪೀಣ್ಯ ದಾಸರಹಳ್ಳಿ: ‘ಹಿಂದೆ ಗ್ರಾಮಗಳು ಇದ್ದಂತಹ ಕಾಲದಲ್ಲಿ ಅಲ್ಲಿನ ಇತಿಹಾಸ, ಗ್ರಾಮ ದೇವತೆ, ವಿಶೇಷ ಆಚಾರ ವಿಚಾರ, ಸಂಸ್ಕೃತಿಯ ಪ್ರತೀಕವಾಗಿ ಇರುತ್ತಿದ್ದ ಹೆಬ್ಬಾಗಿಲು ಈಗಲೂ ಹಲವು ಕಡೆ ಬಳಕೆಯಲ್ಲಿವೆ’ ಎಂದು ಶಾಸಕ ಎಸ್.ಮುನಿರಾಜು ತಿಳಿಸಿದರು.

ನೆಲಗದರನಹಳ್ಳಿ ಮುಖ್ಯರಸ್ತೆಯ ಬೆಲ್ಮಾರ್ ಬಡಾವಣೆ ಹೆಬ್ಬಾಗಿಲು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ,' ಒಂದು ಬಡಾವಣೆ ಎಂದರೆ ಅಲ್ಲಿ ಲಕ್ಷಾಂತರ ಮನೆಗಳಿರುತ್ತವೆ. ಅಲ್ಲಿ ಜಾತಿ, ಮತ, ಭೇದಭಾವವಿಲ್ಲದೆ ಎಲ್ಲರೂ ಒಗ್ಗಟ್ಟಾಗಿ ಐಕ್ಯತೆಯಿಂದ ಸಹಬಾಳ್ವೆ ನಡೆಸಬೇಕು. ಏನೇ ಸಮಸ್ಯೆಗಳಿದ್ದರೂ ಒಗ್ಗಟ್ಟಾಗಿ ಚರ್ಚಿಸಿ ಬಗೆಹರಿಸಿಕೊಳ್ಳುವ ಕೆಲಸ ಮಾಡಬೇಕು' ಎಂದರು.

ಇದೇ ವೇಳೆ ಊರ ದೇವರಾದ ಆಂಜನೇಯ ಸ್ವಾಮಿಯನ್ನು ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ಗ್ರಾಮಕ್ಕೆ ಕರೆ ತರಲಾಯಿತು.

ಹೂಡಿಕೆ ಮಾಡಲು ಡಿಜಿಟಲ್ ಅಪ್ಲಿಕೇಶನ್‌ಗಳಿಂದ ₹80 ಲಕ್ಷ ಸಾಲ ಮಾಡಿದ್ದ ಯುವಕ

‘ಷೇರು ವ್ಯಸನ’: ಗುಣಪಡಿಸಿದ ನಿಮ್ಹಾನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ವ್ಯವಹಾರ ಮಾಡುವ ಉತ್ಸಾಹದಲ್ಲಿ ₹80 ಲಕ್ಷ ಸಾಲ ಮಾಡಿ ಖಿನ್ನತೆಗೆ ಒಳಗಾಗಿದ್ದ 29 ವರ್ಷದ ಯುವಕನಿಗೆ ನಿಮ್ಹಾನ್ಸ್ ವೈದ್ಯರು ಚಿಕಿತ್ಸೆ ನೀಡಿ ‘ವ್ಯಸನ’ಮುಕ್ತಗೊಳಿಸಿದ್ದಾರೆ. ‘ಷೇರು ವ್ಯವಹಾರದ ವ್ಯಸನ’ ಕೂಡ ಗುಣಪಡಿಸಬಹುದಾದ ಮಾನಸಿಕ ಕಾಯಿಲೆ ಎಂದು ಸಾಬೀತುಪಡಿಸಿದ್ದಾರೆ.

ಮೇಲ್ಮಧ್ಯಮ ಕುಟುಂಬದ ಯುವಕ, ನಾಲ್ಕು ವರ್ಷಗಳ ಹಿಂದೆ ಉಪ ಆದಾಯ ಗಳಿಸಲು ಮೊಬೈಲ್ ಟ್ರೇಡಿಂಗ್ ಅಪ್ಲಿಕೇಶನ್‌ಗಳಲ್ಲಿ ಹುಡುಕಾಟ ಆರಂಭಿಸಿದ್ದರು. ಸಣ್ಣ ಹೂಡಿಕೆ ಮಾಡುತ್ತಿದ್ದ ಅವರು ಕೆಲವೇ ಸಮಯದಲ್ಲಿ ಹೆಚ್ಚಿನ ಅಪಾಯ ಇರುವ ಇಂಟ್ರಾಡೇ, ಫ್ಯೂಚರ್ಸ್ ಆ್ಯಂಡ್ ಆಪ್ಷನ್ಸ್ (ಎಫ್ ಆ್ಯಂಡ್ ಒ) ವ್ಯಾಪಾರದಲ್ಲಿ ಹೂಡಿಕೆ ಮಾಡಲು ಶುರು ಮಾಡಿದ್ದರು. ಮಾರುಕಟ್ಟೆಯ ಏರಿಳಿತಗಳನ್ನು ಮೇಲ್ವಿಚಾರಣೆ ಮಾಡುತ್ತ ಗಂಟೆಗಟ್ಟಲೆ ಅದರಲ್ಲೇ ಮುಳುಗಿ ಹೋಗುತ್ತಿದ್ದರು. ವ್ಯವಹಾರದಿಂದ ಹೊರಗೆ ಇರುವ ಸಮಯದಲ್ಲಿ ಅವರು ತೀವ್ರ ಚಡಪಡಿಕೆ, ಆತಂಕಕ್ಕೆ ಒಳಗಾಗುತ್ತಿದ್ದರು ಎಂದು ನಿಮ್ಹಾನ್ಸ್ ವೈದ್ಯರು ತಿಳಿಸಿದ್ದಾರೆ.

ಷೇರು ವ್ಯವಹಾರ ನಿಯಂತ್ರಣ ತಪ್ಪಿ ನಷ್ಟ ಉಂಟಾದಾಗ ಇನ್ನಷ್ಟು ಹೂಡಿಕೆ ಮಾಡಲು ಡಿಜಿಟಲ್ ಸಾಲ ಅಪ್ಲಿಕೇಶನ್‌ಗಳತ್ತ ತಿರುಗಿದ್ದರು. ಅವರು ಒಟ್ಟು ₹80 ಲಕ್ಷ ಸಾಲ ತೆಗೆದುಕೊಂಡು ಹೂಡಿಕೆ ಮಾಡಿದ್ದರು.

ಈ ವ್ಯಸನವು ಅವರನ್ನು ಸಾಮಾಜಿಕವಾಗಿ ದೂರವಾಗಿರುವಂತೆ ಮಾಡಿತ್ತು. ಒಂಟಿಯಾಗಿರುವುದು, ನಿದ್ರೆ ಬಾರದಿರುವುದು, ಆರ್ಥಿಕ ನಷ್ಟವನ್ನು ಮರೆ ಮಾಚಲು ಕುಟುಂಬದ ಸದಸ್ಯರಿಗೆ ಸುಳ್ಳು ಹೇಳುವಂತೆ ಮಾಡಿತ್ತು.

ನಿಮ್ಹಾನ್ಸ್‌ನ ‘ಸರ್ವಿಸಸ್ ಫಾರ್ ಹೆಲ್ದಿ ಯೂಸ್ ಆಫ್ ಟೆಕ್ನಾಲಜಿ’ಯ (ಎಸ್‌ಎಚ್‌ಯುಟಿ ಕ್ಲಿನಿಕ್) ಡಾ.ಸುಬ್ರಮಣಿಯನ್ ಶಾರದಾ, ಡಾ. ರಾಜೇಶ್ ಕುಮಾರ್ ಮತ್ತು ಡಾ.ಮನೋಜ್ ಕೆ ಶರ್ಮ ಯುವಕನಿಗೆ ಚಿಕಿತ್ಸೆ ಮತ್ತು ಪ್ರಕರಣದ ಬಗ್ಗೆ ಸಂಶೋಧನೆಯನ್ನು ಒಟ್ಟೊಟ್ಟಿಗೆ ನಡೆಸಿದರು.

‘ಆನ್‌ಲೈನ್ ಗೇಮಿಂಗ್ ವ್ಯಸನದಿಂದ ಮುಕ್ತಗೊಳಿಸಲು ಬಳಸುವ ವಿಧಾನಗಳನ್ನೇ ಇಲ್ಲಿಯೂ ಅಳವಡಿಸಿಕೊಳ್ಳಲಾಯಿತು. ರೋಗಿಯ ಸಂಪೂರ್ಣ ನಿಯಂತ್ರಣ, ನಷ್ಟ ಮತ್ತು ಸಾಲದ ಸ್ಥಿತಿಯಿಂದ ಚೇತರಿಸಿಕೊಳ್ಳಲು ಸಹಾಯ ಮಾಡಿತು’ ಎಂದು ಕ್ಲಿನಿಕಲ್ ಸೈಕಾಲಜಿಯ ಸಹಾಯಕ ಪ್ರಾಧ್ಯಾಪಕ ಮತ್ತು ಸಂಶೋಧಕರಲ್ಲಿ ಒಬ್ಬರಾದ ಡಾ.ರಾಜೇಶ್ ಕುಮಾರ್ ತಿಳಿಸಿದರು.

ಯುವಕನಿಗೆ ಎಸ್‌ಎಚ್‌ಯುಟಿ ಕ್ಲಿನಿಕ್‌ನಲ್ಲಿ ಬಹುಮಾದರಿಯ ವರ್ತನೆಯನ್ನು ಬಳಸಿಕೊಂಡು ಚಿಕಿತ್ಸೆ ನೀಡಲಾಯಿತು. ಡಿಜಿಟಲ್ ಉಪವಾಸ (ಡಿಜಿಟಲ್ ಬಳಸದೇ ಇರುವುದು), ಪ್ರಚೋದನೆಗೆ ಒಳಗಾಗದಂತೆ ನಿಯಂತ್ರಿಸುವುದು, ವಹಿವಾಟು ಅಪ್ಲಿಕೇಶನ್‌ಗಳಿಂದ ದೂರವಿರುವುದು ಮತ್ತು ಅವರ ಹಣಕಾಸಿನ ನಿಯಂತ್ರಣವನ್ನು ಕುಟುಂಬ ಸದಸ್ಯರಿಗೆ ವಹಿಸುವುದೂ ಇದರಲ್ಲಿ ಸೇರಿತ್ತು ಎಂದು ಮತ್ತೊಬ್ಬ ಸಂಶೋಧಕರಾದ ಡಾ.ಶಾರದಾ ಸುಬ್ರಮಣಿಯನ್ ಮಾಹಿತಿ ನೀಡಿದರು.

ಜೂಜಿನಂತೆ ಆವರಿಸುವ ಟ್ರೇಡಿಂಗ್

ಆನ್‌ಲೈನ್ ಮೂಲಕ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ 20 ಕೋಟಿಗೂ ಅಧಿಕ ಡಿಮ್ಯಾಟ್ ಖಾತೆಗಳು ಭಾರತದಲ್ಲಿವೆ. ಅದರಲ್ಲಿ ಶೇ 75ರಷ್ಟು ಖಾತೆಗಳು 30 ವರ್ಷದೊಳಗಿನವರದ್ದಾಗಿರುವುದು ಎಚ್ಚರಿಕೆ ಗಂಟೆಯಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಟ್ರೇಡಿಂಗ್ ಆ್ಯಪ್‌ಗಳು ಷೇರು ಮಾರುಕಟ್ಟೆಯನ್ನು ಒಂದು 'ಗೇಮ್'ನಂತೆ ಬಿಂಬಿಸುತ್ತವೆ. ತ್ವರಿತ ಲಾಭದ ಆಮಿಷ ಒಡ್ಡುತ್ತವೆ. ಒಮ್ಮೆ ಹೂಡಿಕೆ ಮಾಡಿದರೆ ಮತ್ತೆ ಮತ್ತೆ ಹೂಡುವಂತೆ ಮಾನಸಿಕ ಒತ್ತಡ ಉಂಟು ಮಾಡುವುದು ಕೇವಲ ಆರ್ಥಿಕ ಸಮಸ್ಯೆಯಲ್ಲ. ಇದು ಮಾನಸಿಕ ಅಸ್ವಸ್ಥತೆಯೂ ಆಗಿದ್ದು, ಗುಣಪಡಿಸಬಲ್ಲ ಕಾಯಿಲೆ ಎಂದು ಮಾಹಿತಿ ನೀಡಿದ್ದಾರೆ.

‘ಈಜಿಪುರ: ಜಾಗ ಗುರುತಿಸಿ ಕೆಲಸ ಆರಂಭಿಸಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಾಮಗಾರಿಗೆ ವೇಗ
- ಸೇತುಬಂಧ ನಿರ್ಮಾಣಕ್ಕೆ ಜಮೀನು ಒದಗಿಸಲು ಸೇಂಟ್ ಜಾನ್ಸ್ ಭರವಸೆ

ಬೆಂಗಳೂರು: ಈಜಿಪುರ ಮೇಲ್ಸೇತುವೆಗೆ ಸಂಬಂಧಿಸಿದಂತೆ ಸಂಚಾರಿ ಪೊಲೀಸ್ ವಿಭಾಗ, ಸೇಂಟ್ ಜಾನ್ಸ್ ರಾಷ್ಟ್ರೀಯ ಆರೋಗ್ಯ ವಿಜ್ಞಾನ ಅಕಾಡೆಮಿಯ ಜೊತೆ ಸೋಮವಾರ ಸಭೆ ನಡೆಸಿದ್ದು ಮೇಲ್ಸೇತುವೆಗೆ ವೇಗ ಸಿಗುವ ನಿರೀಕ್ಷೆ ಇದೆ.

ಸೇಂಟ್ ಜಾನ್ಸ್ ಸಂಸ್ಥೆಯು ಪೋರ್ಟಲ್ ಪಿಯರ್ (ಸೇತುಬಂಧ) ನಿರ್ಮಿಸಲು ಜಮೀನು ಒದಗಿಸುವ ಭರವಸೆ ನೀಡಿದೆ.

ಎಂ. ಮಹೇಶ್ವರ ರಾವ್

ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಮಾತನಾಡಿ, ‘ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದೆ. ‘ಕೇಂದ್ರೀಯ ಸದನ’ ಸಂಕೀರ್ಣದ ಕಡೆಯಿಂದ ಈಜೀಪುರ ಕಡೆಗೆ ಸಾಗುವ ಎಡ ಭಾಗದಲ್ಲಿ ಸೇಂಟ್ ಜಾನ್ಸ್ ಬಳಿ ಐದು ಪೋರ್ಟಲ್ ಪಿಯರ್ ಅಳವಡಿಸಲು ಸಂಸ್ಥೆಯ ಸ್ವಲ್ಪ ಜಾಗದ ಬಳಕೆ ಅವಶ್ಯಕತೆಯಿತ್ತು. ಈ ಬಗ್ಗೆ ಸೇಂಟ್ ಜಾನ್ಸ್ ಸಂಸ್ಥೆಯ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿದಾಗ ಅವರು ಸಮ್ಮತಿ ನೀಡಿದ್ದಾರೆ. ಅದರಂತೆ ಕೂಡಲೇ ಗುರುತು ಮಾಡಿ ಕಾಮಗಾರಿ ಆರಂಭಿಸಬೇಕು’ ಎಂದು ಎಂಜಿನಿಯರ್ ಮತ್ತು ಗುತ್ತಿಗೆದಾರರಿಗೆ ತಿಳಿಸಿದರು.

ಸೇಂಟ್ ಜಾನ್ಸ್ ಭಾಗದಲ್ಲಿ ರ‍್ಯಾಂಪ್ ನಿರ್ಮಿಸಲು ಭೂಸ್ವಾಧೀನ ಪಡಿಸಿಕೊಳ್ಳುವ ಜಾಗಕ್ಕೆ ಟಿಡಿಆರ್ ನೀಡುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಸಾಧ್ಯವಾದಷ್ಟು ಬೇಗ ಜಮೀನು ಹಸ್ತಾಂತರ ಮಾಡಿಕೊಂಡು ಕಾಮಗಾರಿಯನ್ನು ಶೀಘ್ರವಾಗಿ ನಡೆಸಬೇಕು ಎಂದರು.

ಕಾಮಗಾರಿ ನಡೆಯುವ ವೇಳೆ ಸುರಕ್ಷತಾ ಕ್ರಮವಾಗಿ ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು. ಕಾಮಗಾರಿ ಪೂರ್ಣಗೊಂಡ ಕೂಡಲೇ ಗೋಡೆ ನಿರ್ಮಿಸಿಕೊಡಲು ಸಲಹೆ ನೀಡಿದರು.

ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್ ಮಾತನಾಡಿ, ‘ಈಜಿಪುರ ಮುಖ್ಯ ರಸ್ತೆಯಲ್ಲಿ 2.38 ಕಿ.ಮೀ ಉದ್ದದ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಡೆಸಲಾಗುತ್ತಿದೆ. ಮೇಲ್ಸೇತುವೆಗೆ ಒಟ್ಟು 762 ಸೆಗ್ಮೆಂಟ್ ಕಾಸ್ಟಿಂಗ್ ಮಾಡಬೇಕಿದ್ದು, ಈಗಾಗಲೇ 645 ಸೆಗ್ಮೆಂಟ್‌ಗಳನ್ನು ಕಾಸ್ಟಿಂಗ್ ಮಾಡಲಾಗಿದೆ. ಇನ್ನು 117 ಸೆಗ್ಮೆಂಟ್‌ಗಳನ್ನು ಕಾಸ್ಟಿಂಗ್ ಮಾಡಬೇಕಿದೆ. ಜೊತೆಗೆ 490 ಸೆಗ್ಮೆಂಟ್‌ಗಳನ್ನು ಜೋಡಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಂಚಾರ ಪೊಲೀಸ್ ವಿಭಾಗದ ಜಂಟಿ ಆಯುಕ್ತ ಕಾರ್ತಿಕ್ ರೆಡ್ಡಿ, ಸೇಂಟ್ ಜಾನ್ಸ್ ರಾಷ್ಟ್ರೀಯ ಆರೋಗ್ಯ ವಿಜ್ಞಾನ ಅಕಾಡೆಮಿಯ ನಿರ್ದೇಶಕ ಧರ್ಮಗುರು ಜೆಸುದಾಸ್ ಆರ್., ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ನೂತನ ಶೈಕ್ಷಣಿಕ, ಸಂಶೋಧನಾ ಭವನ ನಿರ್ಮಾಣ

ಪಿಎಂ-ಉಷಾ ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ₹100 ಕೋಟಿ ಅನುದಾನ

₹62 ಕೋಟಿ ವಿ.ವಿ ಮೂಲಸೌಕರ್ಯ ಅಭಿವೃದ್ಧಿಗೆ	₹19.24 ಕೋಟಿ ಮೂಲಸೌಕರ್ಯ ನವೀಕರಣ ಮಾಡಲು	₹16.96 ಕೋಟಿ ವಿವಿಧ ಉಪಕರಣಗಳ ಖರೀದಿಗೆ	₹1.79 ಕೋಟಿ ಪ್ರಚಾರ ಹಾಗೂ ವಿವಿಧ ಕಾರ್ಯಕ್ರಮಗಳ ಆಯೋಜನೆಗೆ	₹100 ಕೋಟಿ ಒಟ್ಟು	1,192 ಎಕರೆ ಬೆಂಗಳೂರು ವಿ.ವಿ.ಯ ವಿಸ್ತೀರ್ಣ	52 ವಿಭಾಗಗಳು	4,500 ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ

• ಖಲೀಲಅಹ್ಮದ ಶೇಖ

ಬೆಂಗಳೂರು: ವಿದ್ಯಾರ್ಥಿಗಳಿಗೆ 24X7 ಉಚಿತ ಇಂಟರ್‌ನೆಟ್ ಸೌಲಭ್ಯ, ಕ್ಯಾಂಪಸ್ ಹಾಗೂ ಆರೋಗ್ಯ ಕೇಂದ್ರದ ಉನ್ನತೀಕರಣ, ಸ್ಮಾರ್ಟ್ ಕ್ಲಾಸ್ ರೂಂ ವ್ಯವಸ್ಥೆ, ₹50 ಕೋಟಿ ವೆಚ್ಚದಲ್ಲಿ ಶೈಕ್ಷಣಿಕ ಭವನ ಹಾಗೂ ₹12 ಕೋಟಿ ವೆಚ್ಚದಲ್ಲಿ ಸಂಶೋಧನಾ ಭವನ ನಿರ್ಮಾಣಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಮುಂದಾಗಿದೆ.

ಕೇಂದ್ರ ಶಿಕ್ಷಣ ಸಚಿವಾಲಯದ 'ಪ್ರಧಾನ ಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ' (ಪಿಎಂ-ಉಷಾ) ಯೋಜನೆಯಡಿ 'ವಿಶ್ವವಿದ್ಯಾಲಯಗಳಲ್ಲಿ ಬಹು ಶಿಸ್ತೀಯ ಶಿಕ್ಷಣ ಮತ್ತು ಸಂಶೋಧನೆ' (ಎಂಇಆರ್‌ಯು) ಅಡಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ₹100 ಕೋಟಿ ಅನುದಾನ ಬಿಡುಗಡೆಯಾಗಿದೆ.

ಪ್ರಸ್ತಾವಿತ ಹೊಸ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗಾಗಿ ₹50 ಕೋಟಿ ವೆಚ್ಚದಲ್ಲಿ ಶೈಕ್ಷಣಿಕ ಭವನದ ನಿರ್ಮಾಣ, ₹30 ಕೋಟಿ ವೆಚ್ಚದಲ್ಲಿ ಕ್ಯಾಂಪಸ್ ಉನ್ನತೀಕರಣ, ಕ್ರೀಡಾ ಸೌಲಭ್ಯಗಳ ಹೆಚ್ಚಳ, ಸ್ಮಾರ್ಟ್ ಕ್ಲಾಸ್, ಆರೋಗ್ಯ ಕೇಂದ್ರದ ಉನ್ನತೀಕರಣ, ಮ್ಯೂಸಿಯಂ ಸಂಪನ್ಮೂಲಗಳ ಡಿಜಿಟಲೀಕರಣ, ಪರಿಸರ ಸಂರಕ್ಷಣೆ ಮತ್ತು ಹಸಿರು ಕ್ಯಾಂಪಸ್ ಚಟುವಟಿಕೆಗೆ ಈ ಅನುದಾನವನ್ನು ಬಳಸಲಾಗುತ್ತದೆ.

'ಶೈಕ್ಷಣಿಕ ಭವನ ನಿರ್ಮಾಣದ ಜಾಗವು ವಿಶ್ವವಿದ್ಯಾಲಯದ ಜೈವಿಕ ಉದ್ಯಾನ, ಪರಿಸರ ಪ್ರದೇಶದಲ್ಲಿ ಇಲ್ಲ. ಈ ಪ್ರದೇಶದಲ್ಲಿ 419 ಮರಗಳು ಇವೆ. ಇವುಗಳಲ್ಲಿ ಹೆಚ್ಚಿನವು ಅಕೇಶಿಯ ಮತ್ತು ನೀಲಗಿರಿ ಮರಗಳಾಗಿವೆ. 282 ಮರಗಳನ್ನು ಮಾತ್ರ ಕಟ್ಟಡ ನಿರ್ಮಾಣಕ್ಕಾಗಿ ಕಡಿಯಲಾಗುತ್ತಿದ್ದು, ಉಳಿದ 137 ಮರಗಳನ್ನು ಬಫರ್ ವಲಯದಲ್ಲಿ ಉಳಿಸಲಾಗುತ್ತದೆ. ಸಣ್ಣ ಮರಗಳನ್ನು ಹತ್ತಿರದ ಸ್ಥಳದಲ್ಲೆ ಪುನಃ ನೆಡಲಾಗುವುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ ಜಯಕರ ತಿಳಿಸಿದರು.

'ಶೈಕ್ಷಣಿಕ ಭವನವು 1,07,376 ಚದರ ಅಡಿ ವಿಸ್ತೀರ್ಣ ಹೊಂದಿರಲಿದ್ದು ಮೂರು ಮಹಡಿಗಳನ್ನು ಒಳಗೊಂಡಿರುತ್ತದೆ. ಡಿಜಿಟಲ್ ಶಿಕ್ಷಣ, ದೂರಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಗಣಿತ ಸೇರಿದಂತೆ ಆಧುನಿಕ ವಿಷಯಗಳ ಕುರಿತು ಅಧ್ಯಯನ ನಡೆಸಲು ಇದನ್ನು ಬಳಸಲಾಗುತ್ತದೆ' ಎಂದರು.

₹12 ಕೋಟಿ ವೆಚ್ಚದಲ್ಲಿ ನಿರ್ಮಿಸುವ ಸಂಶೋಧನಾ ಭವನವು 16,163 ಚದರ ಅಡಿ ವಿಸ್ತೀರ್ಣವಿದ್ದು, ಎರಡು ಮಹಡಿಗಳನ್ನು ಒಳಗೊಂಡಿರುತ್ತದೆ.

ಮುಖ್ಯಾಂಶಗಳು

- ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳ ಆಯೋಜನೆ
- ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ತರಬೇತಿ
- ಮುಂದಿನ 25 ವರ್ಷಕ್ಕೆ ಬೇಕಾಗುವ ಮೂಲಸೌಕರ್ಯದ ಅಭಿವೃದ್ಧಿ



ಉದ್ದೇಶಿತ ಶೈಕ್ಷಣಿಕ ಭವನದ ನೀಲನಕ್ಷೆ

ಕನ್ನಡ, ಭೂವಿಜ್ಞಾನ, ಪ್ರಾಣಿಶಾಸ್ತ್ರ, ಜಾನಪದ ಹಾಗೂ ಇತಿಹಾಸ ವಿಭಾಗಗಳಲ್ಲಿರುವ ವಸ್ತು ಸಂಗ್ರಹಾಲಯಗಳ ನವೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಪ್ರಯೋಗಾಲಯ ಕಟ್ಟಡದ ನವೀಕರಣ ಜೊತೆಗೆ ಉಪಕರಣಗಳನ್ನು ಖರೀದಿಸಲಾಗುತ್ತದೆ

ಎಸ್.ಎಂ. ಜಯಕರ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ

ಶೈಕ್ಷಣಿಕ ಕ್ಷೇತ್ರದ ಮುಂದಿನ 25 ವರ್ಷಗಳಿಗೆ ಬೇಕಾಗುವ ಮೂಲಸೌಕರ್ಯಗಳನ್ನು ಪಿಎಂ ಉಷಾ ಯೋಜನೆಯಡಿ ನಿರ್ಮಿಸಲಾಗುತ್ತಿದೆ. ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಸಿಗುವ ಎಲ್ಲ ರೀತಿಯ ಸೌಲಭ್ಯಗಳು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಲಭ್ಯವಾಗಲಿವೆ

ಸುರೇಶ್, ಪಿ.ಎಂ. ಉಷಾ ಯೋಜನೆಯ ನಿರ್ದೇಶಕ

ಮೂಲಸೌಕರ್ಯ ನವೀಕರಣಕ್ಕೆ ₹19.24 ಕೋಟಿ

ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲು ₹9.5 ಕೋಟಿ, ಆಸ್ಪತ್ರೆಯ ಉನ್ನತೀಕರಣಕ್ಕೆ ₹1 ಕೋಟಿ, ಪರಿಸರ ಸಂರಕ್ಷಣೆಗೆ ₹8 ಕೋಟಿ, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿರುವ ವಸ್ತು ಸಂಗ್ರಹಾಲಯಗಳ ಅಭಿವೃದ್ಧಿಗೆ ₹1 ಕೋಟಿ ಮೀಸಲಿಡಲಾಗಿದೆ ಎಂದು ಎಸ್.ಎಂ. ಜಯಕರ 'ಪ್ರಜಾವಾಣಿ'ಗೆ ತಿಳಿಸಿದರು.

ಇದನ್ನು ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಸಮಾನತೆ, ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ, ಹವಾಮಾನ ಬದಲಾವಣೆ, ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ಆಧುನಿಕ ಶಿಕ್ಷಣ ವ್ಯವಸ್ಥೆಗೆ ಪೂರಕವಾದ ವಿಷಯಗಳ ಕುರಿತ ಸಂಶೋಧನೆಗೆ ಬಳಸಿಕೊಳ್ಳಲಾಗುತ್ತದೆ' ಎಂದು ತಿಳಿಸಿದರು.

'ಪಿಎಂ-ಉಷಾ ಯೋಜನೆಯಡಿ ₹8 ಕೋಟಿಯನ್ನು ಪರಿಸರ ಸಂರಕ್ಷಣಾ ಚಟುವಟಿಕೆಗಳಿಗೆ ಮೀಸಲಿಡಲಾಗಿದೆ. ಕ್ಯಾಂಪಸ್‌ನಲ್ಲಿ ಎಲ್‌ಇಡಿ ದೀಪಗಳ ವ್ಯವಸ್ಥೆ, ಪಾದಚಾರಿ ಮಾರ್ಗಗಳ ನವೀಕರಣ, ಎಲೆಕ್ಟ್ರಿಕ್ ವಾಹನಗಳು ಹಾಗೂ ಬೈಸಿಕಲ್‌ಗಳ ಬಳಕೆಗೆ ಉತ್ತೇಜನ, ಚರಕವನ, ಪಂಚವಟಿ ವಲಯಗಳ ಪುನರುಜ್ಜೀವನ, ಮಳೆನೀರು ಸಂಗ್ರಹಣಾ ವ್ಯವಸ್ಥೆ ಪುನರ್ ನಿರ್ಮಾಣ ಇತ್ಯಾದಿ ಸೇರಿವೆ' ಎಂದು ತಿಳಿಸಿದರು.

'ಕೇಂದ್ರ ಸರ್ಕಾರ ಪಿಎಂ ಉಷಾ ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ₹100 ಕೋಟಿ ಅನುದಾನ ಘೋಷಿಸಿತ್ತು. ಇದರಲ್ಲಿ ಶೇ 60ರಷ್ಟು ಕೇಂದ್ರ ಸರ್ಕಾರ ಮತ್ತು ಶೇ 40ರಷ್ಟು ರಾಜ್ಯ ಸರ್ಕಾರ ಭರಿಸುತ್ತದೆ' ಎಂದರು.

ಚಟಿಕೆ ಸುದ್ದಿ

ಪ್ರೋತ್ಸಾಹಧನ ವಿತರಣೆ

ಕೆ.ಆರ್.ಪುರ: 'ಮಕ್ಕಳು ತಮ್ಮ ಮೇಲೆ ವಿಶ್ವಾಸವಿಟ್ಟು ಓದಿದರೆ ಅಂದುಕೊಂಡಿದ್ದನ್ನು ಸಾಧಿಸಬಹುದು' ಎಂದು ಕೆ.ಆರ್.ಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಂ.ಎಸ್.ರಾಧಾ ಅಭಿಪ್ರಾಯಪಟ್ಟರು.

ಕೆ.ಆರ್.ಪುರದ ಶ್ರೀವೆಂಕಟೇಶ್ವರ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 10ನೇ ತರಗತಿಯಲ್ಲಿ ಹೆಚ್ಚು ಅಂಕಪಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮತ್ತು ಪಿಯುಸಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಪ್ರೋತ್ಸಾಹಧನ ವಿತರಿಸಿ ಮಾತನಾಡಿದರು.

'ಮಕ್ಕಳು ಅಡ್ಡದಾರಿ ಹಿಡಿಯದಂತೆ ಪೋಷಕರು ಮನವೊಲಿಸಬೇಕು. ಸುಲಭವಾಗಿ ಸಿಕ್ಕಿದ್ದು ಹೆಚ್ಚು ದಿನ ಉಳಿಯುವುದಿಲ್ಲ. ಕಷ್ಟಪಟ್ಟು ಓದಿ ಸಾಧನೆ ಮಾಡಿದರೆ ಸಾಧನೆಗೆ ಬೆಲೆ ಬರುತ್ತದೆ. ಮಕ್ಕಳ ಆಸಕ್ತಿಗನುಗುಣವಾಗಿ ಓದಲು ಅವಕಾಶ ಮಾಡಿಕೊಡಬೇಕು' ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆ.ವಿ.ಮುನಿಸ್ವಾಮಿ ಮಾತನಾಡಿ, 'ಕೆಲ ವರ್ಷಗಳಿಂದ ಬಡ ವಿದ್ಯಾರ್ಥಿಗಳಿಗಾಗಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಈ ವರ್ಷ ₹2.95 ಲಕ್ಷವನ್ನು 93 ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ' ಎಂದರು.

ಚಾರ್ಟರ್ಡ್ ಅಕೌಂಟೆಂಟ್ ನವೀನ್ ಕುಮಾರ್, ಕಾಲೇಜು ನಿರ್ದೇಶಕ ಎಂ. ರವಿ, ಆಡಳಿತಾಧಿಕಾರಿ ಪುಟ್ಟರಾಜು, ಪ್ರಾಂಶುಪಾಲ ಜಿ.ಇ.ಪ್ರಕಾಶ್, ಉಪಪ್ರಾಂಶುಪಾಲ ನಾಗಾರ್ಜುನ, ಎಚ್.ಎಂ. ಗೀತಾಂಜಲಿ ಇದ್ದರು.

ಏಪ್ರಿಲ್‌ನಲ್ಲಿ ಎಸ್ಸಿ, ಎಸ್ಟಿ ವಕೀಲರ ರಾಜ್ಯ ಸಮ್ಮೇಳನ

ಬೆಂಗಳೂರು: 'ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಕೀಲರ ಸಂಘದ ರಾಜ್ಯಮಟ್ಟದ ಸಮಾವೇಶವನ್ನು ನಗರದಲ್ಲಿ ಏಪ್ರಿಲ್‌ನಲ್ಲಿ ಆಯೋಜಿಸಲಾಗುವುದು' ಎಂದು ಸಂಘದ ಸಂಘದ ಅಧ್ಯಕ್ಷ ಎಂ. ಮುನಿಯಪ್ಪ ತಿಳಿಸಿದರು.

ನಗರದಲ್ಲಿ ನಡೆದ ಎರಡನೇ ವಾರ್ಷಿಕೋತ್ಸವದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

'ಬಾರ್ ಕೌನ್ಸಿಲ್ ಚುನಾವಣೆಗಳಲ್ಲಿ ಮೀಸಲಾತಿ ಇಲ್ಲ, ಅದಕ್ಕಾಗಿ ಹೋರಾಡಬೇಕಿದೆ. ಹಾಗೆಯೇ ಬಾರ್ ಕೌನ್ಸಿಲ್ ವಕೀಲರ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಅಭ್ಯರ್ಥಿ ಗೆಲ್ಲಿಸಬೇಕು. ವಕೀಲರು ಭಿನ್ನಾಭಿಪ್ರಾಯ ಬದಿಗಿಟ್ಟು ಮಾದರಿ ಸಂಘ ಕಟ್ಟಬೇಕು. ಸ್ವಂತ ಕಚೇರಿ ಹೊಂದಲು ಸಹಕಾರ ನೀಡಬೇಕು' ಎಂದು ಸಲಹೆ ನೀಡಿದರು

ಆಯ್ಕೆ ಸಮಿತಿಗೆ ಗಾಯತ್ರಿ ಮುಖ್ಯಸ್ಥೆ

ಬೆಂಗಳೂರು: ಕೆ.ಆರ್. ಗಾಯತ್ರಿ ಅವರು ರಾಜ್ಯ ಸೀನಿಯರ್ ಮಹಿಳಾ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥೆಯಾಗಿ ಶನಿವಾರ ನೇಮಕಗೊಂಡಿದ್ದಾರೆ.

ಡಾ.ನಿವೇದಿತಾ ರೇಷ್ಮೆ, ಆಶ್ರಯಿ ಎನ್. ರಾಮ್ ಹಾಗೂ ಲೀನಾ ಪ್ರಸಾದ್ ಅವರು ಸಮಿತಿಯಲ್ಲಿ ಸ್ಥಾನ ಪಡೆದಿದ್ದಾರೆ ಎಂದು ರಾಜ್ಯ ಕ್ರಿಕೆಟ್ ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೀನಿವಾಸ ಮೂರ್ತಿ, ಜಾಹ್ನವಿ ದೇಸಾಯಿ, ಜಯಶ್ರೀ ಡಿ, ಜಾನವಿ ನರಸಿಂಹ ಹಾಗೂ ರುತ್ ಮಾಬೆನ್ ಅವರು ಮಹಿಳಾ ಕ್ರಿಕೆಟ್ ಸಮಿತಿಗೆ ಆಯ್ಕೆಯಾಗಿದ್ದಾರೆ.

ಕಿರಿಯರ ತಂಡದ ಆಯ್ಕೆ ಸಮಿತಿಗೆ ಮಾಲಾ ಸುಂದರೇಶನ್ (ಮುಖ್ಯಸ್ಥೆ), ಸಬಾ ಸಿದ್ದೀಕ್, ಪಿ.ಜೆ.ಹೇಮಲತಾ ಹಾಗೂ ಸ್ಫೂರ್ತಿ ಪಾರ್ವತಿಕಾರ್ ಅವರು ನೇಮಕಗೊಂಡಿದ್ದಾರೆ.

'ಅಭಿವೃದ್ಧಿ ವಿರೋಧಿಸದ ಗಾಡ್ಗೀಳ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್ ಅವರು ಅಭಿವೃದ್ಧಿ ಯೋಜನೆಗಳಿಗೆ ವಿರೋಧ ವ್ಯಕ್ತಪಡಿಸುತ್ತಿರಲಿಲ್ಲ ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಸೋಮವಾರ 'ವಿಜ್ಞಾನ, ಉಸ್ತುವಾರಿ ಮತ್ತು ಏಕತೆ' ಮಾಧವ ಗಾಡ್ಗೀಳ್ ಅವರ ಜೀವನ ಮತ್ತು ಪರಂಪರೆ ಕುರಿತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅರಣ್ಯ, ನದಿ, ಅಣೆಕಟ್ಟು ಮತ್ತು ಪರಿಸರದ ಬಗ್ಗೆ ಗಾಡ್ಗೀಳ್ ಅವರು ಅಪಾರ ಕಾಳಜಿ ಹೊಂದಿದ್ದರು. ಅವುಗಳ ರಕ್ಷಣೆಯೇ ಮೊದಲ ಆದ್ಯತೆಯಾಗಿತ್ತು. ಆದರೆ, ಗುತ್ತಿಗೆದಾರರು, ಗಣಿ ಮಾಫಿಯಾ ಮತ್ತು ಜನಪ್ರತಿನಿಧಿಗಳು ಅವರನ್ನು ಅಭಿವೃದ್ಧಿ ವಿರೋಧಿ ಎಂಬಂತೆ ಬಿಂಬಿಸಿದ್ದರು ಎಂದರು.

ಪರಿಸರ ರಕ್ಷಣೆ ಕುರಿತು ಹಲವು ಪುಸ್ತಕಗಳನ್ನು ಬರೆದಿದ್ದು, ಬೇರೆ ಭಾಷೆಗಳಿಗೂ ಅನುವಾದಗೊಂಡಿದೆ. ಗಾಡ್ಗೀಳ್ ಅವರ 'ಏರುಘಟ್ಟದ ನಡಿಗೆ' ಆತ್ಮಕಥೆ ಎಂಟು ಭಾಷೆಗಳಲ್ಲಿ ಪ್ರಕಟವಾಗಿದೆ. ಮಾಧವ ಅವರೊಂದಿಗೆ ಕರ್ನಾಟಕದ ಹಲವು ಭಾಗಗಳಿಗೆ ಭೇಟಿ ನೀಡಿ, ಕ್ಷೇತ್ರ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದೆ' ಎಂದು ನೆನಪಿಸಿಕೊಂಡರು.

ವಿಜ್ಞಾನ ಲೇಖಕ ನಾಗೇಶ ಹೆಗಡೆ ಮಾತನಾಡಿ, 'ಭಾರತದ ಅಭಿವೃದ್ಧಿ ವೈಖರಿಯನ್ನು 'ಕಬ್ಬಿಣದ ತ್ರಿಭುಜ'ದ ಮೂಲಕ ಗಾಡ್ಗೀಳ್ ನಿರೂಪಿಸಿದ್ದಾರೆ. ರಾಜಕಾರಣಿ, ಗುತ್ತಿಗೆದಾರ, ಎಂಜಿನಿಯರ್ ಮತ್ತು ಅಧಿಕಾರಿ ವರ್ಗ ಎಂಬ ಮೂರು ತ್ರಿಭುಜಗಳಲ್ಲಿ ದೇಶದ ಇಡೀ ಸಂಪತ್ತು ಬಂದಿಯಾಗಿದೆ, ಅದು ಶೀಘ್ರ ಕರಗುತ್ತ ಮಹಲುಗಳಾಗುತ್ತಿವೆ ಎಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ' ಎಂದರು.

ಮಾಧವ ಗಾಡ್ಗೀಳ್ ಅವರ 'ವಿಲೋಮ ನಿಯಮ'ದ ಬಗ್ಗೆ ಪ್ರಸ್ತಾಪಿಸಿದ ಅವರು, 'ಗ್ರಾಮ ಪಂಚಾಯಿತಿಗೆ ಚುನಾಯಿತರಾದರೆ ಕೆರೆ, ನದಿ, ಕಾಡುಮೇಡುಗಳ ಕುರಿತು ಕಾಳಜಿ ಇರುತ್ತದೆ. ಜಿಲ್ಲಾ ಪಂಚಾಯಿತಿ ಸದಸ್ಯರಲ್ಲಿ ಅದು ತುಸು ಕಮ್ಮಿ ಆಗುತ್ತದೆ. ಶಾಸಕರಲ್ಲಿ ಇನ್ನೂ ಕಮ್ಮಿ ಆಗುತ್ತದೆ, ಸಂಸತ್ ಸದಸ್ಯರಾಗುವ ವೇಳೆಗೆ ಪರಿಸರ ಕಾಳಜಿ ಮಾಯವಾಗುತ್ತದೆ' ಎಂದರು.

ಪ್ರಾಧ್ಯಾಪಕಿ ಉಮಾ ರಾಮಕೃಷ್ಣನ್ ಮಾತನಾಡಿ, 'ಶಾಲೆಯಲ್ಲಿ ಓದುವಾಗ ಮಾಧವ ಗಾಡ್ಗೀಳ್ ಅವರನ್ನು ಭೇಟಿಯಾಗಿದ್ದೆ, ಯಾವುದೇ ವಿಷಯದ ಬಗ್ಗೆ ದತ್ತಾಂಶ ಸಂಗ್ರಹಿಸಿ, ಸಂಶೋಧನೆ ಮಾಡುತ್ತಿದ್ದರು. ಅವರನ್ನು ನೋಡಿದ ಮೇಲೆ ಏನಾದರೂ ಸಾಧಿಸಬಹುದು ಎಂಬುದು ಗೊತ್ತಾಯಿತು' ಎಂದರು.

ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪೊಲಿಟಿಕ್ಸ್ ಮತ್ತು ಎಕಾನಾಮಿಕ್ಸ್‌ನ ಸುಸ್ಥಿರ ಅಭಿವೃದ್ಧಿ ಕೇಂದ್ರದ ನಿರ್ದೇಶಕ ಗುರುದಾಸ್ ನುಲ್ಕರ್, ನಿವೃತ್ತ ಪ್ರಾಧ್ಯಾಪಕ ಜಾನ್ ಕುರಿಯನ್ ಹಾಗೂ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಹರಿಣಿ ನಾಗೇಂದ್ರ ಅವರು ಮಾಧವ ಗಾಡ್ಗೀಳ್ ತೆಗಿನ ಒಡನಾಟ ಸ್ಮರಿಸಿದರು.

ಬಿಐಸಿಯಲ್ಲಿ ಸೋಮವಾರ ಏರ್ಪಡಿಸಿದ್ದ ಮಾಧವ ಗಾಡ್ಗೀಳ್ ಅವರ ಜೀವನ ಮತ್ತು ಪರಂಪರೆಯ ಕುರಿತ ಕಾರ್ಯಕ್ರಮದಲ್ಲಿ ಜಾನ್ ಕುರಿಯನ್, ನಾಗೇಶ ಹೆಗಡೆ, ರಾಮಚಂದ್ರ ಗುಹಾ, ಗುರುದಾಸ್ ನುಲ್ಕರ್, ಹರಿಣಿ ನಾಗೇಂದ್ರ, ಉಮಾ ರಾಮಕೃಷ್ಣನ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

30ಕ್ಕೆ ಸಂವಿಧಾನ ನಡಿಗೆ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಸಂವಿಧಾನವೇ ಬೆಳಕು

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಸಹಯೋಗ, ಬೆಂಗಳೂರು ವಿಶ್ವ ವಿದ್ಯಾಲಯದ ಸಹಕಾರದೊಂದಿಗೆ ಜ.30ರಂದು ಬೆಳಿಗ್ಗೆ 7ಕ್ಕೆ 'ಸಂವಿಧಾನವೇ ಬೆಳಕು- ಹೆಜ್ಜೆಯಿಡು ಬೆಂಗಳೂರು' ಸಂವಿಧಾನ ನಡಿಗೆ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ವೆಂಕಟಗಿರಿ ಗೌಡ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವುದರೊಂದಿಗೆ ಮೌಲ್ಯ, ಹಕ್ಕು, ಮತ್ತು ಕರ್ತವ್ಯಗಳನ್ನು ಗೌರವಿಸುವ, ಅರಿವು ಮೂಡಿಸುವ ಉದ್ದೇಶದಿಂದ ಸಂವಿಧಾನ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಿಚಾರ ಸಂಕಿರಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ, ನಡಿಗೆಗೆ ಚಾಲನೆ ನೀಡಲಾಗುತ್ತದೆ. ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ.

ಬೆಂಗಳೂರು ವಿಶ್ವ ವಿದ್ಯಾಲಯದೊಂದಿಗೆ ಸಂಯೋಜಿತವಾಗಿರುವ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಭಾಗವಹಿಸಲು ಮುಕ್ತ ಅವಕಾಶ ಇದೆ. ನೋಂದಣಿ ಮಾಡಿಕೊಂಡವರಿಗೆ ಟಿ-ಶರ್ಟ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ 9901918805 ಸಂಪರ್ಕಿಸಬಹುದು.

ಟೇಬಲ್ ಟೆನಿಸ್: ಅರ್ಣವ್‌ಗೆ ಪ್ರಶಸ್ತಿ ಡಬಲ್

ಬೆಂಗಳೂರು: ಅರ್ಣವ್ ಎನ್. ಅವರು ಬೆಂಗಳೂರು ನಗರ ಜಿಲ್ಲಾ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಮತ್ತು 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಪುರುಷರ ಫೈನಲ್‌ನಲ್ಲಿ ಅರ್ಣವ್ 3-1ರಿಂದ ಸಂಜಯ್ ಮಾಧವನ್ ವಿರುದ್ಧ; 17 ವರ್ಷದೊಳಗಿನವರ ವಿಭಾಗದಲ್ಲಿ 3-1ರಿಂದ ವೇದಾಂತ್ ವಶಿಷ್ಠ ವಿರುದ್ಧ ಗೆಲುವು ಸಾಧಿಸಿದರು.

ರಾಶಿ ವಿ.ರಾವ್ ಮತ್ತು ವೇದಾಂತ್ ಅವರು ಕ್ರಮವಾಗಿ 15 ವರ್ಷದೊಳಗಿನ ಬಾಲಕಿಯರ ಮತ್ತು ಬಾಲಕರ ಕಿರೀಟ ಗೆದ್ದರು. ರಾಶಿ 3-1ರಿಂದ ಐರಿನ್ ಅನ್ನಾ ಸುಭಾಷ್ ವಿರುದ್ಧ; ವೇದಾಂತ್ 3-2ರಿಂದ ತಮೋಘ್ನ ಎಂ. ವಿರುದ್ಧ ಫೈನಲ್‌ನಲ್ಲಿ ಜಯ ಸಾಧಿಸಿದರು

13 ವರ್ಷದೊಳಗಿನ ಬಾಲಕಿಯರ ಫೈನಲ್‌ನಲ್ಲಿ ವಿಭಾ ಟಿ. 3-0ಯಿಂದ ಆಧ್ಯಾ ಎಂ. ವಿರುದ್ಧ; ಬಾಲಕರ ವಿಭಾಗದಲ್ಲಿ ರಿಯಾನ್ಶ್ ಗರ್ಗ್ 3-0ಯಿಂದ ಶರ್ವಿಲ್ ಕಾಂಬ್ಳೇಕರ ವಿರುದ್ಧ ಗೆದ್ದು ಚಾಂಪಿಯನ್ ಆದರು.

11 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿ ಶರ್ವಿಲ್ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಸಮನ್ವಿ ಜೆ. ಗೆದ್ದುಕೊಂಡರು.

ಒಲಿಂಪಿಯನ್ ಬ್ಯಾಡ್ಮಿಂಟನ್ ತಾರೆ ಅಶ್ವಿನಿ ಪೊನ್ನಪ್ಪ ಮತ್ತು ಅಂತರರಾಷ್ಟ್ರೀಯ ಆಟಗಾರ್ತಿ ಬಿ.ಆರ್. ಮೀನಾಕ್ಷಿ ಅವರನ್ನು ಸೋಮವಾರ ಬೆಂಗಳೂರಿನ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಕುಮಾರ ಬಂಗಾರಪ್ಪ ಸನ್ಮಾನಿಸಿದರು. ಸಂಸ್ಥೆಯ ಪದಾಧಿಕಾರಿಗಳು ಮತ್ತು ಆಟಗಾರರು ಪಾಲ್ಗೊಂಡಿದ್ದರು

'ಎನ್‌ಇಪಿ: ನೈಜ ಇತಿಹಾಸ ಬದಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹೆಸರಿನಲ್ಲಿ ನೈಜ ಇತಿಹಾಸವನ್ನು ಬದಲಾಯಿಸಲಾಗುತ್ತಿದೆ' ಎಂದು ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯದ (ಜೆಎನ್‌ಯು) ನಿವೃತ್ತ ಪ್ರಾಧ್ಯಾಪಕ ಮತ್ತು ಇತಿಹಾಸಕಾರ ಆದಿತ್ಯ ಮುಖರ್ಜಿ ಕಳವಳ ವ್ಯಕ್ತಪಡಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಮತ್ತು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಇತಿಹಾಸ ವಿಭಾಗ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಇತಿಹಾಸ ಬೋಧನೆಯಲ್ಲಿ ವೈಜ್ಞಾನಿಕ ದೃಷ್ಟಿಕೋನ' ವಿಷಯ ಕುರಿತ ಸಂವಾದದಲ್ಲಿ ಭಾಗವಹಿಸಿ, ಮಾತನಾಡಿದರು.

'1857ಕ್ಕಿಂತ ಮೊದಲು ಈ ದೇಶದಲ್ಲಿ ಕೋಮುವಾದಿ ಚಿಂತನೆಗಳು ಇರಲಿಲ್ಲ. ಇಂದು ಎಲ್ಲ ವಿಷಯಗಳಲ್ಲೂ ವಸಾಹತುಶಾಹಿ ಮತ್ತು ಕೋಮುವಾದಿ ಚಿಂತನೆಗಳಿವೆ. ರಾಷ್ಟ್ರೀಯತೆಯ ಹೆಸರಿನಲ್ಲಿ ವಸಾಹತುಶಾಹಿ ಧೋರಣೆಯನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಇತಿಹಾಸವನ್ನು ಮಾಧ್ಯಮಗಳ ವರದಿಯ ಆಧಾರದ ಮೇಲೆ ಬರೆಯುವ ಸನ್ನಿವೇಶ ಈಗ ಸೃಷ್ಟಿಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ದೇಶದಲ್ಲಿ ಕೋಮುವಾದ ಬೆಳೆಯುತ್ತಿದೆ. ಎಲ್ಲ ಮುಸ್ಲಿಮರನ್ನು ವಲಸಿಗರು ಎಂದು ಆಧಾರ ರಹಿತವಾಗಿ ಆರೋಪಿಸಲಾಗುತ್ತಿದೆ. ಅವರ ಮೇಲೆ ದ್ವೇಷ ಬಿತ್ತುವ ಮೂಲಕ ರಾಜಕೀಯ ಮಾಡಲಾಗುತ್ತಿದೆ. ಇದರ ವಿರುದ್ಧ ಎಲ್ಲರೂ ಧ್ವನಿಯೆತ್ತಬೇಕಿದೆ. ಭಾರತದ ಬೌದ್ಧಿಕತೆ ಜಾಗೃತವಾಗಬೇಕಿದೆ' ಎಂದರು.

ಕೋಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಆ್ಯಂಡ್ ರಿಸರ್ಚ್‌ನ (ಐಐಎಸ್‌ಇಆರ್) ನಿವೃತ್ತ ವಿಜ್ಞಾನಿ ಸುಮಿತ್ರೊ ಬ್ಯಾನರ್ಜಿ, 'ಇತಿಹಾಸವು ಸತ್ಯ ಸಂಶೋಧನಾ ಪ್ರಕ್ರಿಯೆಯ ಒಂದು ವಿಜ್ಞಾನವಾಗಿದೆ. ಆಧಾರ ರಹಿತವಾಗಿ ಇದನ್ನು ಬೋಧಿಸಬಾರದು. ಐತಿಹಾಸಿಕ ಸಂಗತಿಗಳನ್ನು ಸಂಗ್ರಹಿಸಿ, ವೈಜ್ಞಾನಿಕ ಸತ್ಯವನ್ನು ಪ್ರತಿಪಾದಿಸಬೇಕು' ಎಂದು ಹೇಳಿದರು.

ರಕ್ತದಾನಿಗಳೊಂದಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ. ಶ್ರೀನಿವಾಸ್ ಚರ್ಚೆ ನಡೆಸಿದರು

'ತಲಸ್ಸೇಮಿಯಾ' ಮಕ್ಕಳಿಗಾಗಿ ರಕ್ತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಸ್ಸೇಮಿಯಾ ದಿಂದ ಬಳಲುತ್ತಿರುವ ಮಕ್ಕಳಿಗೆ ರಕ್ತ ನೀಡಲು ವಿಶೇಷ ರಕ್ತದಾನ ಶಿಬಿರವನ್ನು ಬೆಂಗಳೂರು ಉತ್ತರ ಪ್ರಾದೇಶಿಕ ಸಾರಿಗೆ ಕಚೇರಿ ಅಧಿಕಾರಿಗಳು ಮತ್ತು ಸಿಬ್ಬಂದಿಯು ಸಂಕಲ್ಪ ಇಂಡಿಯಾ ಫೌಂಡೇಷನ್ ಸಹಯೋಗದಲ್ಲಿ ನಡೆಸಿದರು.

ದೇಹದಲ್ಲಿ ರಕ್ತ ಉತ್ಪಾದನೆಯ ಕೊರತೆ ಇರುವ ಮಕ್ಕಳಿಗೆ 15-20 ದಿನಗಳಿಗೊಮ್ಮೆ ರಕ್ತ ನೀಡಬೇಕಾಗುತ್ತದೆ. ಬೇಡಿಕೆಯಷ್ಟು ರಕ್ತ ಪೂರೈಕೆ ಇರುವುದಿಲ್ಲ. ದೇಶದಲ್ಲಿ ಸುಮಾರು 2,500 ಮಕ್ಕಳಿಗೆ ರಕ್ತ ಪೂರೈಸುವ ಕೆಲಸವನ್ನು ಸಂಕಲ್ಪ ಇಂಡಿಯಾ ಫೌಂಡೇಷನ್ ಮಾಡುತ್ತಿದೆ. ಅದಕ್ಕೆ ಪೂರಕವಾಗಿ ಯಶವಂತಪುರ ಸಾರಿಗೆ ಅಧಿಕಾರಿಗಳು ಸ್ಪಂದಿಸಿ ರಕ್ತದಾನ ಶಿಬಿರ ನಡೆಸಿದ್ದಾರೆ ಎಂದು ಫೌಂಡೇಷನ್‌ನ ಮುಖ್ಯಸ್ಥ ನರಸಿಂಹಶಾಸ್ತ್ರಿ ಮಾಹಿತಿ ನೀಡಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ. ಶ್ರೀನಿವಾಸ ಪ್ರಸಾದ್ ಮಾತನಾಡಿ, 'ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆಯನ್ನು ಆಚರಿಸಲಾಗುತ್ತಿದೆ. ರಕ್ತವನ್ನು ಅಪಘಾತದ ಮೂಲಕ ರಸ್ತೆಯಲ್ಲಿ ಚೆಲ್ಲಬೇಡಿ. ರಕ್ತದಾನ ಮಾಡುವ ಮೂಲಕ ಜೀವಗಳನ್ನು ರಕ್ಷಿಸಲು ನೆರವಾಗಿ ಎಂದು ಸಂದೇಶ ಸಾರಲು ರಕ್ತದಾನ ಶಿಬಿರ ಮಾಡಲಾಗಿದೆ. ಜೊತೆಗೆ ತಲಸ್ಸೇಮಿಯಾ ಎಂಬ ವಿರಳ ರೋಗದ ಮಕ್ಕಳಿಗೆ ರಕ್ತದ ನೆರವು ನೀಡುವುದು ಕೂಡ ಉದ್ದೇಶವಾಗಿದೆ. 120 ಮಂದಿ ರಕ್ತದಾನ ಮಾಡಿದ್ದಾರೆ' ಎಂದು ಮಾಹಿತಿ ನೀಡಿದರು.

ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡಿದರೆ ಅಪಘಾತಗಳನ್ನು ನಿಯಂತ್ರಿಸಲು ಸಾಧ್ಯ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಮೋಟಾರು ವಾಹನ ನಿರೀಕ್ಷಕರಾದ ವಿಶ್ವನಾಥ ಎನ್. ಶೆಟ್ಟರ್, ಬಸವರಾಜ್ ಆರಾಧ್ಯ, ಅಮೂಲ್ಯ, ಸಚಿತ ಎನ್., ಶೋಭಾರಾಣಿ ಕೆ.ಎಸ್. ಭಾಗವಹಿಸಿದ್ದರು.

ನಗರ ಜಿಲ್ಲಾ ಮಟ್ಟದ ಅಥ್ಲೆಟಿಕ್ ಕೂಟ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯು (ಬಿಯುಡಿಎಎ) ಜಿಲ್ಲಾಮಟ್ಟದ ಅಥ್ಲೆಟಿಕ್ ಕೂಟವನ್ನು ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ಆಯೋಜಿಸಿದೆ.

ಭಾರತ ಅಥ್ಲೆಟಿಕ್ ಫೆಡರೇಶನ್ ಆಯೋಜಿಸುವ ರಾಷ್ಟ್ರೀಯ ಅಂತರ ಜಿಲ್ಲಾ ಜೂನಿಯರ್ (14 ಮತ್ತು 16 ವರ್ಷದೊಳಗಿನವರ) ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ತಂಡವನ್ನು ಆಯ್ಕೆ ಮಾಡಲು ಈ ಕೂಟವನ್ನು ಆಯೋಜಿಸಲಾಗಿದೆ.

ನಗರ ಜಿಲ್ಲಾ ವ್ಯಾಪ್ತಿಯ ಎಲ್ಲ ಶಾಲಾ ಕಾಲೇಜುಗಳು, ಟ್ರ್ಯಾಕ್ ಮತ್ತು ಫೀಲ್ಡ್ ಕ್ಲಬ್‌ಗಳ ಸ್ಪರ್ಧಿಗಳು ಕೂಟದಲ್ಲಿ ಭಾಗವಹಿಸಬಹುದು ಎಂದು ಬಿಯುಡಿಎಎ ಅಧ್ಯಕ್ಷ ಯು.ವಿ. ಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ: ಮೊ. 9481094580 ಅಥವಾ 9845626244 ಸಂಪರ್ಕಿಸಬೇಕು.

---

18 ವರ್ಷದಿಂದ ಆಗದ ಭೂಮಿಯ ಗುತ್ತಿಗೆ ನವೀಕರಣ, ಸಂಪುಟ ಅನುಮೋದನೆಗೆ ಕಾದಿರುವ ಆಡಳಿತ ಮಂಡಳಿ

ಅಮ್ಮಣ್ಣಿ ಕಾಲೇಜು: ಸ್ವಾಯತ್ತತೆ ರದ್ದಾಗುವ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅತ್ಯಂತ ಹಳೆಯ ಅನುದಾನಿತ ಶಿಕ್ಷಣ ಸಂಸ್ಥೆಯಾದ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು ಸ್ವಾಯತ್ತತೆ ಕಳೆದುಕೊಳ್ಳುವ ಆತಂಕದಲ್ಲಿದೆ.

ಮಲ್ಲೇಶ್ವರದಲ್ಲಿರುವ ಕಾಲೇಜಿಗೆ ಸೇರಿದ 1.5 ಎಕರೆ ಭೂಮಿಯ ಗುತ್ತಿಗೆ ಅವಧಿ ಮುಗಿದು 18 ವರ್ಷ ಕಳೆದರೂ ಈವರೆಗೂ ನವೀಕರಣ ಆಗಿಲ್ಲ. ಹೀಗಾಗಿ ಕಾಲೇಜಿನ ಪ್ರವೇಶಾತಿಗೆ ಅನುಮೋದನೆ ನೀಡಬಾರದು ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.

ಈ ಮಧ್ಯೆ ಉನ್ನತ ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಷರತ್ತಿಗೆ ಒಳಪಟ್ಟು, ಆರು ತಿಂಗಳ ಒಳಗೆ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವಂತೆ ಸೂಚಿಸಿ, ಅನುಮೋದನೆ ನೀಡಿದೆ.

1972ರಲ್ಲಿ ಆರಂಭವಾಗಿರುವ ಈ ಶಿಕ್ಷಣ ಸಂಸ್ಥೆಯಲ್ಲಿ 3,500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಒಂದು ವೇಳೆ ಸರ್ಕಾರ ಗುತ್ತಿಗೆ ಅವಧಿಯನ್ನು ಮುಂದುವರಿಸದೆ ಇದ್ದರೆ ಸ್ವಾಯತ್ತತೆಯನ್ನು ಕಳೆದುಕೊಳ್ಳಲಿದೆ. ಅಷ್ಟೇ ಅಲ್ಲದೆ ಶೈಕ್ಷಣಿಕ ಸಂಯೋಜನೆಯೂ ರದ್ದಾಗಲಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ.

ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ವರ್ಷಕ್ಕೆ ₹1ಸಾವಿರ ದರದಂತೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ 1.5 ಎಕರೆ ಭೂಮಿಯನ್ನು 1978ರಲ್ಲಿ ಈ ಸಂಸ್ಥೆಗೆ ನೀಡಲಾಗಿತ್ತು. ಗುತ್ತಿಗೆ ಅವಧಿ 2008ರಲ್ಲಿ ಮುಗಿದಿದ್ದು, ಇದುವರೆಗೂ ನವೀಕರಣ ಆಗಿಲ್ಲ. ನವೀಕರಣ ಪ್ರಕ್ರಿಯೆ ಬಹಳ ಹಿಂದೆಯೇ ಆರಂಭವಾಗಿದ್ದರೂ, ಇದುವರೆಗೂ ಪೂರ್ಣಗೊಂಡಿಲ್ಲ.

ಗುತ್ತಿಗೆ ನವೀಕರಣ ವಿಷಯ ಕಳೆದ ವಾರ ಸಚಿವ ಸಂಪುಟ ಸಭೆಯ ಮುಂದೆ ಬಂದಿತ್ತು. ಈಗಿನ ಮಾರುಕಟ್ಟೆ ದರದ ಪ್ರಕಾರ ಜಾಗದ ಗುತ್ತಿಗೆ ನವೀಕರಣಕ್ಕೆ ₹90 ಕೋಟಿ ನಿಗದಿ ಮಾಡಬೇಕಾಗಬಹುದು. ಆದರೆ, ಇಷ್ಟೊಂದು ಹಣ ನಿಗದಿ ಮಾಡಿದರೆ ಕಷ್ಟವಾಗುತ್ತದೆ ಎಂದು ಕೆಲವು ಸಚಿವರು ಹೇಳಿದರು. ಆಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ಮಾಡೋಣ ಎಂಬುದಾಗಿ ತಿಳಿಸಿದರು ಎನ್ನಲಾಗಿದೆ.

2022-23ರಲ್ಲಿ ಯುಜಿಸಿಯು ಕಾಲೇಜಿಗೆ ಸ್ವಾಯತ್ತತೆ ನೀಡಿದೆ. ಆದರೆ, ಪರಿಶೀಲನೆ ವೇಳೆ ಕಾಲೇಜಿನ ಜಾಗದ ಗುತ್ತಿಗೆ ಅವಧಿ 2008ರಲ್ಲೇ ಮುಕ್ತಾಯವಾಗಿರುವುದು ಗೊತ್ತಾಗಿದೆ. ಕಾಲೇಜಿಗೆ ಸ್ವಾಯತ್ತತೆ ನೀಡುವ ಸಂದರ್ಭದಲ್ಲಿ ನಿರಾಕ್ಷೇಪಣಾ ಪತ್ರವನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯ ನೀಡಿದ್ದು, ಎರಡೂ ಕಡೆಯಿಂದ ಲೋಪವಾಗಿದೆ ಎಂದು ಗೊತ್ತಾಗಿದೆ.

'ಭೂಮಿಯ ಗುತ್ತಿಗೆ ನವೀಕರಣ ಆಗದೆ ಸ್ವಾಯತ್ತತೆ ಮುಂದುವರಿಸಲು ಆಗುವುದಿಲ್ಲ. ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಕಾಲಮಿತಿಯೊಳಗೆ ಅನುಮತಿ ಪಡೆಯಬೇಕು. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾಲಯ ಸೂಕ್ತ ನಿರ್ಧಾರ ಕೈಗೊಳ್ಳಬೇಕು' ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸೂಚನೆ ನೀಡಿತ್ತು.

ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ನಾಗಾನಂದ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ, ಜಾಗದ ಗುತ್ತಿಗೆ ನವೀಕರಣ ಮಾಡುವಂತೆ ಮನವಿ ಮಾಡುವ ಸಾಧ್ಯತೆ ಇದೆ. ನವೀಕರಣ ಸಂಬಂಧ ಇದುವರೆಗೆ ಸರ್ಕಾರಕ್ಕೆ 126 ಪತ್ರಗಳನ್ನು ಬರೆದಿರುವುದಾಗಿ ಅವರು ತಿಳಿಸಿದರು.

'ಕಾಲೇಜಿನ ಆಡಳಿತ ಮಂಡಳಿಯವರು ನಿಗದಿತ ಅವಧಿಯೊಳಗೆ ಭೂಮಿಯ ಗುತ್ತಿಗೆ ನವೀಕರಣ ಮಾಡಿಸಿಕೊಳ್ಳದೇ ಇದ್ದರೆ ಸ್ವಾಯತ್ತತೆ ರದ್ದಾಗಲಿದೆ. ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯಾಗದಂತೆ ವಿದ್ಯಾರ್ಥಿಗಳನ್ನು ಇತರೆ ಕಾಲೇಜುಗಳಿಗೆ ವರ್ಗಾವಣೆ ಮಾಡಲಾಗುವುದು' ಎಂದು ಬೆಂಗಳೂರು ನಗರ ವಿಶ್ವ ವಿದ್ಯಾಲಯದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.



ಕಾಲೇಜಿನಲ್ಲಿ ಹಿಂದುಳಿದ, ದಲಿತ ಸಮುದಾಯಕ್ಕೆ ಸೇರಿದ, ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಗುತ್ತಿಗೆ ನವೀಕರಣ ವಿಷಯ ಮುಖ್ಯಮಂತ್ರಿ ಗಮನಕ್ಕೆ ತಂದಿದ್ದೇವೆ. ಗೊಂದಲ ಬೇಗನೇ ಬಗೆಹರಿಯುವ ವಿಶ್ವಾಸವಿದೆ.

ಕೆ.ಜೈರಾಜ್, ಮ್ಯಾನೆಜಿಂಗ್ ಟ್ರಸ್ಟಿ



ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜು

ರತ್ನಾಕರವರ್ಣಿ ಪ್ರಶಸ್ತಿ

ಪ್ರಜಾವಾಣಿ ಚಿತ್ರ

ನಗರದಲ್ಲಿ ಹಮ್ಮಿಕೊಂಡಿದ್ದ ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ 39ನೇ ವಾರ್ಷಿಕೋತ್ಸವದಲ್ಲಿ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿಯನ್ನು ಮೂಲ್ಕಿ ಅರಮನೆ ಎಂ. ದುಗ್ಗಣ್ಣ ಸಾವಂತ ಅವರಿಗೆ ನೀಡಿ ಗೌರವಿಸಲಾಯಿತು. ಅವರ ಪತ್ನಿ ಆಶಾ ಲತಾ ಜೊತೆಗಿದ್ದರು. ಚಕ್ರವರ್ತಿ ಸೂಲಿಬೆಲೆ, ಡಿ. ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್ ಉಪಸ್ಥಿತರಿದ್ದರು

ಕೆ.ಎನ್. ರಾಜಣ್ಣ 3ನೇ ಬಾರಿಗೆ ಅಧ್ಯಕ್ಷ?

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ 29ರಂದು ಚುನಾವಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಒಮ್ಮತದ ಆಯ್ಕೆ ಕುರಿತು ಮುಖ್ಯಮಂತ್ರಿ ನೇತೃತ್ವದಲ್ಲಿ ಚರ್ಚೆ
- ಹುದ್ದೆ ಮೇಲೆ ಕಣ್ಣಿಟ್ಟಿರುವ ವಿಧಾನ ಪರಿಷತ್ ಸದಸ್ಯ ಎಸ್.ರವಿ

ಬೆಂಗಳೂರು: ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಸ್ಥಾನಕ್ಕೆ ಇದೇ 29ರಂದು ಚುನಾವಣೆ ನಡೆಯಲಿದ್ದು, ಆ ಸ್ಥಾನದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿರುವ ಶಾಸಕ ಕೆ.ಎನ್. ರಾಜಣ್ಣ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋದರ ಸಂಬಂಧಿ, ವಿಧಾನ ಪರಿಷತ್ ಸದಸ್ಯ ಎಸ್. ರವಿ ಕಣ್ಣಿಟ್ಟಿದ್ದಾರೆ.

ಬ್ಯಾಂಕಿಗೆ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರಿಗೆ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸೋಮವಾರ ಸಂಜೆ ಚಹಾ ಕೂಟ ಏರ್ಪಡಿಸಿದ್ದರು. ಈ ವೇಳೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಒಮ್ಮತದಿಂದ ಆಯ್ಕೆ ಪ್ರಕ್ರಿಯೆ ನಡೆಸುವ ಬಗ್ಗೆ ಚರ್ಚೆ ನಡೆದಿದೆ. ರಾಜಣ್ಣ ಅವರು ಮೂರನೇ ಬಾರಿಗೆ ಅಧ್ಯಕ್ಷರಾಗುವ ಸಾಧ್ಯತೆಯಿದೆ.

29ರಂದು ಬೆಳಿಗ್ಗೆ 11 ಗಂಟೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆದು, 12.30ಕ್ಕೆ ಚುನಾವಣೆ ನಡೆಯಲಿದೆ. ಒಟ್ಟು 21 ನಿರ್ದೇಶಕರ ಪೈಕಿ, ಮೈಸೂರು–ಚಾಮರಾಜನಗರ, ಬಾಗಲಕೋಟೆ ಮತ್ತು ಕೋಲಾರ ಜಿಲ್ಲಾ ಸಹಕಾರಿ ಕೇಂದ್ರ (ಡಿಸಿಸಿ) ಬ್ಯಾಂಕುಗಳನ್ನು ಹೊರತುಪಡಿಸಿ, ಉಳಿದ 18 ಡಿಸಿಸಿ ಬ್ಯಾಂಕುಗಳು ನಾಮನಿರ್ದೇಶಿತರನ್ನು ಈಗಾಗಲೇ ನಿಯೋಜಿಸಿವೆ.

ಅಪೆಕ್ಸ್ ಬ್ಯಾಂಕ್ ನಿರ್ದೇಶಕರ ಜೊತೆ ಸಿದ್ದರಾಮಯ್ಯ ಚರ್ಚೆ ನಡೆಸಿದರು

18 ನಿರ್ದೇಶಕರಲ್ಲಿ 15 ಮಂದಿ ಕಾಂಗ್ರೆಸ್ ಬೆಂಬಲಿಗರಾಗಿದ್ದು, ಇಬ್ಬರು ಬಿಜೆಪಿ (ಕೊಡಗು– ಕೊಡಂದೇರ ಪಿ. ಗಣಪತಿ ಮತ್ತು ಚಿಕ್ಕಮಗಳೂರು– ಬೆಳ್ಳಿ ಪ್ರಕಾಶ್) ಮತ್ತು ಒಬ್ಬ ಜೆಡಿಎಸ್ (ಹಾಸನ– ಆರ್. ಸೂರಜ್) ಬೆಂಬಲಿತರಿದ್ದಾರೆ.

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರವೂ ರಾಜಣ್ಣ ಅವರು ಸಹಕಾರಿ ಕ್ಷೇತ್ರದ ಮೇಲೆ ತಮ್ಮ ಹಿಡಿತ ಮುಂದುವರಿಸಿದ್ದು, ಈಗ ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗಾಗಲೇ ಎರಡು ಬಾರಿ ಅವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. 2001ರ ಅಕ್ಟೋಬರ್‌ನಿಂದ 2005ರ ಏಪ್ರಿಲ್ ಮತ್ತು 2015ರ ಆಗಸ್ಟ್‌ನಿಂದ 2020ರ ಸೆಪ್ಟೆಂಬರ್‌ವರೆಗೆ ಅಧ್ಯಕ್ಷರಾಗಿದ್ದರು. ಮತ್ತೊಂದು ಅವಧಿಗೆ ಅಧ್ಯಕ್ಷರಾಗುವ ನಿರೀಕ್ಷೆಯಲ್ಲಿದ್ದಾರೆ.

ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ದಕ್ಷಿಣ ಡಿಸಿಸಿ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿರುವ ಎಸ್. ರವಿ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡುವ ಉದ್ದೇಶದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ಎರಡು ಬಾರಿ ಕೆ.ಎನ್.ರಾಜಣ್ಣ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿದ್ದರು.

ತುಂಗಭದ್ರಾ ಗೇಟ್ ಅಳವಡಿಕೆ • ಆಧಾರರಹಿತ ಹೇಳಿಕೆ: ಸಚಿವ

‘₹10 ಕೋಟಿ ವಾಪಸ್ ಪಡೆದಿಲ್ಲ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರೋಪ ಮಾಡಿದವರು ದಾಖಲೆ ಕೊಡಲಿ: ಆಗ್ರಹ
- ಕನ್ನಯ್ಯ ನಾಯ್ಡು ಅವರಿಗೆ ಮಾಹಿತಿ ಕೊರತೆ: ಸಚಿವ

ಕೊಪ್ಪಳ/ಹೊಸಪೇಟೆ: ‘ತುಂಗಭದ್ರಾ ಜಲಾಶಯಕ್ಕೆ ಹೊಸ ಕ್ರೆಸ್ಟ್‌ಗೇಟ್‌ಗಳನ್ನು ಅಳವಡಿಸುವ ಕಾಮಗಾರಿಗೆ ಬಿಡುಗಡೆ ಮಾಡಿದ್ದ ತನ್ನ ಪಾಲಿನ ₹10 ಕೋಟಿ ಅನ್ನು ಸರ್ಕಾರ ವಾಪಸ್ ಪಡೆದಿಲ್ಲ’ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಹೊಸಪೇಟೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರೂ ಇದೇ ಮಾತು ಹೇಳಿದ್ದಾರೆ.

ಕೊಪ್ಪಳದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ, ಐಸಿಸಿ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರೂ ಆದ ತಂಗಡಗಿ, ‘ಸರ್ಕಾರ ಹಣ ವಾಪಸ್ ಪಡೆದಿದೆ ಎಂದು ಆಧಾರರಹಿತ ಹೇಳಿಕೆ ನೀಡಿದವರು ದಾಖಲೆ ಕೊಡಲಿ. ಜಲಾಶಯಗಳ ಸುರಕ್ಷತಾ ತಜ್ಞ ಕನ್ನಯ್ಯ ನಾಯ್ಡು ಅವರಿಗೆ ಮಾಹಿತಿ ಕೊರತೆಯಿದೆ’ ಎಂದು ಹೇಳಿದರು.

‘ತುಂಗಭದ್ರಾ ಮಂಡಳಿಗೆ ಕೇಂದ್ರದಿಂದ ಎಲ್ಲ ರಾಜ್ಯಗಳ ಪಾಲಿನ ಅನುದಾನ ಬರುತ್ತದೆ. ಅದೇ ಹಣದ ಬುಕ್ ಅಡ್ಜೆಸ್ಟ್‌ಮೆಂಟ್‌ನಿಂದ ಹಣ ಪಾವತಿಯಾಗುತ್ತದೆ. ಮೊದಲ ಬಾರಿಗೆ ಕರ್ನಾಟಕ ಸರ್ಕಾರ ₹10 ಕೋಟಿ ಕೊಟ್ಟಿದೆ. ನಿಗದಿತ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ರೈತರಿಗೆ ತೊಂದರೆಯಾಗದು’ ಎಂದು ತಿಳಿಸಿದರು.

ಹೊಸಪೇಟೆ ವರದಿ (ವಿಜಯನಗರ): ‘ರಾಜ್ಯ ಸರ್ಕಾರವು ನೀಡಿದ್ದ ₹10 ಕೋಟಿ ಮೊತ್ತವನ್ನು ವಾಪಸ್ ಪಡೆದಿಲ್ಲ. ಕ್ರೆಸ್ಟ್ ಗೇಟ್ ಅಳವಡಿಸುವ ಕಾಮಗಾರಿಗೆ ಅಗತ್ಯ ಅನುಸಾರ ರಾಜ್ಯದ ಪಾಲು ನೀಡಲಾಗುವುದು’ ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

> ಕ್ರೆಸ್ಟ್‌ಗೇಟ್ ಅಳವಡಿಕೆ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ಮೇ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ರೈತರಿಗೆ ಸಕಾಲಕ್ಕೆ ನೀರು ಸಿಗಲಿದೆ. ಈ ವಿಷಯದಲ್ಲಿ ಗೊಂದಲ ಬೇಡ
>
> **ಇ.ತುಕಾರಾಂ**
> ಬಳ್ಳಾರಿ–ವಿಜಯನಗರ ಸಂಸದ

‘ಗೇಟ್ ಅಳವಡಿಸುವ ಕಾಮಗಾರಿಗೆ ಆಂಧ್ರಪ್ರದೇಶ ಸರ್ಕಾರ ₹28 ಕೋಟಿ, ರಾಜ್ಯ ಸರ್ಕಾರ ₹26 ಕೋಟಿ ಕೊಡಬೇಕು. ಆಂಧ್ರಪ್ರದೇಶ ಸರ್ಕಾರ ಈವರೆಗೆ ₹20 ಕೋಟಿ ಕೊಟ್ಟಿದೆ. ರಾಜ್ಯ ಸರ್ಕಾರ ₹10 ಕೋಟಿ ನೀಡಿದೆ. ಉಳಿದ ಹಣವನ್ನು ಹಂತ ಹಂತವಾಗಿ ನೀಡಲಾಗುವುದು’ ಎಂದರು.

ವಿಬಿ ಜಿ ರಾಮ್ ಜಿ ಕಾಯ್ದೆ ಹಿಂಪಡೆಯಲು ಕೇಂದ್ರಕ್ಕೆ ಕಾಂಗ್ರೆಸ್ ಒತ್ತಾಯ

ನರೇಗಾ: ‘ಲೋಕಭವನ’ ಚಲೊ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಹಿಂಪಡೆದು, ನರೇಗಾ ಕಾಯ್ದೆಯನ್ನು ಮರು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಕೆಪಿಸಿಸಿ ಮಂಗಳವಾರ ‘ರಾಜಭವನ ಚಲೊ’ ಹಮ್ಮಿಕೊಂಡಿದೆ.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ಐದು ಕಿ.ಮೀ. ಪಾದಯಾತ್ರೆ ನಡೆಸಲಾಗುವುದು. ಪಂಚಾಯಿತಿ ಮಟ್ಟದಲ್ಲೂ ಹೋರಾಟ ಹಮ್ಮಿಕೊಳ್ಳಲಾಗುವುದು. ವಿಧಾನಸಭೆಯಲ್ಲಿಯೂ ಪ್ರತಿಭಟನೆ ಹಾಗೂ ನಿರ್ಣಯ ತೆಗೆದುಕೊಳ್ಳಲು ನಾವು ಸಜ್ಜಾಗಿದ್ದೇವೆ’ ಎಂದರು.

‘20 ವರ್ಷದ ಹಿಂದೆ ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ನರೇಗಾವನ್ನು ನಾಶ ಮಾಡಲು ಬಿಜೆಪಿ ಹೊರಟಿದೆ. ಮಹಾತ್ಮ ಗಾಂಧಿ ಹೆಸರಿನಲ್ಲಿ ಆರಂಭವಾದ ಈ ಯೋಜನೆ ಗ್ರಾಮೀಣರ ಉದ್ಯೋಗದ ಹಕ್ಕಿಗೆ ಖಾತ್ರಿ ನೀಡಿತ್ತು. ಪ್ರತಿವರ್ಷ ₹6 ಸಾವಿರ ಕೋಟಿ ಮೊತ್ತದ ಕಾಮಗಾರಿ ನಡೆಯುತ್ತಿದ್ದವು. ಆದರೆ, ಈ ಹಕ್ಕು ಈಗ ಮೊಟಕಾಗಿದೆ. ಆದ ಕಾರಣ ದೇಶದ ಉದ್ದಗಲಕ್ಕೂ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನೇತೃತ್ವದಲ್ಲಿ ಹೋರಾಟ ಮಾಡಲಾಗುವುದು’ ಎಂದರು.

ನರೇಗಾ ಬದಲಾವಣೆ ಬಗ್ಗೆ ಜೆಡಿಎಸ್ ವಿರೋಧ ವ್ಯಕ್ತಪಡಿಸದೇ ಇರುವ ಬಗ್ಗೆ ಕೇಳಿದಾಗ, ‘ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೂ ಈ ಬಗ್ಗೆ ಬಾಯಿ ಬಿಡುತ್ತಿಲ್ಲ. ನನ್ನ ಅನುಭವದಲ್ಲಿ ಹೇಳುವುದಾದರೆ ಹೊಸ ಕಾಯ್ದೆಯ ಅನುಷ್ಠಾನ ಅಸಾಧ್ಯ’ ಎಂದರು.

ಮುತ್ತಿಗೆ: ಬಿಜೆಪಿ ಶಾಸಕ ಸುರೇಶ್ ಕುಮಾರ್ ಪ್ರಶ್ನೆ

‘ವಿಧಾನಸಭಾಧ್ಯಕ್ಷರು ಮಂಗಳವಾರ ಬೆಳಿಗ್ಗೆ ವಿಧಾನಸಭೆ ಅಧಿವೇಶನ ಕರೆದಿದ್ದಾರೆ. ಆದರೆ, ಆಡಳಿತ ಪಕ್ಷ ಕಾಂಗ್ರೆಸ್ ಅದೇ ಸಮಯಕ್ಕೆ ಸರಿಯಾಗಿ ಲೋಕಭವನ ಮುತ್ತಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದು ಎಷ್ಟರ ಮಟ್ಟಿಗೆ ಸಮಂಜಸ’ ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಅವರು ಪ್ರಶ್ನಿಸಿದ್ದಾರೆ.

ಒಂದು ಕಡೆ ಸಭಾಧ್ಯಕ್ಷರು ರಾಜ್ಯಪಾಲರ ಭಾಷಣದ ಮೇಲೆ ‘ಗೊಂದಲ’ (ವಂದನಾ) ನಿರ್ಣಯದ ಕುರಿತ ಚರ್ಚೆಯನ್ನು ಕಲಾಪದ ಅಜೆಂಡಾದಲ್ಲಿ ಸೇರಿಸಿದ್ದಾರೆ. ಇದನ್ನು ಆಲಿಸಲು ಆಡಳಿತ ಪಕ್ಷದ ಯಾರೂ ಇರುವುದಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಅವರು ಕೆಲ ಪ್ರಶ್ನೆಗಳನ್ನು ಕೇಳಿದ್ದಾರೆ.
- ಅಧಿವೇಶನ ನಡೆಯುತ್ತಿರುವ ಸಮಯದಲ್ಲೇ ಆಡಳಿತ ಪಕ್ಷ ಲೋಕಭವನಕ್ಕೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡು ತನ್ನ ಶಾಸಕರು ಅದರಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ಹೊರಡಿಸಿರುವುದು ಎಷ್ಟು ಸಮಂಜಸ?
- ಬೆಂಗಳೂರಿನ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಮುತ್ತಿಗೆ ಮಾಡುವ ಕಾರ್ಯಕ್ರಮವನ್ನು ಹೈಕೋರ್ಟ್ ನಿರ್ದೇಶನದಂತೆ ನಿಷೇಧಿಸಲಾಗಿದೆ. ಒಂದು ವೇಳೆ ಆಳುವ ಪಕ್ಷಕ್ಕೆ ಈ ರೀತಿ ಮುತ್ತಿಗೆ ಎಂಬ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟರೆ ಬೇರೆ ಪಕ್ಷಗಳಿಗೂ ಅವಕಾಶ ನೀಡಲಾಗುತ್ತದೆಯೇ?
- ಆಡಳಿತ ನಡೆಸುತ್ತಿರುವ ಪಕ್ಷವೇ ಕಾನೂನನ್ನು ಉಲ್ಲಂಘಿಸುವುದು ಎಷ್ಟು ಸಮಂಜಸ?

ಬಿಜೆಪಿ, ಜೆಡಿಎಸ್‌ನಿಂದ ಇಂದು ಪ್ರತಿಭಟನೆ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕಾಂಗ್ರೆಸ್ ಶಾಸಕರು ಅಪಮಾನ ಮಾಡಿದ್ದನ್ನು ವಿರೋಧಿಸಿ ಮಂಗಳವಾರ ಬೆಳಿಗ್ಗೆ 10.30ಕ್ಕೆ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರಿಂದ ಪ್ರತಿಭಟನೆ ನಡೆಯಲಿದೆ.

ವಿಧಾನಸಭೆಯ ಸಭಾಂಗಣದಲ್ಲಿ ರಾಜ್ಯಪಾಲರಿಗೆ ಬೆರಳು ತೋರಿಸಿ, ಎಚ್ಚರಿಕೆ ಸಂದೇಶ ನೀಡಿ ಅಪಮಾನ ಮಾಡಿದ್ದಾರೆ. ಧಿಕ್ಕಾರ ಕೂಗಿದ್ದಾರೆ. ಆದ್ದರಿಂದ ಬಿ.ಕೆ.ಹರಿಪ್ರಸಾದ್, ಎಸ್.ರವಿ, ಶರತ್ ಬಚ್ಚೇಗೌಡ, ಪ್ರದೀಪ್ ಈಶ್ವರ್ ಅವರನ್ನು ಕೂಡಲೇ ಅಮಾನತು ಮಾಡಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ಆಗ್ರಹಿಸಿದ್ದಾರೆ.

ಪ್ರತ್ಯೇಕ ಅವಘಡ: ಆರು ಸಾವು

ಪ್ರಜಾವಾಣಿ ವಾರ್ತೆ

ಉಡುಪಿ/ತುಮಕೂರು: ರಾಜ್ಯದ ವಿವಿಧೆಡೆ ಸೋಮವಾರ ನಡೆದ ಪ್ರತ್ಯೇಕ ಅವಘಡಗಳಲ್ಲಿ ಆರು ಮಂದಿ ಮೃತಪಟ್ಟಿದ್ದು, ಐವರು ಗಾಯಗೊಡಿದ್ದಾರೆ.

ಉಡುಪಿ ವರದಿ: ಮಲ್ಪೆ ಸಮೀಪದ ಕೋಡಿಬೆಂಗ್ರೆ ಅಳಿವೆ ಪ್ರದೇಶದಲ್ಲಿ ದೋಣಿ ಮಗುಚಿ ಚಾಮರಾಜನಗರ ಜಿಲ್ಲೆಯ ಹರವೆ ಗ್ರಾಮದ ಶಂಕರಪ್ಪ (27), ಮೂಗೂರು ಗ್ರಾಮದ ಸಿಂಧು (25) ಮೃತಪಟ್ಟರು.

ದಿಶಾ ಅಸ್ವಸ್ಥಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಡೆಲ್ಟಾ ಬೀಚ್ ಪಾಯಿಂಟ್‌ನಿಂದ 14 ಮಂದಿ ಪ್ರವಾಸಿಗರು ತೆರಳಿದ್ದರು. ಕೆಲವರು ಲೈಫ್ ಜಾಕೆಟ್ ಧರಿಸಿರಲಿಲ್ಲ ಎಂಬುದು ಗೊತ್ತಾಗಿದೆ. ಪ್ರವಾಸಿಗರು ಮೈಸೂರಿನ ಸರಸ್ವತಿಪುರದ ಕಾಲ್‌ಸೆಂಟರ್‌ನ ನೌಕರರು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ತಿಳಿಸಿದರು.

ಶಂಕರಪ್ಪ

ಸಿಂಧು

ವಿದ್ಯಾರ್ಥಿನಿ ಸಾವು

ಗೋಕರ್ಣ ವರದಿ: ಇಲ್ಲಿಯ ಮೇನ್ ಬೀಚಿನ ಸಮುದ್ರದ ನೀರಿನಲ್ಲಿ ಭಾನುವಾರ ಈಜಲು ತೆರಳಿದ್ದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರು ಮೃತಪಟ್ಟಿದ್ದು, ಇನ್ನೊಬ್ಬ ವಿದ್ಯಾರ್ಥಿಯನ್ನು ರಕ್ಷಿಸಲಾಗಿದೆ.

‘ಕೇರಳ ಕೊಲ್ಲಮ್ ಜಿಲ್ಲೆಯ ಕೊಟ್ಟಾಪುರಂ ನಿವಾಸಿ ಕಲ್ಯಾಣಿ ಅಜೇಯ ಪಿಳ್ಳೆ (22) ಮೃತರು. ಯಾದಗಿರಿಯ ಮಹಮ್ಮದ್ ಯೂಸಫ್ ಅಲಿ (23) ಅವರನ್ನು ರಕ್ಷಿಸಲಾಗಿದೆ. ಕೊಪ್ಪಳದ ವೈದ್ಯಕೀಯ ಕಾಲೇಜಿನ 12 ಮಂದಿ ವಿದ್ಯಾರ್ಥಿಗಳು ಗೋಕರ್ಣ ಪ್ರವಾಸಕ್ಕೆ ಬಂದಿದ್ದಾಗ ಅವಘಡ ಸಂಭವಿಸಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿಗೆ ಕಾರು ಡಿಕ್ಕಿ

ತುಮಕೂರು: ತಾಲ್ಲೂಕಿನ ನೆಲಹಾಳ್ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸೋಮವಾರ ಬೆಳಿಗ್ಗೆ ಲಾರಿಗೆ ಕಾರು ಡಿಕ್ಕಿಯಾಗಿ ಕಾರಿನಲ್ಲಿದ್ದ ಮೂವರು ಮೃತಪಟ್ಟಿದ್ದಾರೆ. ನಾಲ್ವರು ಗಾಯಗೊಂಡಿದ್ದಾರೆ.

ಉತ್ತರ ಪ್ರದೇಶದ ಅನಿಕೇತ್ (25), ಪಂಜಾಬ್‌ನ ಅಬೀರ್ (25), ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಸನ್ಮುಕ್ತಿ (22) ಮೃತರು. ಐವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಎಲ್ಲರೂ ಬೆಂಗಳೂರಿನ ಐ.ಟಿ ಕಂಪನಿಗಳ ಉದ್ಯೋಗಿಗಳು. ವಾರಾಂತ್ಯ ಪ್ರವಾಸ ಮುಗಿಸಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದರು. ನೆಲಹಾಳ್ ಬಳಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಮುಂದೆ ಸಾಗುತ್ತಿದ್ದ ಲಾರಿಗೆ ಡಿಕ್ಕಿ ಆಗಿದೆ. ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೋರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕಲಬುರಗಿ ನೆಕ್ಸ್ಟ್’ ಉದ್ಘಾಟನೆ

ಕಲಬುರಗಿ: ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ವೇಗ ನೀಡಲು ಜಿಲ್ಲಾಡಳಿತ ಸ್ಥಾಪಿಸಿರುವ ‘ಕಲಬುರಗಿ ನೆಕ್ಸ್ಟ್ ಫೌಂಡೇಷನ್’ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಉದ್ಘಾಟಿಸಿದರು.

ಫೌಂಡೇಷನ್ ಸಾರ್ವಜನಿಕ ದತ್ತಿ ಟ್ರಸ್ಟ್ (ಪಬ್ಲಿಕ್ ಚಾರಿಟಬಲ್ ಟ್ರಸ್ಟ್) ಆಗಿದ್ದು, ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಸ್ಥಾಪಿಸಲಾಗಿದೆ. ಸಮಗ್ರ ಅಭಿವೃದ್ಧಿಗೆ ಕಂಪನಿಗಳ ಸಿಎಸ್‌ಆರ್ ನಿಧಿ, ಉದ್ದಿಮೆಗಳ ಕೊಡುಗೆ, ದೇಣಿಗೆಗಳನ್ನು ವೇದಿಕೆ ಮೂಲಕ ಸ್ವೀಕರಿಸಿ ವಿನಿಯೋಗಿಸುವುದು ಇದರ ಉದ್ದೇಶವಾಗಿದೆ.

ಫೌಂಡೇಷನ್‌ಗೆ 12 ಸದಸ್ಯರ ಆಡಳಿತ ಮಂಡಳಿಯಿದೆ. ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾಧಿಕಾರಿ ಉಪಾಧ್ಯಕ್ಷರು, ಕಲಬುರಗಿ ಸಂಸದ, ಕಲಬುರಗಿ ಉತ್ತರ, ದಕ್ಷಿಣ ಕ್ಷೇತ್ರದ ಶಾಸಕರು, ವಿವಿಧ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ರೇಣುಕಾ ಎಲ್ಲಮ್ಮ ದೇವಿ ಜಾತ್ರೆ ಫೆ.1ರಂದು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ಹೊಳೆ ಬೀದಿಯಲ್ಲಿರುವ ರೇಣುಕಾ ಎಲ್ಲಮ್ಮದೇವಿ 54ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ 27ನೇ ವರ್ಷದ ಮಹಾಚಂಡಿಕಾ ಯಾಗದ ಕಾರ್ಯಕ್ರಮಗಳು ಜ.31ರಿಂದ ಫೆ.2ರವರೆಗೆ ನಡೆಯಲಿವೆ.

31ರಂದು ಗಣಪತಿ ಪೂಜೆ, ಕಳಶ ಸ್ಥಾಪನೆ ಸೇರಿ ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿವೆ. ಫೆ.1ರಂದು ಬೆಳಿಗ್ಗೆ 8.30ಕ್ಕೆ ಮಹಾಚಂಡಿಕಾ ಯಾಗ ಆರಂಭವಾಗಲಿದ್ದು, ಬೆಳಿಗ್ಗೆ 11.30ಕ್ಕೆ ಮಹಾಪೂರ್ಣಾಹುತಿ ನಂತರ ಸುಹಾಸಿನಿ ಆರಾಧನೆ ಹಾಗೂ ಕನ್ನಿಕಾ ಆರಾಧನೆ ನಡೆಯಲಿದೆ.

ರೇಣುಕಾ ಎಲ್ಲಮ್ಮ ವಿಗ್ರಹ

ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ, ಮಹಿಳೆಯರಿಂದ ತಂಬಿಟ್ಟಿನ ಆರತಿ ನಡೆಯಲಿದೆ. ಮಧ್ಯಾಹ್ನ 1ರಿಂದ ದೇವಸ್ಥಾನದ ಆವರಣದಲ್ಲಿ ‘ಅನ್ನಸಂತರ್ಪಣೆ’ ಏರ್ಪಡಿಸಲಾಗಿದೆ.

ಸಂಜೆ 4.15ರಿಂದ ನಿಂಬೆಹಣ್ಣಿನ ದೀಪದ ಆರತಿ ಮತ್ತು ಉಯ್ಯಾಲೋತ್ಸವ ನಡೆಯಲಿದೆ. ಸಂಜೆ 6.30ಕ್ಕೆ ಮುತ್ತಿನ ಪಲ್ಲಕ್ಕಿಯಲ್ಲಿ ಪುಷ್ಪಮಾಲೆಗಳಿಂದ ಅಲಂಕೃತವಾದ ದೇವಿಯ ಮೆರವಣಿಗೆಯನ್ನು ಏರ್ಪಡಿಸಲಾಗಿದೆ.

‘ಮುತ್ತಿನ ಪಲ್ಲಕ್ಕಿ’ ಮೆರವಣಿಗೆಯಲ್ಲಿ ತಿರುಪತಿಯ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್ ಸೆಟ್, ಪೂಜಾ ಕುಣಿತ, ತಮಟೆ, ನಗಾರಿ ಸೇರಿ ಹಲವು ಜಾನಪದ ಕಲಾತಂಡಗಳು ಭಾಗವಹಿಸಲಿವೆ.

ಫೆ.2ರಂದು ಬೆಳಿಗ್ಗೆ 6ಕ್ಕೆ ದೇವಿಯನ್ನು ದೇವಸ್ಥಾನದ ಮೂಲಸ್ಥಾನಕ್ಕೆ ಆಹ್ವಾನಿಸಿ, ಬೆಳಿಗ್ಗೆ 8.30ಕ್ಕೆ ಕ್ಷೀರಾಭಿಷೇಕ, ಅಲಂಕಾರ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಾಗಲಿದೆ ಎಂದು ಧರ್ಮದರ್ಶಿ ಶ್ರೀನಿವಾಸ್ ತಿಳಿಸಿದ್ದಾರೆ.

‘ಧ್ವಜ ಹಾರಿಸಿದ ವಿಚಾರ ಬಿಟ್ಟುಬಿಡಿ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಸಂಸ್ಕೃತಿ, ಧಾರ್ಮಿಕತೆಗೆ ಉಡುಪಿ ಹೆಸರುವಾಸಿ. ಪರ್ಯಾಯ ಒಂದು ಧಾರ್ಮಿಕ ಕಾರ್ಯಕ್ರಮ. ಅಲ್ಲಿ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಅವರು ಧ್ವಜ ಹಾರಿಸಿದ ವಿಚಾರವನ್ನು ಇಲ್ಲಿಗೆ ಬಿಟ್ಟುಬಿಡಿ’ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಯಾರೂ ಧಾರ್ಮಿಕ ಭಾವನೆ ಕೆರಳಿಸುವ ಕೆಲಸ ಮಾಡಬಾರದು. ಯಾರು ಏನೇ ಮಾತಾಡಲಿ, ಅಗತ್ಯ ಬಿದ್ದರೆ ನಾನು ಚರ್ಚಿಸುತ್ತೇನೆ’ ಎಂದರು.

ಪರಶುರಾಮ ಥೀಂ ಪಾರ್ಕ್ ಕುರಿತ ಪ್ರಶ್ನೆಗೆ, ‘ಕಾಂಗ್ರೆಸ್‌ನವರಿಗೆ ದೇವರ ವಿಚಾರದಲ್ಲಿ ರಾಜಕೀಯ ಮಾಡುವ ಅಗತ್ಯ ಇಲ್ಲ. ಶೀಘ್ರ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು’ ಎಂದು ಹೇಳಿದರು.

ಓಕುಳಿಯಾಟ...

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಮಂಗಳೂರು ರಥಬೀದಿಯ ವೀರ ವೆಂಕಟರಮಣ ದೇವರ ರಥೋತ್ಸವದ ಮರುದಿನವಾದ ಸೋಮವಾರ ನಡೆದ ಅವಭೃತ ಮಹೋತ್ಸವದಲ್ಲಿ ಭಕ್ತರು ಓಕುಳಿಯಾಡಿ ಸಂಭ್ರಮಿಸಿದರು

‘ಕಾರ್ಮಿಕರಿಗೆ ದ್ರೋಹ ಬಗೆದ ರಾಜ್ಯ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೈಗಾರಿಕಾ ಸಂಬಂಧಗಳ (ಕರ್ನಾಟಕ) ಕರಡು ನಿಯಮಗಳನ್ನು ಪ್ರಕಟಿಸುವ ಮೂಲಕ ರಾಜ್ಯ ಸರ್ಕಾರ ಕಾರ್ಮಿಕರಿಗೆ ದ್ರೋಹ ಬಗೆದಿದೆ. ಕಾರ್ಮಿಕ ವಿರೋಧಿಯಾಗಿರುವ ಈ ಕರಡು ನಿಯಮಗಳನ್ನು ಕೂಡಲೇ ಹಿಂಪಡೆಯಬೇಕು’ ಎಂದು ಸಿಐಟಿಯು ರಾಜ್ಯ ಸಮಿತಿಯ ಅಧ್ಯಕ್ಷ ಮೀನಾಕ್ಷಿ ಸುಂದರಂ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಆಗ್ರಹಿಸಿದ್ದಾರೆ.

‘ರಾಜ್ಯ ಸರ್ಕಾರವು ಕಾರ್ಮಿಕ ಸಂಘಟನೆಗಳ ಅಭಿಪ್ರಾಯ ಪಡೆಯದೇ ಕೆಲವು ಕಠಿಣ ಷರತ್ತುಗಳನ್ನು ಕರಡು ನಿಯಮಗಳಲ್ಲಿ ಸೇರಿಸಿದೆ. ಕಾರ್ಮಿಕ ಸಂಘದ ನೋಂದಣಿ ಶುಲ್ಕವನ್ನು ₹10ರಿಂದ ₹1 ಸಾವಿರಕ್ಕೆ ಹೆಚ್ಚಿಸಿದೆ. ಸಂಘದ ನೋಂದಣಿಗೆ ಅರ್ಜಿ ಸಲ್ಲಿಸಿದ ನಂತರ ಅಧಿಕಾರಿಗಳು ವಿವರಣೆ ಕೇಳಿ ನೀಡುವ ಪ್ರತಿ ನೋಟಿಸ್‌ಗೆ ₹100 ಶುಲ್ಕ ನಿಗದಿಪಡಿಸಿದೆ’ ಎಂದು ದೂರಿದ್ದಾರೆ.

‘ಮಾನ್ಯತೆ ಪಡೆದ ಕಾರ್ಮಿಕ ಸಂಘ ಅಥವಾ ಜಂಟಿ ಚೌಕಾಶಿ ಸಮಿತಿಗಳಿದ್ದರೂ ವರ್ಕ್ಸ್ ಕಮಿಟಿ, ಅಹವಾಲು ಸಮಿತಿಗಳನ್ನು ರಚಿಸಲು ಮಾಲೀಕರಿಗೆ ಅವಕಾಶ ನೀಡಿದೆ. ಕಾರ್ಮಿಕ ಸಂಘಗಳು ಸದಸ್ಯರಿಂದ ವಾರ್ಷಿಕ ವಂತಿಗೆ ರೂಪದಲ್ಲಿ ಸಂಗ್ರಹಿಸುವ ಶುಲ್ಕದ ಮೇಲೆ ನಿರ್ಬಂಧ ವಿಧಿಸಿದೆ. ಸಂಘದ ನಿಧಿ ಬಳಕೆ ಮೇಲೆ ನಿರ್ಬಂಧ ಹೇರಿದೆ’ ಎಂದು ತಿಳಿಸಿದ್ದಾರೆ.

‘ಕಾರ್ಮಿಕರ ಮುಷ್ಕರದ ಹಕ್ಕನ್ನು ಕಠಿಣಗೊಳಿಸಲಾಗಿದೆ. ಕಾರ್ಮಿಕ ಕಾನೂನುಗಳ ಉಲ್ಲಂಘನೆಗಳಿಂದ ಮಾಲೀಕರಿಗೆ ವಿಧಿಸುವ ದಂಡ ಮತ್ತು ಶಿಕ್ಷೆಯಿಂದ ಪಾರು ಮಾಡಲು ಅಧಿಕಾರಿಗಳ ನೇಮಕಕ್ಕೆ ಅವಕಾಶ ಕಲ್ಪಿಸಿದೆ’ ಎಂದು ಆರೋಪಿಸಿದ್ದಾರೆ.

‘ಕೇಂದ್ರ ಸರ್ಕಾರ ರೂಪಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ತಿರಸ್ಕರಿಸುವ, ಮಾರ್ಪಡಿಸುವ, ಹೊಸದಾಗಿ ಕಾನೂನು ರೂಪಿಸುವ ಸಂವಿಧಾನಬದ್ಧ ಅಧಿಕಾರವನ್ನು ಬಳಸುವ ಹೊಣೆಗಾರಿಕೆಯನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ಪ್ರದರ್ಶಿಸಿಲ್ಲ. ನಾಲ್ಕು ಕಾರ್ಮಿಕ ಕಾನೂನುಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಫೆ.12ರಂದು ದೇಶದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದಿದ್ದಾರೆ.

ಹಲಸಂಗಿ: ಚಿನ್ನದಂಗಡಿ ದರೋಡೆ: ವಿದ್ಯಾರ್ಥಿಗೆ ಗುಂಡು

ಪ್ರಜಾವಾಣಿ ವಾರ್ತೆ

ಚಡಚಣ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಹಲಸಂಗಿಯಲ್ಲಿ ಸೋಮವಾರ ದುಷ್ಕರ್ಮಿಗಳು ಪಿಸ್ತೂಲ್‌ನಿಂದ ಗುಂಡು ಹಾರಿಸಿ, ಚಿನ್ನದ ಅಂಗಡಿ ದರೋಡೆ ಮಾಡಿದ್ದಾರೆ. ಆತ್ಮಲಿಂಗ ಹೂಗಾರ (18) ಎಂಬ ವಿದ್ಯಾರ್ಥಿಗೆ ಗುಂಡು ತಗುಲಿ ಗಾಯವಾಗಿದೆ.

‘ಹಲಸಂಗಿ ಮುಖ್ಯರಸ್ತೆಯಲ್ಲಿರುವ ಮಹಾರುದ್ರ ಕಂಚಾಗಾರ ಅವರ ‘ಭೂಮಿಕಾ’ ಜ್ಯುವೆಲ್ಲರಿ ಶಾಪ್‌ಗೆ ಇಬ್ಬರು ಮುಸುಕುಧಾರಿ ವ್ಯಕ್ತಿಗಳು ಬೈಕ್ ಮೇಲೆ ಬಂದು, 205 ಗ್ರಾಂ ಚಿನ್ನಾಭರಣ ಮತ್ತು 1 ಕೆಜಿ ಬೆಳ್ಳಿ ದೋಚಿದ್ದಾರೆ’ ಎಂದು ಎಸ್‌ಪಿ ಲಕ್ಷ್ಮಣ ನಿಂಬರಗಿ ಸುದ್ದಿಗಾರರಿಗೆ ತಿಳಿಸಿದರು.

‘ಕೃತ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದ ಅನಿಲ್ ಬಸಣ್ಣ ಗಲಗಲಿ ಮೇಲೆ ದುಷ್ಕರ್ಮಿ ಗುಂಡು ಹಾರಿಸಿದ. ಅದು ಅಂಗಡಿ ಎದುರು ನಿಂತಿದ್ದ ಆತ್ಮಲಿಂಗ ಹೂಗಾರ ಎಂಬುವರ ಬಲಗಾಲಿಗೆ ತಗುಲಿದೆ’ ಎಂದರು.

‘ನಮ್ಮ ಸೇವೆ ಕುಟುಂಬಕ್ಕಲ್ಲ, ಜನರಿಗಾಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು (ಕಾಂಗ್ರೆಸ್) ಸೇವೆ ಮಾಡುತ್ತಿರುವುದು ನಾಡಿನ ಜನರಿಗಾಗಿಯೇ, ಹೊರತು ಕುಟುಂಬಕ್ಕಾಗಿ ಅಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ತಂದೆಗಾಗಿ ನಾನು ಮುಖ್ಯಮಂತ್ರಿ ಆಗುತ್ತೇನೆ’ ಎಂದು ಎಚ್.ಡಿ. ಕುಮಾರಸ್ವಾಮಿ ನೀಡಿದ ಹೇಳಿಕೆ ಬಗ್ಗೆ ಸುದ್ದಿಗಾರರು ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಶಿವಕುಮಾರ್, ‘ಕುಟುಂಬದ ಆಸೆ, ಭಾವನೆಗಳು, ತೊಂದರೆಯಲ್ಲಿ ಇರುವುದರ ಬಗ್ಗೆ ಅವರು ಮಾತನಾಡಿಕೊಳ್ಳಲಿ. ನಾವು ಜನರಿಗಾಗಿ ರಾಜಕಾರಣ ಮಾಡುತ್ತೇವೆ’ ಎಂದರು.

‘ಹಾಸನದಲ್ಲಿ ನಡೆದ ಸಮಾವೇಶದುದ್ದಕ್ಕೂ ನಿಮ್ಮನ್ನು ಕುಮಾರಸ್ವಾಮಿ ನೆನಪಿಸಿಕೊಂಡಿದ್ದರು’ ಎಂದಾಗ, ‘ನಮ್ಮನ್ನು ನೆನಪಿಸಿಕೊಳ್ಳದಿದ್ದರೆ ಅವರಿಗೆ ಶಕ್ತಿ, ಜೀವ, ಧೈರ್ಯ ಯಾವುದೂ ಬರುವುದಿಲ್ಲ. ಅದಕ್ಕೆ ನೆನಪಿಸಿಕೊಳ್ಳುತ್ತಾರೆ’ ಎಂದು ಹೇಳಿದರು.

‘ಮನೆಗೆ ನುಗ್ಗಿ ಬಂಧಿಸಲಾಯಿತು’ ಎಂಬ ದೇವೇಗೌಡರ ಹೇಳಿಕೆ ಬಗ್ಗೆ ಕೇಳಿದಾಗ, ‘ಕಾನೂನು ಎಲ್ಲರಿಗೂ ಒಂದೇ’ ಎಂದರು.

ಜಂಟಿ ಅಧಿವೇಶನದಲ್ಲಿ ಭಾಷಣ ಮಾಡಿದ ವೇಳೆ ಸದನದಲ್ಲಿ ನಡೆದ ಬೆಳವಣಿಗೆಗಳ ಕುರಿತು ರಾಷ್ಟ್ರಪತಿಗೆ ರಾಜ್ಯಪಾಲರು ವರದಿ ನೀಡಿರುವ ಬಗ್ಗೆ ಕೇಳಿದಾಗ, ‘ಆ ಬಗ್ಗೆ ನನಗೆ ಮಾಹಿತಿಯಿಲ್ಲ. ಆದರೆ, ರಾಜ್ಯಪಾಲರು ಭಾಷಣ ಓದಿ, ರಾಷ್ಟ್ರಗೀತೆ ಆಗುವ ತನಕ ಇರಬಹುದಿತ್ತು. ರಾಜ್ಯಪಾಲರಿಗೆ ನರೇಗಾ ಕುರಿತ ವಿಷಯಗಳಿದ್ದ ಭಾಷಣವನ್ನು ಓದುವುದಕ್ಕೆ ಇಷ್ಟ ಇಲ್ಲದಿದ್ದರೆ ಹಾಗೆ ಇರಬಹುದಿತ್ತು. ಜತೆಗೆ ಸಾಕಷ್ಟು ಬೇರೆ ಅವಕಾಶಗಳೂ ಇದ್ದವು’ ಎಂದು ಹೇಳಿದರು.

ರಾಜೀವ್ ಗೌಡ ಸೆರೆ

ಒಂದನೇ ಪುಟದಿಂದ...

ಸಚಿವ ಜಮೀರ್ ಅಹಮದ್ ಖಾನ್ ಅವರ ಪುತ್ರ ಝೈದ್ ಖಾನ್ ನಟನೆಯ ‘ಕಲ್ಟ್’ ಸಿನಿಮಾದ ಫ್ಲೆಕ್ಸ್ ತೆರವುಗೊಳಿಸಿದ ಶಿಡ್ಲಘಟ್ಟ ನಗರಸಭೆ ಆಯುಕ್ತೆಗೆ ರಾಜೀವ್ ಗೌಡ ಧಮ್ಕಿ ಹಾಕಿದ್ದರು.

ಈ ಆಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ದ್ದವು. ರಾಜೀವ್ ವಿರುದ್ಧ ಅಮೃತಾ ಗೌಡ, ಶಿಡ್ಲಘಟ್ಟ ಜೆಡಿಎಸ್ ಶಾಸಕ ಬಿ.ಎನ್.ರವಿಕುಮಾರ್ ದೂರು ನೀಡಿದ್ದರು. ವಿವಾದ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ರಾಜೀವ್ ಅವರನ್ನು ಕಾಂಗ್ರೆಸ್ ಪಕ್ಷ ಅಮಾನತುಗೊಳಿಸಿತ್ತು.

ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಜ್ವಲ್ ರಿತ್ತಿ ಕುಟುಂಬವನ್ನು ಸಚಿವ ಎಚ್.ಕೆ. ಪಾಟೀಲ ಸನ್ಮಾನಿಸಿದರು

ಪ್ರಜ್ವಲ್ ರಿತ್ತಿ ಕುಟುಂಬಕ್ಕೆ ನಿವೇಶನ, ₹5 ಲಕ್ಷ ನೆರವು–ತಾಯಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ಗದಗ: ಮನೆಯ ತಳಪಾಯ ತೆಗೆಯುವಾಗ ಸಿಕ್ಕ ನಿಧಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದ ಲಕ್ಕುಂಡಿ ಗ್ರಾಮದ ಬಾಲಕ ಪ್ರಜ್ವಲ್ ರಿತ್ತಿ, ತಾಯಿ ಕಸ್ತೂರವ್ವ ರಿತ್ತಿ, ಅಜ್ಜಿ ಗಿರಿಜಮ್ಮ ಅವರಿಗೆ ಸೋಮವಾರ ಜಿಲ್ಲಾಡಳಿತವು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಸನ್ಮಾನಿಸಿತು.

‘ಲಕ್ಕುಂಡಿ ಗ್ರಾಮ ಪಂಚಾಯಿತಿಯ ವಿಶೇಷ ಗ್ರಾಮಸಭೆಯ ನಿರ್ಣಯದಂತೆ ಅವರಿಗೆ 30X40 ಅಳತೆಯ ನಿವೇಶನ ಹಂಚಿಕೆಯ ಹಕ್ಕುಪತ್ರ, ಮನೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಗದಗ ವಿಧಾನಸಭಾ ಕ್ಷೇತ್ರದ ಶಾಸಕರ ವಿವೇಚನಾ ಅನುದಾನದಲ್ಲಿ ₹5 ಲಕ್ಷ ಮಂಜೂರಾತಿ ನೀಡಿದ ಆದೇಶ ಪತ್ರ ನೀಡಲಾಗಿದೆ. ಪ್ರಜ್ವಲ್ ಅವರ ತಾಯಿ ಕಸ್ತೂರವ್ವ ಅವರಿಗೆ ನಗರದ ಎಂಜಿನಿಯರಿಂಗ್, ಮತ್ತು ಮೆಡಿಕಲ್ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಹೊರಗುತ್ತಿಗೆ ಆಧಾರದಡಿ ಅಡುಗೆ ಸಹಾಯಕಿ ಹುದ್ದೆ ನೀಡಲಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಹಾವೇರಿಯಲ್ಲಿ ಮಠಾಧೀಶರು, ಕಾಂಗ್ರೆಸ್–ಬಿಜೆಪಿ ಜನಪ್ರತಿನಿಧಿಗಳ ಸಭೆ

ಬೇಡ್ತಿ: ಪಕ್ಷಾತೀತ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಬೇಡ್ತಿ–ವರದಾ ನದಿ ತಿರುವು ಯೋಜನೆ ಅನುಷ್ಠಾನಕ್ಕೆ ಹೋರಾಟ ಶುರುವಾಗಿದ್ದು, ಸಂಘಟನೆಗಾಗಿ ಮಠಾಧೀಶರು ಮತ್ತು ಪಕ್ಷಾತೀತ ನಾಯಕರ ನೇತೃತ್ವದಲ್ಲಿ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ.

ನಗರದ ಹುಕ್ಕೇರಿಮಠದಲ್ಲಿ ಮಠಾಧೀಶರು, ಕಾಂಗ್ರೆಸ್–ಬಿಜೆಪಿ ನಾಯಕರು, ರೈತ ಮುಖಂಡರ ಸಮ್ಮುಖದಲ್ಲಿ ಸೋಮವಾರ ನಡೆದ ಹೋರಾಟದ ಮೊದಲ ಸಭೆಯಲ್ಲಿ, ‘ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಿ, ಯೋಜನೆ ಜಾರಿಗೆ ಒತ್ತಾಯಿಸಿ ಮನವಿ ಸಲ್ಲಿಸೋಣ’ ಎಂಬ ನಿರ್ಧಾರ ಕೈಗೊಳ್ಳಲಾಯಿತು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಗೆ ಈ ಯೋಜನೆ ಪರಿಹಾರವಾಗಿದೆ. ಕಾಂಗ್ರೆಸ್ ಶಾಸಕ ರುದ್ರಪ್ಪ ಲಮಾಣಿ ಅವರೇ ವಿಧಾನಸಭೆಯ ಉಪಾಧ್ಯಕ್ಷರಿದ್ದಾರೆ. ಯೋಜನೆ ವಿರೋಧಿಸುವ ಉತ್ತರ ಕನ್ನಡ ಜಿಲ್ಲೆಯ ತಮ್ಮ ಶಾಸಕರ ಮನವೊಲಿಸಲಿ. ನಾನು ಅಲ್ಲಿಯ ಸಂಸದರ ಮನವೊಲಿಸುವೆ. ಯೋಜನೆ ಜಾರಿಗೆ ನಾವೆಲ್ಲರೂ ಪಕ್ಷಾತೀತವಾಗಿ ಹೋರಾಡಬೇಕು’ ಎಂದು ಸಲಹೆ ನೀಡಿದರು.

ಹಾವೇರಿ ಹುಕ್ಕೇರಿಮಠದಲ್ಲಿ ‘ಬೇಡ್ತಿ–ವರದಾ ನದಿ ತಿರುವು ಯೋಜನೆ ಹೋರಾಟ’ದ ಸಭೆ ಸೋಮವಾರ ನಡೆಯಿತು

> ವರದಾ–ಬೇಡ್ತಿ ನದಿ ಜೋಡಣೆ ಹೋರಾಟಕ್ಕೆ ಬೆಂಬಲವಿದೆ. ಡಿಪಿಆರ್ ಆದ ನಂತರ ತಜ್ಞರ ಅಭಿಪ್ರಾಯ ಪಡೆದು ಮುನ್ನಡೆಯುತ್ತೇವೆ
>
> **ಶಿವಾನಂದ ಪಾಟೀಲ**
> ಜಿಲ್ಲಾ ಉಸ್ತುವಾರಿ ಸಚಿವ

ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ, ‘ಯೋಜನೆಯಲ್ಲಿ ರಾಜಕೀಯ ಬೇಡ. ಉತ್ತರ ಕನ್ನಡ ನಮ್ಮ ಪಕ್ಕದ ಜಿಲ್ಲೆ. ನಾವು ಬಯಲು ಸೀಮೆ ಜನ. ನೀರಿನ ಕೊರತೆ ಇರುವುದನ್ನು ಅವರಿಗೆ ತಿಳಿಸೋಣ’ ಎಂದರು. ಇದಕ್ಕೆ ಶಿಗ್ಗಾವಿ ಶಾಸಕ ಯಾಸೀರ್ ಅಹಮದ್ ಖಾನ್ ಪಠಾಣ, ಹಾನಗಲ್ ಶಾಸಕ ಶ್ರೀನಿವಾಸ ಮಾನೆ ಧ್ವನಿಗೂಡಿಸಿದರು.

ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಸವಣೂರು ದೊಡ್ಡಹುಣಸೆ ಕಲ್ಮಠದ ಚನ್ನಬಸವೇಶ್ವರ ಸ್ವಾಮೀಜಿ ಮಾತನಾಡಿದರು.

ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ, ಕುಮಾರ ಸ್ವಾಮೀಜಿ, ಹೊಸರಿತ್ತಿಯ ಗುದ್ದಲೀಶ್ವರ ಸ್ವಾಮೀಜಿ, ಕರ್ಜಗಿಯ ಶಿವಯೋಗಿ ಸ್ವಾಮೀಜಿ, ಅಕ್ಕಿಆಲೂರಿನ ಶಿವಬಸವ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ ಪಾಲ್ಗೊಂಡಿದ್ದರು.

‘ದರೋಡೆ: ತುಂಬಾ ಗೊಂದಲ’

ಪ್ರಜಾವಾಣಿ ವಾರ್ತೆ

ತುಮಕೂರು: ‘ಬೆಳಗಾವಿಯ ಬಳಿಯ ಚೋರ್ಲಾ ಘಾಟ್ ಬಳಿ ನಡೆದ ₹400 ಕೋಟಿ ಮಹಾ ದರೋಡೆ ಪ್ರಕರಣದ ಕುರಿತು ಮಹಾರಾಷ್ಟ್ರ ಸರ್ಕಾರ ಎಸ್‌ಐಟಿ ರಚಿಸಿದೆ. ಈವರೆಗೆ ಸ್ವಲ್ಪ ಮಾಹಿತಿ ಸಿಕ್ಕಿದ್ದು ಅದರಲ್ಲೂ ತುಂಬಾ ಗೊಂದಲಗಳಿವೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.


ಜಿ.ಪರಮೇಶ್ವರ

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಸ್‌ಐಟಿ ವರದಿ ಸಲ್ಲಿಸುವ ತನಕ ಏನೂ ಹೇಳಲು ಆಗುವುದಿಲ್ಲ’ ಎಂದು ಹೇಳಿದರು.

‘ಇದುವರೆಗೆ ಬಂದ ಮಾಹಿತಿ ಪ್ರಕಾರ ಈ ಪ್ರಕರಣದಲ್ಲಿ ಪೊಲೀಸರು ಭಾಗಿಯಾಗಿದ್ದು ಕಂಡುಬಂದಿಲ್ಲ. ತನಿಖೆಯಲ್ಲಿ ಏನು ಬರುತ್ತದೆ ಎಂಬುವುದು ನೋಡಬೇಕು’ ಎಂದರು.

ದೂರು ಅಸ್ಪಷ್ಟ: ’₹400 ಕೋಟಿ ಲೂಟಿ ಮಾಡಲಾಗಿದೆ ಎಂಬ ದೂರು ಅಸ್ಪಷ್ಟವಾಗಿದೆ. ನಿರ್ದಿಷ್ಟ ಸ್ಥಳ ಉಲ್ಲೇಖಿಸದ ಕಾರಣ ವದಂತಿಯಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬೆಳಗಾವಿಯಲ್ಲಿ ಪ್ರತಿಕ್ರಿಯಿಸಿದ್ದಾರೆ.

‘ಘಾಟ್ ವಿಭಾಗವು ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ವ್ಯಾಪ್ತಿಯಲ್ಲಿ ಹರಡಿದೆ. ಮಹಾರಾಷ್ಟ್ರ ಪೊಲೀಸರು ಮಾಹಿತಿ ಹಂಚಿಕೊಂಡರೆ, ನಮ್ಮ ಪೊಲೀಸರು ತನಿಖೆ ಮುಂದುವರಿಸುವರು’ ಎಂದರು.

ಬಿಜೆಪಿಯವರ ಸುಳ್ಳು: ‘ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಜನರ ದಾರಿ ತಪ್ಪಿಸುತ್ತಿದ್ದಾರೆ. ಅಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹಣ ಸಾಗಿಸುತ್ತಿದ್ದರೆನ್ನಲಾಗಿದೆ’ ಎಂದು ಸಚಿವ ಎನ್.ಎಸ್. ಬೋಸರಾಜು ಟೀಕಿಸಿದರು.

‘ಟ್ರಕ್ ಸಹಿತ ಹೈಜಾಕ್ ಆಗಿರುವ ₹400 ಕೋಟಿ ಕಾಂಗ್ರೆಸ್ಸಿನದ್ದು’ ಎಂಬ ಮಹಾರಾಷ್ಟ್ರ ಮುಖ್ಯಮಂತ್ರಿ ಅವರ ಹೇಳಿಕೆಗೆ ಹೀಗೆ ಪ್ರತಿಕ್ರಿಯಿಸಿದರು.

ಮಡಿಕೇರಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ವಾಹನ ಹೈಜಾಕ್ ಮಾಡಿದವರು, ದೂರು ನೀಡಿದ ಎಲ್ಲ ಮಹಾರಾಷ್ಟ್ರದವರೇ. ತನಿಖೆ ನಡೆಯುತ್ತಿದ್ದು ಕಾನೂನು ಕ್ರಮವಾಗಲಿದೆ’ ಎಂದರು.

ನಾಲಗೆಯಲ್ಲಿದೆ ಆರೋಗ್ಯದ ಸವಿ

• ಡಾ. ಕುಶ್ವಂತ್ ಕೋಳಿಬೈಲು

ದಿನನಿತ್ಯದ ಜೀವನದಲ್ಲಿ ಬಾಯಿರುಚಿಗೆ ಅದರದೇ ಆದ ಪ್ರಾಮುಖ್ಯವಿದೆ. ನಮ್ಮ ಸಂಸ್ಕೃತಿಯ ಆಧಾರದಲ್ಲಿ ವಿವಿಧ ಜನರಿಗೆ ಅವರವೇ ಆದ ಆಹಾರಪದ್ಧತಿಗಳಿವೆ. ದೇಹದ ಆರೋಗ್ಯಕ್ಕೆ ಸಮಪ್ರಮಾಣದಲ್ಲಿ ಪೋಷಕಾಂಶಗಳಿರುವ ಆಹಾರ ಅಗತ್ಯವೆಂಬುದು ಎಲ್ಲರಿಗೂ ಅರಿವಿದ್ದರೂ ಆ ಆಹಾರದ ರುಚಿಯ ಬಗ್ಗೆ ಎಲ್ಲರಿಗೂ ಅವರದೇ ಆದ ಇಷ್ಟ-ಕಷ್ಟಗಳು ಇರುತ್ತವೆ

ಮನುಷ್ಯನ ನಾಲಗೆಯಲ್ಲಿರುವ ವಿಶೇಷ ಕಣಗಳು ವಿವಿಧ ಬಗೆಯ ರುಚಿಯನ್ನು ನಿಖರವಾಗಿ ಗ್ರಹಿಸುವಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುತ್ತವೆ. ರುಚಿಯನ್ನು ಗ್ರಹಿಸುವ ಮೊಗ್ಗುಗಳು (Taste Buds) ನಾಲಗೆಯ ಮೇಲೆ ಸ್ಥಾಪಿತವಾಗಿರುವ ವಿಶೇಷ ಕಣಗಳಾಗಿವೆ. ಅವುಗಳ ಮೂಲಕ ಸಿಹಿ, ಉಪ್ಪು, ಹುಳಿ, ಕಹಿ ಮತ್ತು ಖಾರದ ಅಂಶವನ್ನು ನಮ್ಮ ಮಿದುಳು ಗುರುತಿಸಬಲ್ಲದು. ಈ ರುಚಿಯ ಮೊಗ್ಗುಗಳು ಆಹಾರ ಪದಾರ್ಥಗಳ ಸಂಪರ್ಕಕ್ಕೆ ಬಂದ ನಂತರ ನಡೆಯುವ ರಾಸಾಯನಿಕ ಕ್ರಿಯೆಯು ನರಗಳ ಮೂಲಕ ಸಂಚರಿಸಿ ಮಿದುಳನ್ನು ತಲುಪಿದ ನಂತರ, ಮಿದುಳು (Gustatory Cortex) ಆ ಸಂವಹನವನ್ನು ವಿವಿಧ ಬಗೆಯ ರುಚಿಯನ್ನಾಗಿ ಅರ್ಥೈಸಿಕೊಳ್ಳುತ್ತದೆ. ಮನುಷ್ಯನ ದಿನನಿತ್ಯದ ಜೀವನದಲ್ಲಿಯೂ ಬಾಯಿರುಚಿಗೆ ಅದರದೇ ಆದ ಪ್ರಾಮುಖ್ಯವಿದೆ. ನಮ್ಮ ಸಂಸ್ಕೃತಿಯ ಆಧಾರದಲ್ಲಿ ವಿವಿಧ ಜನರಿಗೆ ಅವರವೇ ಆದ ಆಹಾರಪದ್ಧತಿಗಳಿವೆ. ನಮ್ಮ ದೇಹದ ಆರೋಗ್ಯಕ್ಕೆ ಸರಿಯಾದ ಪ್ರಮಾಣದಲ್ಲಿ ಪೋಷಕಾಂಶಗಳಿರುವ ಆಹಾರ ಅಗತ್ಯವೆಂಬುದು ಎಲ್ಲರಿಗೂ ಅರಿವಿದ್ದರೂ ಆ ಆಹಾರದ ರುಚಿಯ ಬಗ್ಗೆ ಎಲ್ಲರಿಗೂ ಅವರದೇ ಆದ ಇಷ್ಟ-ಕಷ್ಟಗಳು ಇರುತ್ತವೆ.

ಮಾನವನ ರುಚಿಸಂವೇದನೆಯ ವಿಕಾಸವು ಲಕ್ಷಾಂತರ ವರ್ಷಗಳ ಸತತ ಬದಲಾವಣೆಗಳ ಫಲಿತಾಂಶವಾಗಿದೆ. ಇದು ಆಹಾರದ ಆಯ್ಕೆ, ಬದುಕುಳಿಯುವ ಹಂಬಲ ಮತ್ತು ಪೌಷ್ಟಿಕಾಂಶದ ಅಗತ್ಯಗಳ ಆಧಾರದ ಮೇಲೆ ರೂಪಿತವಾಗಿದೆ. ಪ್ರಾಣಿಗಳಿಗೆ ಹೋಲಿಸಿದರೆ ಮಾನವನ ರುಚಿಗ್ರಹಿಕೆಯು ವಿಶಿಷ್ಟವಾಗಿದೆ. ಮನುಷ್ಯನ ನಾಲಗೆಯಲ್ಲಿ ಸುಮಾರು ಹತ್ತು ಸಾವಿರದಷ್ಟು ಸಂಖ್ಯೆಯಲ್ಲಿ ಕಂಡುಬರುವ ರುಚಿಯ ಮೊಗ್ಗುಗಳು ಹುಟ್ಟಿಕೊಂಡ ಮೂಲ ಉದ್ದೇಶವು ಆಹಾರವನ್ನು ಗುರುತಿಸುವುದು ಮತ್ತು ವಿಷಯುಕ್ತ ಪದಾರ್ಥಗಳನ್ನು ಸೇವಿಸದಿರುವುದೇ ಆಗಿದೆ. ಮಾನವನ ವಿಕಸನದ ಪ್ರಾರಂಭದಲ್ಲಿ ಮಾನವರು ಕಾಡಿನಲ್ಲಿ ಸಿಗುವ ಹಣ್ಣು, ಬೇರುಗಳನ್ನು ತಿನ್ನುತ್ತಿದ್ದರು. ವಿಷಕಾರಿ ಸಸ್ಯಗಳನ್ನು ಸೇವಿಸುವುದನ್ನು ತಪ್ಪಿಸಲು ಕಹಿರುಚಿಯನ್ನು ನಾಲಗೆಯು ಗುರುತಿಸಲು ಕಲಿಯಿತು; ತದನಂತರ ಪೌಷ್ಟಿಕಯುಕ್ತ ಅಂಶಗಳನ್ನು ನೀಡಬಲ್ಲ ವಿವಿಧ ಹಣ್ಣುಗಳನ್ನು ಗುರುತಿಸಲು ಮತ್ತು ಅವುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಸಿಹಿರುಚಿಯನ್ನು ಗುರುತಿಸುವ ಸಾಮರ್ಥ್ಯವೂ ನಮ್ಮಲ್ಲಿ ವಿಕಸನಗೊಂಡಿತು. ಬೆಂಕಿಯ ಆವಿಷ್ಕಾರದ ನಂತರ ಮನುಷ್ಯರು ಬೇಯಿಸಿದ ಆಹಾರವನ್ನು ಮತ್ತು ಬೇಯಿಸಿದ ಮಾಂಸವನ್ನು ತಿನ್ನಲು ಪ್ರಾರಂಭಿಸಿದರು. ಬೇಯಿಸುವುದು ಮತ್ತು ಅಡುಗೆ ಮಾಡುವುದು ವಿಷಕಾರಿ ಆಹಾರವನ್ನು ಸೇವಿಸುವ ಅಪಾಯವನ್ನು ಕಡಿಮೆ ಮಾಡಿತು. ಇದೇ ಸಮಯದಲ್ಲಿ ಖಾರದ ರುಚಿಯನ್ನು ಗ್ರಹಿಸುವ ಸಾಮರ್ಥ್ಯವು ಮನುಷ್ಯರಲ್ಲಿ ಮೂಡಿತು. 'ವಿಟಮಿನ್ ಸಿ' ಎಂಬ ಬಹಳ ಮುಖ್ಯವಾದ ಪದಾರ್ಥವನ್ನು ಮಾನವನ ದೇಹಕ್ಕೆ ತಯಾರಿಸಿಕೊಳ್ಳುವ ಶಕ್ತಿಯಿರುವುದಿಲ್ಲ. ವಿಟಮಿನ್ ಸಿ ದೇಹಕ್ಕೆ ದೊರೆಯುವುದು ಮನುಷ್ಯ ಬದುಕುಳಿಯಲು ಅಗತ್ಯವಾಗಿದೆ.

> ರುಚಿಯನ್ನು ಗ್ರಹಿಸುವ ಶಕ್ತಿಯು ಆರೋಗ್ಯವನ್ನು ಕಾಪಾಡುವಲ್ಲಿ ವಿಶೇಷ ಪಾತ್ರ ವಹಿಸುತ್ತದೆ

ವಿಟಮಿನ್ ಸಿ ಪದಾರ್ಥವು ಹುಳಿಯ ಅಂಶವಿರುವ ಹಣ್ಣು ಮತ್ತು ತರಕಾರಿಗಳಲ್ಲಿ ಕಂಡುಬರುವ ಕಾರಣ ಮನುಷ್ಯರು ಹುಳಿಯ ರುಚಿಯನ್ನು ಗ್ರಹಿಸಲು ವಿಕಸನಗೊಂಡರು.

ಮಾನವರು ಮಾಂಸ ಮತ್ತು ಸಸ್ಯ – ಎರಡನ್ನೂ ತಿನ್ನುವವರಾದ್ದರಿಂದ, ಐದು ಮುಖ್ಯ ರುಚಿಗಳನ್ನು (ಸಿಹಿ, ಹುಳಿ, ಉಪ್ಪು, ಕಹಿ, ಖಾರ) ಗ್ರಹಿಸುವ ಸಾಮರ್ಥ್ಯವನ್ನು ಕಾಲಕ್ರಮೇಣ ರೂಢಿಸಿಕೊಂಡರು. ಬರಿಯ ಸಸ್ಯಾಹಾರವನ್ನು ಮತ್ತು ಬೇಯಿಸಿದ ಆಹಾರವನ್ನು ಸೇವಿಸದೆ ವಿವಿಧ ಬಗೆಯ ಹುಲ್ಲುಗಳನ್ನು ಮೇಯುವ ಹಸುವಿನಲ್ಲಿ ವಿಷಯುಕ್ತ ಹುಲ್ಲುಗಳನ್ನು ಗುರುತಿಸುವ ಕಾರಣಕ್ಕಾಗಿ ಮನುಷ್ಯರಿಗಿಂತ ಎರಡು ಪಟ್ಟು ಹೆಚ್ಚು ರುಚಿಯ ಮೊಗ್ಗುಗಳು ಹಸುವಿನಲ್ಲಿದೆ. ಮಾಂಸಾಹಾರವನ್ನು ಮಾತ್ರ ಸೇವಿಸುವ ಹುಲಿ ಮತ್ತು ಚಿರತೆಯ ನಾಲಗೆಗಳಲ್ಲಿ ಸಿಹಿಯ ರುಚಿಯನ್ನು ಗ್ರಹಿಸುವ ರುಚಿಯ ಮೊಗ್ಗುಗಳು ಇರುವುದಿಲ್ಲ. ನಮ್ಮ ವಿಕಸನದಲ್ಲಿ ಬೇಯಿಸಿದ ಮಾಂಸಕ್ಕೆ ಹೊಂದಿಕೊಂಡಿರುವ ಮನುಷ್ಯರ ನಾಲಗೆ ರುಚಿಯ ಮೊಗ್ಗುಗಳು ಹಸಿಮಾಂಸದ ರುಚಿಯನ್ನು ಬೇರೆ ಪ್ರಾಣಿಗಳಂತೆ ಗ್ರಹಿಸುವ ಸಾಮರ್ಥ್ಯವನ್ನು ಹೊಂದಿಲ್ಲ.

ಹಲವು ಕಾಯಿಲೆಗಳ ಸಂದರ್ಭದಲ್ಲಿ ಮನುಷ್ಯನ ನಾಲಗೆಯು ರುಚಿಯನ್ನು ಗ್ರಹಿಸುವ ಶಕ್ತಿಯನ್ನು ಕಳೆದು ಕೊಳ್ಳುತ್ತದೆ ಅಥವಾ ಕೆಲವು ಸಂದರ್ಭಗಳಲ್ಲಿ ರುಚಿಯನ್ನು ತಪ್ಪಾಗಿ ಗ್ರಹಿಸುತ್ತದೆ. ಸಂಪೂರ್ಣವಾಗಿ ರುಚಿ ತಿಳಿಯದ ಸ್ಥಿತಿಯನ್ನು 'ಏಜೂಸಿಯಾ' ಎಂದು ಕರೆಯುತ್ತೇವೆ. ಇದು ಬಹಳ ಅಪರೂಪ. ರುಚಿಯನ್ನು ಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುವ ಕಾಯಿಲೆಯನ್ನು ನಾವು 'ಹೈಪೋಜೂಸಿಯಾ' ಎಂದು ಕರೆಯುತ್ತೇವೆ. ಬಾಯಿಯಲ್ಲಿ ಸದಾ ಲೋಹದಂತಹ ಅಥವಾ ಉಪ್ಪಿನ ರುಚಿಯಂತೆ ಕಂಡುಬರುವ ಕಾಯಿಲೆಯನ್ನು 'ಡಿಸ್ಜೂಸಿಯಾ' ಎಂದು ಕರೆಯುತ್ತೇವೆ. ಕೆಲವು ಸಂದರ್ಭಗಳಲ್ಲಿ ರುಚಿಯ ಮೊಗ್ಗುಗಳಲ್ಲಿ ಸಮಸ್ಯೆಗಳು ಕಂಡು ಬಂದಾಗ ಒಂದು ವಸ್ತುವಿನ ರುಚಿ ಮತ್ತೊಂದರಂತೆ ಕಂಡುಬರುವುದನ್ನು 'ಪ್ಯಾರಾಜೂಸಿಯಾ' ಎಂದು ಕರೆಯುತ್ತೇವೆ.

ರುಚಿಯ ಮೊಗ್ಗುಗಳು ರುಚಿಯನ್ನು ಕಳೆದುಕೊಳ್ಳಲು ಹಲವು ಕಾರಣಗಳಿವೆ. ಮುಖ್ಯವಾಗಿ ವೈರಲ್ ಸೋಂಕುಗಳು ಬಂದಾಗ ಅವು ರುಚಿಯ ಮೊಗ್ಗುಗಳನ್ನು ನಾಶ ಮಾಡುತ್ತವೆ. ರುಚಿಯ ಮೊಗ್ಗುಗಳು ಮತ್ತೆ ಚೇತರಿಸಿಕೊಳ್ಳಲು ಕೆಲವು ವಾರಗಳು ಬೇಕಾಗುತ್ತದೆ. ಕೋವಿಡ್ ವೈರಸ್ ಸೋಂಕು ಬಂದ ಸಂದರ್ಭದಲ್ಲಿ ಅದು ರುಚಿಯನ್ನು ನಾಶ ಮಾಡಿತ್ತು. ಕೆಲವು ಆ್ಯಂಟಿಬಯಾಟಿಕ್ ಔಷಧಗಳು, ಬಿಪಿಮಾತ್ರೆಗಳು ಕೂಡ ರುಚಿಯನ್ನು ಕೆಡಿಸಬಲ್ಲವು. ವಿಟಮಿನ್ ಮತ್ತು ಝಿಂಕ್ ಪ್ರಮಾಣವು ದೇಹದಲ್ಲಿ ಕಡಿಮೆಯಾದಾಗಲೂ ರುಚಿಯನ್ನು ಗ್ರಹಿಸುವ ಸಾಮರ್ಥ್ಯ ಕಡಿಮೆಯಾಗಬಲ್ಲದು. ಹಲ್ಲಿನ ಸಮಸ್ಯೆಗಳು, ಒಸಡಿನ ಸಮಸ್ಯೆಗಳು ಮತ್ತು ಧೂಮಪಾನ ಕೂಡ ರುಚಿಯ ಮೊಗ್ಗನ್ನು ನಾಶಮಾಡಬಲ್ಲವು. ಪಾರ್ಕಿನ್ಸನ್ ಮತ್ತು ಆಲ್ಝೀಮರ್ಸ್ ಕಾಯಿಲೆಗಳು ರುಚಿಯ ಮೇಲೆ ತಮ್ಮ ಪ್ರಮಾಣ ಬೀರುತ್ತವೆ. ನಾಲಗೆಯು ರುಚಿಯನ್ನು ಸರಿಯಾಗಿ ಗ್ರಹಿಸುವ ಶಕ್ತಿಯನ್ನು ಕಳೆದುಕೊಂಡರೆ ದೇಹವು ತನಗೆ ಅಗತ್ಯವಾದ ಪೋಷಕಾಂಶಗಳಿರುವ ಆಹಾರವನ್ನು ಸೇವಿಸುವಲ್ಲಿ ಎಡವಬಹುದು. ಮನುಷ್ಯರಲ್ಲಿ ವಿಶೇಷವಾಗಿ ವಿಕಸನಗೊಂಡ ರುಚಿಯನ್ನು ಗ್ರಹಿಸುವ ಶಕ್ತಿಯು ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ವಿಶೇಷ ಪಾತ್ರವನ್ನು ವಹಿಸುತ್ತದೆ.

> ಅಭಿಪ್ರಾಯಭೇದ ಮತ್ತು ಟೀಕೆ – ಇವೆರಡರ ನಡುವೆ ಸೂಕ್ಷ್ಮ, ಆದರೆ ಸ್ಪಷ್ಟ ವ್ಯತ್ಯಾಸವಿದೆ

ಟೀಕೆಗಳಿಗೆ ಸೋಲಬೇಡಿ

• ರಘು ವಿ.

ಮಾನವನ ಬದುಕು ಕೇವಲ ದೇಹದ ಚಲನೆಗಳಲ್ಲ; ಅದು ಆಲೋಚನೆಗಳ, ಭಾವನೆಗಳ, ನಂಬಿಕೆಗಳ ಮತ್ತು ಮೌಲ್ಯಗಳ ಸಂಕಲನ. ಪ್ರತಿಯೊಬ್ಬನೂ ತನ್ನ ಅನುಭವ, ಸಂಸ್ಕೃತಿ, ಶಿಕ್ಷಣ ಮತ್ತು ಪರಿಸ್ಥಿತಿಯ ಆಧಾರದ ಮೇಲೆ ಯೋಚಿಸುತ್ತಾನೆ. ಆದ್ದರಿಂದ ಎಲ್ಲರೂ ಒಂದೇ ರೀತಿಯಾಗಿ ಯೋಚಿಸಬೇಕು ಎಂಬ ನಿರೀಕ್ಷೆಯೇ ಅಸಹಜ. ಈ ಸಹಜ ಭಿನ್ನತೆಯನ್ನೇ ನಾವು 'ಅಭಿಪ್ರಾಯಭೇದ' ಎಂದು ಕರೆಯುತ್ತೇವೆ. ಆದರೆ ಇಂದಿನ ಸಮಾಜದಲ್ಲಿ ಈ ಭಿನ್ನತೆಯನ್ನು ಸಹಿಸುವ ಶಕ್ತಿ ನಿಧಾನವಾಗಿ ಕುಗ್ಗುತ್ತಿರುವುದು ಚಿಂತಾಜನಕ.

ಅಭಿಪ್ರಾಯಭೇದ ಮತ್ತು ಟೀಕೆ – ಇವೆರಡರ ನಡುವೆ ಸೂಕ್ಷ್ಮ, ಆದರೆ ಸ್ಪಷ್ಟ ವ್ಯತ್ಯಾಸವಿದೆ. ಅಭಿಪ್ರಾಯಭೇದ ಎಂದರೆ ವಿಚಾರದ ಮಟ್ಟದಲ್ಲಿ ಭಿನ್ನ ನಿಲುವು. ಟೀಕೆ ಎಂದರೆ ಬಹುಸಾರಿ ವ್ಯಕ್ತಿಯ ಮಟ್ಟದಲ್ಲಿ ದಾಳಿ. ಒಂದು ವಿಚಾರವನ್ನು ವಿರೋಧಿಸುವುದು ಆರೋಗ್ಯಕರ; ವ್ಯಕ್ತಿಯನ್ನೇ ಕುಗ್ಗಿಸುವುದು ಕುಸಂಸ್ಕೃತಿ.

ಇಂದಿನ ಸಾಮಾಜಿಕ ಜಾಲತಾಣಗಳ ಕಾಲಘಟ್ಟದಲ್ಲಿ ಈ ವ್ಯತ್ಯಾಸವೇ ಮರೆತುಹೋಗುತ್ತಿದೆ. ಫೇಸ್‌ಬುಕ್, ಎಕ್ಸ್ (ಟ್ವಿಟ್ಟರ್), ಇನ್‌ಸ್ಟಾಗ್ರಾಂ, ಯೂಟ್ಯೂಬ್—ಎಲ್ಲೆಡೆ ಅಭಿಪ್ರಾಯಭೇದಕ್ಕಿಂತ ನಿಂದನೆ, ಅವಮಾನ, ವ್ಯಂಗ್ಯ ಹೆಚ್ಚಾಗುತ್ತಿದೆ. ಒಂದು ಪೋಸ್ಟ್, ಒಂದು ವಿಡಿಯೊ, ಒಂದು ಮಾತು ಸಾಕು—ಟೀಕೆಯ ಬಿರುಗಾಳಿ ಆರಂಭವಾಗುತ್ತದೆ. ಇಲ್ಲಿ ಟೀಕೆ ಸಂವಾದವಾಗುವುದಿಲ್ಲ; ಅದು ಹಿಂಸಾತ್ಮಕ ಭಾಷೆಯಾಗುತ್ತದೆ. ಸಮಕಾಲೀನ ಉದಾಹರಣೆಯಾಗಿ ನೋಡಿದರೆ, ಸಾರ್ವಜನಿಕ ವ್ಯಕ್ತಿಗಳು ಮಾತ್ರವಲ್ಲ, ಸಾಮಾನ್ಯ ನಾಗರಿಕರೂ ಈ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಒಬ್ಬ ಶಿಕ್ಷಕ ತನ್ನ ಅಭಿಪ್ರಾಯ ಹೇಳಿದರೆ ಟ್ರೋಲ್, ಒಬ್ಬ ವಿದ್ಯಾರ್ಥಿ ಪ್ರಶ್ನೆ ಕೇಳಿದರೆ ಅವಮಾನ, ಒಬ್ಬ ಮಹಿಳೆ ಧೈರ್ಯವಾಗಿ ಮಾತನಾಡಿದರೆ ನಿಂದನೆ. ಇದು ಕೇವಲ ಡಿಜಿಟಲ್ ಸಮಸ್ಯೆಯಲ್ಲ; ಇದು ಮಾನಸಿಕ ಆರೋಗ್ಯದ ಸಮಸ್ಯೆ.

ಇಂತಹ ಸಂದರ್ಭದಲ್ಲಿ ಟೀಕೆಗೆ ಉದಾಸೀನವಾಗಿರುವುದು ಆಧ್ಯಾತ್ಮಿಕ ಮತ್ತು ಮಾನಸಿಕ ಶಕ್ತಿ. ಪ್ರತಿಯೊಂದು ಮಾತಿಗೂ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಪ್ರತಿಯೊಂದು ಅಭಿಪ್ರಾಯವೂ ಮೌಲ್ಯಯುತವಲ್ಲ. ವಿವೇಕ ಎಂದರೆ ಆಯ್ಕೆಮಾಡುವ ಬುದ್ಧಿಮತ್ತೆ—ಏನು ಸ್ವೀಕರಿಸಬೇಕು, ಏನು ಬಿಟ್ಟುಬಿಡಬೇಕು ಎಂಬ ನಿರ್ಧಾರ. ಇದೊಂದು ವಿಧದಲ್ಲಿ 'ವೈರಾಗ್ಯ'ದ ತತ್ತ್ವ; ಅಂಟಿಕೊಳ್ಳದ ಮನಸ್ಸು. ಹೊರಗಿನ ಮಾತುಗಳಿಗೆ ಒಳಗಿನ ಶಾಂತಿಯನ್ನು ಒಪ್ಪಿಸದ ಸ್ಥಿತಿ; ಇದು ಆತ್ಮನಿಯಂತ್ರಣ.

ರಚನಾತ್ಮಕ ಟೀಕೆ ನಮಗೆ ಅಗತ್ಯವೇ. ಅದು ನಮ್ಮನ್ನು ಬೆಳೆಸುತ್ತದೆ, ಸುಧಾರಿಸುತ್ತದೆ, ದಾರಿತೋರುತ್ತದೆ. ಆದರೆ ಅಸೂಯೆಯಿಂದ ಹುಟ್ಟಿದ, ದ್ವೇಷದಿಂದ ಬಂದ, ಅಜ್ಞಾನದಿಂದ ಮಾಡಿದ ಟೀಕೆಗಳಿಗೆ ಮೌಲ್ಯವನ್ನು ನೀಡುವುದು ನಮ್ಮ ಶಕ್ತಿಯನ್ನು ವ್ಯರ್ಥ ಮಾಡಿದಂತೆ. ಪ್ರತಿಯೊಂದು ಟೀಕೆಯನ್ನು ಹೊತ್ತುಕೊಂಡು ನಡೆಯುವ ಮನಸ್ಸು ಬೇಗ ದಣಿಯುತ್ತದೆ. ಶಿಕ್ಷಣಕ್ಷೇತ್ರಕ್ಕೂ ಇದು ಅನ್ವಯಿಸುತ್ತದೆ. ವಿದ್ಯಾರ್ಥಿಗೆ ವಿಭಿನ್ನ ಅಭಿಪ್ರಾಯ ಹೇಳುವ ಅವಕಾಶ ಕೊಡದ ತರಗತಿ ಬುದ್ಧಿವಿಕಾಸದ ಶತ್ರು. ಕೆಲಸದ ಸ್ಥಳದಲ್ಲೂ ಇದೇ ಸತ್ಯ. ಭಿನ್ನಾಭಿಪ್ರಾಯವನ್ನು ದ್ರೋಹವಾಗಿ ನೋಡುವ ಸಂಸ್ಥೆಗಳಲ್ಲಿ ಸೃಜನಶೀಲತೆ ಸಾಯುತ್ತದೆ. ಮನೆಗಳಲ್ಲೂ ಈ ಸಂಸ್ಕೃತಿ ಬೇಕು. ಮಕ್ಕಳಿಗೆ 'ನಿನ್ನ ಅಭಿಪ್ರಾಯ ಹೇಳು' ಎಂದು ಹೇಳುವುದಷ್ಟೇ ಸಾಕಾಗುವುದಿಲ್ಲ; 'ಇತರರ ಅಭಿಪ್ರಾಯಕ್ಕೂ ಗೌರವ ಕೊಡು' ಎಂಬ ಪಾಠವೂ ಬೇಕು. ಇದು ವ್ಯಕ್ತಿತ್ವ ನಿರ್ಮಾಣದ ಮೂಲಭೂತ ಪಾಠ.

ಎಲ್ಲರ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದು ಬುದ್ಧಿವಂತಿಕೆಯಲ್ಲ; ಭಿನ್ನಾಭಿಪ್ರಾಯವಿದ್ದರೂ ಗೌರವದಿಂದ ನಡೆದುಕೊಳ್ಳುವುದು ನಿಜವಾದ ಜಾಣ್ಮೆ. ಹಾಗೆಯೇ, ಪ್ರತಿಯೊಂದು ಟೀಕೆಗೆ ತಲೆಕೆಡಿಸಿಕೊಳ್ಳದೆ, ನಮ್ಮ ಮೌಲ್ಯ, ಗುರಿ ಮತ್ತು ಸತ್ಯದ ಮೇಲೆ ನಿಂತು ಸಾಗುವುದು ನಿಜವಾದ ಆತ್ಮಬಲ.

ನಾವೇನು ಮಾಡಬಹುದು?

1. **ಪ್ರಜ್ಞಾಪೂರ್ವಕವಾಗಿ ವೈವಿಧ್ಯವನ್ನು ಹುಡುಕಿ (Consciously Seek Diversity):** ನಮ್ಮ ನಿಲುವುಗಳಿಗೆ ವಿರುದ್ಧವಾಗಿದ್ದರೂ, ವಿಷಯದ ದೃಷ್ಟಿಯಿಂದ ಮೌಲ್ಯಯುತ ಅಭಿಪ್ರಾಯಗಳನ್ನು ಹೊಂದಿರುವ ಪತ್ರಿಕೆಗಳ ಕಥನಗಳು, ಪುಸ್ತಕಗಳು ಅಥವಾ ವ್ಯಕ್ತಿಗಳನ್ನು ಅನುಸರಿಸುವುದರಿಂದ ಇಂಥದೊಂದು ಹುಡುಕಾಟವನ್ನು ಪ್ರಾರಂಭಿಸಬಹುದು. ನಮ್ಮ ಪರಿಚಿತ ವಲಯದ ಹೊರಗೆ ನೋಡುವ, ಅಂಥ ವ್ಯಕ್ತಿ–ವಿಷಯಗಳೊಂದಿಗೆ ಬೆರೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು.
2. **ಟೀಕೆಯನ್ನು 'ವ್ಯಕ್ತಿ'ಗೆ ಅಲ್ಲ, 'ವಿಷಯ'ಕ್ಕೆ ಸೀಮಿತಗೊಳಿಸಿ:** ಟೀಕೆಗಳು ಬಂದಾಗ, 'ಇವನು ಯಾಕೆ ಹೀಗೆ ಹೇಳುತ್ತಾನೆ?' ಎಂದು ವ್ಯಕ್ತಿಯ ಮೇಲೆ ದಾಳಿ ಮಾಡುವ ಬದಲು, 'ಈ ವಿಷಯದಲ್ಲಿ ಅವರು ಹೇಳುವುದರಲ್ಲಿ ಯಾವುದಾದರೂ ಸ್ವೀಕಾರಾರ್ಹ ಸತ್ಯಾಂಶವಿದೆಯೇ?' ಎಂದು ಪರಿಶೀಲಿಸುವ ಸ್ವಭಾವವನ್ನು ಬೆಳೆಸಿಕೊಳ್ಳಬೇಕು.
3. **ಸಂವಾದದ ಸಂಸ್ಕೃತಿಯನ್ನು ಬೆಳೆಸಿ:** ವಾದ-ವಿವಾದಗಳನ್ನು 'ಗೆಲ್ಲುವ-ಸೋಲುವ' ಪಂದ್ಯವೆಂದು ನೋಡದೆ, ಪರಸ್ಪರ ಕಲಿಯುವ ಪ್ರಕ್ರಿಯೆಯೆಂದು ನೋಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. 'ನಾನು ನಿನ್ನನ್ನು ಬದಲಾಯಿಸಲು ಬಂದಿಲ್ಲ, ನಿನ್ನ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಬಂದಿದ್ದೇನೆ' ಎಂಬ ಮನಃಸ್ಥಿತಿಯನ್ನು ನಾವೂ ರೂಢಿಸಿಕೊಳ್ಳಬೇಕು.
4. **ತಪ್ಪೊಪ್ಪಿಕೊಳ್ಳುವ ಧೈರ್ಯವನ್ನು ತೋರಿ:** ನಾವು ತಪ್ಪು ಮಾಡಿದಾಗ, ಅದನ್ನು ಒಪ್ಪಿಕೊಳ್ಳುವುದು ಮತ್ತು ಕ್ಷಮೆ ಕೇಳುವುದು ದೌರ್ಬಲ್ಯವಲ್ಲ; ಅದು ಬಲಿಷ್ಠ ವ್ಯಕ್ತಿತ್ವದ ಸಂಕೇತ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

17) ಒಬ್ಬ ಜೀವ ವಿಮಾ ಏಜೆಂಟರು ಪಡೆದ 100 ಪಾಲಿಸಿದಾರರ ವಯಸ್ಸುಗಳ ವಿವರಣೆಯ ದತ್ತಾಂಶಗಳು ಕೆಳಗಿನಂತೆ ಇವೆ. ಪಾಲಿಸಿಗಳನ್ನು 18 ವರ್ಷ ದಾಟಿದ ಮತ್ತು 60 ವರ್ಷಕ್ಕಿಂತ ಕಡಿಮೆ ವಯಸ್ಸಿರುವ ಜನರಿಗೆ ಮಾತ್ರ ನೀಡಿದ್ದರೆ ವಯಸ್ಸುಗಳ ಮಧ್ಯಾಂಕವನ್ನು ಲೆಕ್ಕಾಚಾರ ಮಾಡಿ

ವಯಸ್ಸು (ವರ್ಷಗಳಲ್ಲಿ)	ಪಾಲಿಸಿದಾರರ ಸಂಖ್ಯೆ
Below 20	2
Below 25	6
Below 30	24
Below 35	45
Below 40	78
Below 45	89
Below 50	92
Below 55	98
Below 60	100

ಪರಿಹಾರ:–

ವರ್ಗಾಂತರ	ಆವೃತ್ತಿ	ಸಂಚಿತ ಆವೃತ್ತಿ
15-20	2	2
20-25	4	6
25-30	18	24
30-35	21	45
35-40	33	78
40-45	11	89
45-50	3	92
50-55	6	98
55-60	2	100

N = 100 ಮತ್ತು N/2 = 50

ಮಧ್ಯಾಂಕದ ವರ್ಗ(Median class) = 35-40

ಈಗ l = 35, cf = 45, f = 33 ಮತ್ತು h = 5

ಮಧ್ಯಾಂಕ $= l + \left[\frac{\frac{n}{2} - cf}{f}\right] \times h$

ಮಧ್ಯಾಂಕ(Median) = 35 + [(50 – 45)/33] × 5
= 35 + (25/33)
= 35.76

ವಯಸ್ಸುಗಳ ಮಧ್ಯಾಂಕ = 35.76 ವರ್ಷಗಳು

18) ಜಾನ್ ಮತ್ತು ಜೀವಂತಿ ಇವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳ ಸಂಖ್ಯೆ 45 ಆಗಿದೆ. ಇವರಿಬ್ಬರೂ ತಲಾ 5 ಗೋಲಿಗಳನ್ನು ಕಳೆದುಕೊಂಡರೆ ಇವರ ಬಳಿ ಇರುವ ಗೋಲಿಗಳ ಸಂಖ್ಯೆಗಳ ಗುಣಲಬ್ಧ 124 ಆಗುತ್ತದೆ. ಹಾಗಾದರೆ ಆರಂಭದಲ್ಲಿ ಅವರ ಬಳಿ ಇದ್ದ ಗೋಲಿಗಳ ಸಂಖ್ಯೆ ಎಷ್ಟು ಎಂಬುದನ್ನು ಕಂಡುಹಿಡಿಯಲು ಬಯಸುತ್ತೇವೆ. ಇದರ ವರ್ಗ ಸಮೀಕರಣ ಕಂಡುಹಿಡಿಯಿರಿ

ಪರಿಹಾರ:– ಜಾನ್ ಬಳಿ ಇರುವ ಗೋಲಿ x ಆಗಿರಲಿ

ಆಗ ಜೀವಂತಿ ಬಳಿ ಇರುವ ಗೋಲಿ $45 - x$

5 ಗೋಲಿಗಳನ್ನು ಕಳೆದುಕೊಂಡಾಗ, ಜಾನ್‌ನ ಬಳಿ ಉಳಿದ ಗೋಲಿಗಳ ಸಂಖ್ಯೆ = $x - 5$

5 ಗೋಲಿಗಳನ್ನು ಕಳೆದುಕೊಂಡಾಗ, ಜೀವಂತಿಯ ಬಳಿ ಉಳಿದ ಗೋಲಿಗಳ ಸಂಖ್ಯೆ = $45 - x - 5 = 40 - x$

∴ ಅವುಗಳ ಗುಣಲಬ್ಧ = $(x-5)(40-x)$
$= 40x - x^2 - 200 + 5x$
$= -x^2 + 45x - 200$

ಹೀಗೆ, $-x^2 + 45x - 200 = 124$

ಅಂದರೆ, $-x^2 + 45x - 324 = 0$

ಅಂದರೆ, $x^2 - 45x + 324 = 0$

ಆದ್ದರಿಂದ, ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು ವರ್ಗ ಸಮೀಕರಣ $x^2 - 45x + 324 = 0$ ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿದೆ.

19) $800 m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯವೇ? ಹೌದು ಎಂದಾದರೆ, ಅದರ ಉದ್ದ ಮತ್ತು ಅಗಲಗಳನ್ನು ಕಂಡುಹಿಡಿಯಿರಿ.

ಪರಿಹಾರ: ಒಂದು ಆಯತಾಕಾರದ ಮಾವಿನ ತೋಪ ಅಗಲ x m ಆಗಿರಲಿ

ಒಂದು ಆಯತಾಕಾರದ ಮಾವಿನ ತೋಪ ಉದ್ದ $2x$ m ಆಗಿರಲಿ

ಆದ್ದರಿಂದ ಒಂದು ಆಯತಾಕಾರದ ಮಾವಿನ ತೋಪಿನ ವಿಸ್ತೀರ್ಣ= ಉದ್ದ x ಅಗಲ = $2x \times x$ m

ಸಮಸ್ಯೆಯ ಪ್ರಕಾರ

$2x^2 = 800 \Rightarrow x^2 = 800/2 = 400$

$x = \pm\sqrt{400}$

$x = \pm 20$

$x = +20, \quad x = -20,$

x ನ ಬೆಲೆ ನಕಾರಾತ್ಮಕವಾಗಿರಲು ಸಾಧ್ಯವಿಲ್ಲ ಹಾಗಾಗಿ $x = 20$

$2x = 2(20) = 40$

$800 m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯ

ಅದರ ಉದ್ದ = 20 m ಮತ್ತು ಅಗಲ = 40 m

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

REVISION : MODEL QUESTIONS

17. If the radius of a sphere is measured as 9 cm with an error, 0.03 cm then find the approximate error in calculating its volume.

Ans:- Let r be the radius of sphere and Δr be the error in measuring the radius

$$V = \frac{4}{3}\pi r^3 \Rightarrow \frac{dV}{dr} = 4\pi r^2$$

$$\text{and } dV = \left(\frac{dV}{dr}\right)\Delta r$$

$$\Rightarrow dV = 4\pi\,(9)^2\,(0.03) = 9.72\,\pi\ cm^3$$

18. Evaluate $\int \frac{dx}{\sin^2 x \cos^2 x}$

Ans :– $\int \frac{1}{\sin^2 x \cos^2 x}dx = \int \frac{\sin^2 + \cos^2 x}{\sin^2 x \cos^2 x}dx$

$\Rightarrow \int \frac{\sin^2 x}{\sin^2 x \cos^2 x}dx + \int \frac{\cos^2 x}{\sin^2 x \cos^2 x}dx \left(\sin^2 x \cos^2 = 1\right)$

$\Rightarrow \int \frac{1}{\cos^2 x}dx + \int \frac{1}{\sin^2 x}dx$

$\Rightarrow \int \sec^2 x\,dx + \int cosec^2 x\,dx$

$\Rightarrow \tan x + \cot x + c$

19. Evaluate $\int \log x\,dx$

Ans:- Integration by parts f(x) = logx, g(x) = 1

$\int f(x)\,g(x)\,dx = f(x)\int g(x) - \int \{f'(x)\int g(x)\,dx\}\,dx$

$= \log x.x - \int\left\{\frac{1}{x}x\right\}dx$

$= \log x.\ x - \int dx = \log x.\ x - x + c$

$= x(\log x - 1) + c$

20. Find the order and degree of the differential equation

Ans:- order : 2; degree : 1.

21. If the position vectors of the points A and B are $\hat{i} + 2\hat{j} - 3\hat{k}$ and $\hat{j} - \hat{k}$ find the direction cosines of $\overrightarrow{AB}$

Ans:- $\overrightarrow{OA} = \hat{i} + 2\hat{j} - 3\hat{k}$ and $\overrightarrow{OB} = \hat{j} - \hat{k}$

$\overrightarrow{AB} = \overrightarrow{OB} - \overrightarrow{OA} = -\hat{i} - \hat{j} + 2\hat{k}\ |\overrightarrow{AB}| = \sqrt{6}$

∴ dc' are $\frac{-1}{\sqrt{6}}, \frac{-1}{\sqrt{6}}, \frac{2}{\sqrt{6}}$

22. Find the vector of magnitude 8 units in the direction of the vector $\vec{a} = 5\hat{i} - \hat{j} + 2\hat{k}$

Ans :– $|\vec{a}| = \sqrt{30}$

vector of magnitude 8 units $= 8\frac{\vec{a}}{|\vec{a}|} = 8\left(\frac{5\hat{i} - \hat{j} + 2\hat{k}}{\sqrt{30}}\right)$

$= \frac{40}{\sqrt{30}}\hat{i} - \frac{8}{\sqrt{30}}\hat{j} + \frac{16}{\sqrt{30}}\hat{k}$

23. Find the distance of the point (2, 3, -5) from the plane $\vec{r}.(\hat{i} + 2\hat{j} - 2\hat{k}) = 9$

Ans :– Equation of plane is,

$$\left(\left(x\hat{i} + y\hat{j} + z\hat{k}\right).\left(\hat{i} + 2\hat{j} - 2\hat{k}\right)\right) - 9 = 0$$

$$\Rightarrow x + 2y - 2z - 9 = 0$$

$$d = \left|\frac{ax_1 + by_1 + cz_1 + d}{\sqrt{a^2 + b^2 + c^2}}\right|$$

$$d = \left|\frac{1(2) + 2(3) - 2(-5) - 9}{\sqrt{1^2 + 2^2 + 2^2}}\right| = \frac{9}{3} = 3$$

24. A die is thrown. If E is the event 'the number appearing is a multiple of 3' and F is the event 'the number appearing is even'. Find whether F and E are independent?

Ans:- Sample space S={1, 2, 3, 4, 5, 6}, E = {3, 6}, F ={2,4,6} and E∩F = {6}

$P(E) = \frac{2}{6} = \frac{1}{3}$, $P(F) = \frac{3}{6} = \frac{1}{2}$ and $P(E \cap F) = \frac{1}{6}$

$P(E).P(F) = \frac{1}{3}\frac{1}{2} = \frac{1}{6}$

P(E). P(F) = P (E ∩ F)

∴ F and E are independent events.

25. Verify whether the function f : A → B where A = R - {3} and B = R – {1} defined by $f(x) = \frac{x-2}{x-3}$ is one – one and on to or not.

Give reason?

Ans:- $\forall x_1, x_2 \in R - \{3\}$

$f(x_1) = f(x_2)$

$\Rightarrow \frac{x_1 - 2}{x_1 - 3} = \frac{x_2 - 2}{x_2 - 3} \Rightarrow x_1 = x_2,$

f is one – one $\exists\, y \in R - \{1\}$, such that $\frac{x-2}{x-3} = y$

$x - 2 = y(x - 3) \Rightarrow x - 2 = xy - 3y$

$\Rightarrow x - xy = 2 - 3y \Rightarrow x(1 - y) = 2 - 3y$

$\Rightarrow x = \frac{2-3y}{1-y}$

consider $f(x) = f\left(\frac{2-3y}{1-y}\right) = \frac{\frac{2-3y}{1-y} - 2}{\frac{2-3y}{1-y} - 3}$

(by taking LCM and simplify)

f(x) = y

∴ f in on to

consider $f(x) = f\left(\frac{2-3y}{1-y}\right) = \frac{\frac{2-3y}{1-y} - 2}{\frac{2-3y}{1-y} - 3}$

(by taking LCM and simplify)

f(x) = y

∴ f in on to

‘ಸಿಂಧೂರ’ ದರ್ಶನ, ಸಂಸ್ಕೃತಿ ಅನಾವರಣ

ಬೆಂಗಳೂರಿನಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ವಿದ್ಯಾರ್ಥಿನಿಯೊಬ್ಬರು ಭಾರತ ಮಾತೆ ವೇಷ ಧರಿಸಿ ಗಮನ ಸೆಳೆದರು –ಪ್ರಜಾವಾಣಿ ಚಿತ್ರ

ನವದೆಹಲಿ (ಪಿಟಿಐ): ಸಾಂಸ್ಕೃತಿಕ ಪರಂಪರೆ, ದೇಶದ ಆರ್ಥಿಕ ಪ್ರಗತಿ ಮತ್ತು ಆಪರೇಷನ್ ಸಿಂಧೂರ ಸಮಯದಲ್ಲಿ ಬಳಸಲಾದ ಕ್ಷಿಪಣಿಗಳು, ಯುದ್ಧವಿಮಾನಗಳನ್ನು ಒಳಗೊಂಡ ಸೇನಾ ಶಕ್ತಿಯ ಭವ್ಯ ಪ್ರದರ್ಶನವು ರಾಷ್ಟ್ರದ ರಾಜಧಾನಿಯ ಕರ್ತವ್ಯ ಪಥದಲ್ಲಿ ಸೋಮವಾರ ನಡೆದ 77ನೇ ಗಣರಾಜ್ಯೋತ್ಸವ ಸಮಾರಂಭಕ್ಕೆ ಮೆರುಗು ತಂದಿತು.

ಐರೋಪ್ಯ ಕೌನ್ಸಿಲ್‌ನ ಅಧ್ಯಕ್ಷ ಆಂಟೋನಿಯೊ ಕೋಸ್ಟ ಮತ್ತು ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು. ಐರೋಪ್ಯ ಒಕ್ಕೂಟದ ಇಬ್ಬರು ಪ್ರಮುಖ ನಾಯಕರ ಉಪಸ್ಥಿತಿಯು ಭಾರತ-ಯೂರೋಪ್ ನಡುವಿನ ರಾಜತಾಂತ್ರಿಕ ಸಂಬಂಧ ವೃದ್ಧಿಯಾಗುವುದಕ್ಕೆ ಸಾಕ್ಷಿಯಾಯಿತು.

‘ವಂದೇ ಮಾತರಂ’ ಗೀತೆಗೆ 150 ವರ್ಷಗಳು ತುಂಬಿರುವುದು ಈ ಬಾರಿಯ ಸಮಾರಂಭದ ಕೇಂದ್ರಬಿಂದು ಆಗಿದ್ದರೂ, ಭಾರತೀಯ ಸೇನೆಯ ‘ಸಿಂಧೂರ’ ಕಾರ್ಯಾಚರಣೆ ಕೂಡಾ ಮಹತ್ವ ಪಡೆಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗೌರವ ವಂದನೆ ಸ್ವೀಕರಿಸುವುದರೊಂದಿಗೆ ಭವ್ಯ ಮೆರವಣಿಗೆಗೆ ಚಾಲನೆ ಲಭಿಸಿತು. ಮುರ್ಮು ಅವರು ಕೋಸ್ಟ ಮತ್ತು ಉರ್ಸುಲಾ ಅವರೊಂದಿಗೆ ಸಾರೋಟಿನಲ್ಲಿ ಕರ್ತವ್ಯ ಪಥಕ್ಕೆ ಬಂದರು.

ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಕೇಂದ್ರದ ಇತರ ಹಲವು ಸಚಿವರು, ಸೇನೆಯ ಉನ್ನತ ಅಧಿಕಾರಿಗಳು, ವಿದೇಶಗಳ ರಾಜತಾಂತ್ರಿಕರು ಮತ್ತು ಸರ್ಕಾರದ ಹಿರಿಯ ಅಧಿಕಾರಿಗಳು ಮೆರವಣಿಗೆಯನ್ನು ಕಣ್ತುಂಬಿಕೊಂಡರು.

> ಭಾರತದ ಯಶಸ್ಸು ಜಗತ್ತನ್ನು ಹೆಚ್ಚು ಸ್ಥಿರ, ಸಮೃದ್ಧ ಹಾಗೂ ಸುರಕ್ಷಿತಗೊಳಿಸುತ್ತದೆ. ಅದರಿಂದ ನಾವೆಲ್ಲರೂ ಪ್ರಯೋಜನ ಪಡೆಯುತ್ತೇವೆ
> **ಉರ್ಸುಲಾ ಫಾಂಡರ್ ಲೇಯನ್**, ಐರೋಪ್ಯ ಆಯೋಗದ ಅಧ್ಯಕ್ಷೆ

ಬ್ರಹ್ಮೋಸ್ ಮತ್ತು ಆಕಾಶ್ ಕ್ಷಿಪಣಿ ವ್ಯವಸ್ಥೆ, ರಾಕೆಟ್ ಲಾಂಚರ್ ‘ಸೂರ್ಯಾಸ್ತ್ರ’, ಸೇನೆಯಲ್ಲಿರುವ ಅತ್ಯಾಧುನಿಕ ಯುದ್ಧ ಟ್ಯಾಂಕ್ ‘ಅರ್ಜುನ’ ಮತ್ತು ಸ್ವದೇಶಿಯವಾಗಿ ಅಭಿವೃದ್ಧಿಪಡಿಸಿರುವ ಇತರ ಶಸ್ತ್ರಾಸ್ತ್ರಗಳು ಗಮನ ಸೆಳೆದವು.

ಮೂರೂ ಭದ್ರತಾಪಡೆಗಳು ನಡೆಸುವ ‘ಜಂಟಿ ಕಾರ್ಯಾಚರಣೆ’ ಬಿಂಬಿಸುವ ಸ್ತಬ್ಧಚಿತ್ರಗಳು ಹಾಗೂ ಯುದ್ಧದ ಸನ್ನಿವೇಶದ ಪ್ರತ್ಯಕ್ಷತೆಯು ಸೇನೆಯ ಸಾಮರ್ಥ್ಯವನ್ನು ತೆರೆದಿಟ್ಟಿತು. ಸೇನಾ ವ್ಯವಹಾರಗಳ ಇಲಾಖೆಯು (ಡಿಎಂಎ) ಪ್ರದರ್ಶಿಸಿದ ಸ್ತಬ್ಧಚಿತ್ರವು ‘ಆಪರೇಷನ್ ಸಿಂಧೂರ’ದಲ್ಲಿ ಭಾರತದ ವಿಜಯ ಮತ್ತು ನಿರ್ಣಾಯಕ ಕಾರ್ಯಾಚರಣೆಯ ಸಮಯದಲ್ಲಿ ಸಶಸ್ತ್ರ ಪಡೆಗಳ ಮೂರೂ ವಿಭಾಗಗಳ ಸಮನ್ವಯತೆಯನ್ನು ಅನಾವರಣಗೊಳಿಸಿತು.

ಡಿಎಂಎ ಸ್ತಬ್ಧಚಿತ್ರವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ಒಂದು ಬದಿಯಲ್ಲಿ ಕಾರ್ಯಾಚರಣೆಗೆ ಬಳಸಿದ ಅಸ್ತ್ರಗಳ ಪ್ರತಿಕೃತಿಗಳಿದ್ದರೆ, ಇನ್ನೊಂದು ಬದಿಯಲ್ಲಿ ಪಾಕಿಸ್ತಾನದಲ್ಲಿ ನಾಶಪಡಿಸಲಾದ ಗುರಿಗಳನ್ನು ಚಿತ್ರಿಸಲಾಗಿತ್ತು.

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪಾಲ್ಗೊಂಡಿದ್ದರು

> ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆ ಕಿತ್ತುಕೊಳ್ಳುವ ಮೂಲಕ ಸಂವಿಧಾನವನ್ನು ಅಪ್ರಸ್ತುತ ಮಾಡುವ ಸಂಚಿನ ಬಗ್ಗೆ ನಾವು ಎಚ್ಚರದಿಂದ ಇರಬೇಕು
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

‘ಒಕ್ಕೂಟ ವ್ಯವಸ್ಥೆ ಉಳಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದ ರಕ್ಷಣೆ, ಆಶಯಗಳ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವ ಒಕ್ಕೂಟ ವ್ಯವಸ್ಥೆ ಉಳಿಸಿಕೊಳ್ಳೋಣ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು.

‘ಸಂವಿಧಾನವು ಸಾರ್ವಭೌಮ ಅಧಿಕಾರವನ್ನು ಒಕ್ಕೂಟ ಮತ್ತು ರಾಜ್ಯಗಳ ನಡುವೆ ಹಂಚಿದೆ. ಸಮಗ್ರ ದೃಷ್ಟಿಯಿಂದ ಒಕ್ಕೂಟ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡಿ ಗೌರವಿಸಿದೆ. ಅಧಿಕಾರ ಪಡೆದ ಕೇಂದ್ರ ಅಸಮತೋಲನದಿಂದ ಸಂವಿಧಾನ ನಿರ್ಮಾತೃಗಳ ಕನಸಿಗೆ ಕುಂದಾಗದಂತೆ ಒಕ್ಕೂಟ ವ್ಯವಸ್ಥೆ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ’ ಎಂದರು.

ಜನತಂತ್ರ ಉಳಿಸುವ ಗುರಿ: ‘ಸಂವಿಧಾನ ಎಷ್ಟೇ ಒಳ್ಳೆಯದಾಗಿದ್ದರೂ ಅನುಷ್ಠಾನಗೊಳಿಸುವವರು ಕೆಟ್ಟವರಾಗಿದ್ದರೆ ಪರಿಣಾಮ ಕೆಟ್ಟದ್ದೇ ಆಗಿರಲಿದೆ. ಸಂವಿಧಾನ ಕೆಟ್ಟದ್ದಾಗಿದ್ದರೂ ಅದನ್ನು ಅನುಷ್ಠಾನ ಮಾಡುವವರು ಒಳ್ಳೆಯವರಾಗಿದ್ದರೆ ಪರಿಣಾಮವೂ ಒಳ್ಳೆಯದೇ ಆಗುತ್ತದೆ. ಪ್ರಜೆಗಳ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಸಾಧನವಾಗಿ ಸಂವಿಧಾನವನ್ನು ರಾಜಕೀಯ ಪಕ್ಷಗಳು ಆಯ್ಕೆ ಮಾಡಿಕೊಂಡಿವೆ’ ಎಂದು ಅಂಬೇಡ್ಕರ್ ಅವರು ಹಿಂದೆಯೇ ಹೇಳಿದ್ದಾರೆ. ಸಂವಿಧಾನದ ಮೂಲ ಆಶಯ ಅರಿತು ಕೆಲಸ ಮಾಡುವ ಪ್ರತಿನಿಧಿಗಳನ್ನು ಆರಿಸಿ, ನಿರಂತರ ಪ್ರಶ್ನೆ, ಸಂವಾದ ಮಾಡುತ್ತಲೇ ಜನತಂತ್ರ ಉಳಿಸುವುದು ನಮ್ಮ ಗುರಿಯಾಗಬೇಕು’ ಎಂದು ಸಲಹೆ ನೀಡಿದರು.

ಆರ್ಥಿಕ ಚೈತನ್ಯಕ್ಕೆ ಒತ್ತು: ‘ಸಂವಿಧಾನದ ಆಶಯದಂತೆ ಅತ್ಯಂತ ಹಿಂದುಳಿದವರಿಗೆ ಆರ್ಥಿಕ ಚೈತನ್ಯ ನೀಡಲು ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಪ್ರತಿಯೊಂದು ಪ್ರದೇಶ, ಸಮುದಾಯದ ಜನರ ವೇದಿಕೆಗಳಿಗೆ ನ್ಯಾಯೋಚಿತ ಪರಿಹಾರ ನೀಡುತ್ತಿದೆ. ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಶ್ರಮಿಸುತ್ತಿದೆ. ಇದು ರಾಜ್ಯದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಚೈತನ್ಯಕ್ಕೆ ದಾರಿ ಮಾಡಿಕೊಟ್ಟಿದೆ’ ಎಂದರು.

ನಿಧಾನವಾಗಿ ವಿಷ ಉಣಿಸುವ ಸಂಚು– ಸಿ.ಎಂ

‘ಸಂವಿಧಾನವನ್ನು ವಿರೋಧಿಸುತ್ತಿರುವವರು ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವವರು. ಅವರು ಬಡವರ, ರೈತರ, ಕಾರ್ಮಿಕರ, ದಲಿತರ, ಶೋಷಿತರ ಪರವಾದ ಕಾನೂನುಗಳು ಮತ್ತು ಕಾರ್ಯಕ್ರಮಗಳನ್ನು ವಿರೋಧಿಸುವವರು ಎನ್ನುವುದನ್ನು ಜನರು ಅರ್ಥ ಮಾಡಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಗಣರಾಜ್ಯೋತ್ಸವದ ಅಂಗವಾಗಿ ರಾಜ್ಯದ ಜನತೆಯನ್ನು ಉದ್ದೇಶಿಸಿ ಸಂದೇಶ ನೀಡಿರುವ ಅವರು, ಸಂವಿಧಾನದ ಆಶಯಗಳು ಮತ್ತು ಸರ್ಕಾರದ ಜನಪರ ಯೋಜನೆಗಳ ಕುರಿತ ತಮ್ಮ ಆಶಯವನ್ನು ಹಂಚಿಕೊಂಡಿದ್ದಾರೆ. ‘ಮುಖ್ಯಮಂತ್ರಿಯಾಗಿ ಸಂವಿಧಾನದ ಆಶಯಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ’ ಎಂದೂ ಹೇಳಿದ್ದಾರೆ.

‘ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನವನ್ನು ಅರ್ಪಿಸಿದಾಗಲೂ ಅದನ್ನು ವಿರೋಧಿಸುವವರಿದ್ದರು. ಸಂವಿಧಾನವನ್ನು ಬದಲಾಯಿಸುವ, ಕಿತ್ತೊಗೆಯುವ ಕೂಗುಗಳು ಈಗಲೂ ಆಗಾಗ ಅಲ್ಲಲ್ಲಿ ಕೇಳಿಬರುತ್ತಿವೆ. ಆದರೆ, ಅದು ಸುಲಭದ ಕೆಲಸ ಅಲ್ಲ ಎಂದು ಅರ್ಥ ಮಾಡಿಕೊಂಡವರು ಅದನ್ನು ನಿಧಾನವಾಗಿ ದುರ್ಬಲಗೊಳಿಸುವ ಪ್ರಯತ್ನದಲ್ಲಿದ್ದಾರೆ. ಇದು ನಿಧಾನವಾಗಿ ವಿಷ ಉಣಿಸುವ ಸಂಚು’ ಎಂದಿದ್ದಾರೆ.

ಗಣರಾಜ್ಯೋತ್ಸವ ಸಮಾರಂಭದಲ್ಲಿ ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್, ಪ್ರಧಾನಿ ನರೇಂದ್ರ ಮೋದಿ, ಐರೋಪ್ಯ ಕೌನ್ಸಿಲ್‌ನ ಅಧ್ಯಕ್ಷ ಆಂಟೋನಿಯೊ ಕೋಸ್ಟ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಪಾಲ್ಗೊಂಡರು – ಪಿಟಿಐ ಚಿತ್ರ

ಯುದ್ಧದ ವ್ಯೂಹ ರಚನೆ ಪ್ರದರ್ಶನ

ಇದೇ ಮೊದಲ ಬಾರಿಗೆ ಭಾರತೀಯ ಸೇನೆಯು ಮೆರವಣಿಗೆಯಲ್ಲಿ ವಾಯು ಸೇನೆಯನ್ನೂ ಒಳಗೊಂಡಂತೆ ಯುದ್ಧದ ಸಂದರ್ಭದ ವ್ಯೂಹ ರಚನೆಯನ್ನು ಹಂತಹಂತವಾಗಿ ಪ್ರದರ್ಶಿಸಿತು. ಯುದ್ಧದ ಸಮಯದಲ್ಲಿ ವಿವಿಧ ಪಡೆಗಳ ಮತ್ತು ಶಸ್ತ್ರಾಸ್ತ್ರಗಳ ಕ್ರಮಬದ್ಧ ಜೋಡಣೆ ಹೇಗೆ ಇರುತ್ತದೆ ಎಂಬುದು ಅನಾವರಣಗೊಂಡಿತು.

ಅಶ್ವಪಡೆಯ 61 ತುಕ್ಕಡಿ ಯುದ್ಧದ ಸಮವಸ್ತ್ರ ಧರಿಸಿ ಪಾಲ್ಗೊಂಡರು. ನೌಕಾಪಡೆ ಮತ್ತು ವಾಯುಪಡೆಯ ತಲಾ 144 ತುಕ್ಕಡಿ ಪರೇಡ್‌ನಲ್ಲಿ ಭಾಗವಹಿಸಿದರು.

ಸೇನೆಯ ಆಧುನೀಕರಣಕ್ಕೆ ಯುದ್ಧ ವಾಹನಗಳು ಸಾಗುವಾಗ ಸ್ವದೇಶಿ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಿರುವ ‘ಧ್ರುವ’ ಮತ್ತು ‘ರುದ್ರ’ ಹೆಲಿಕಾಪ್ಟರ್‌ಗಳು ವೈಮಾನಿಕ ಬೆಂಬಲ ನೀಡಿದವು. ‘ಟಿ-90 ಭೀಷ್ಮ’ ಮತ್ತು ‘ಅರ್ಜುನ’ ಟ್ಯಾಂಕ್‌ಗಳು ಸಾಗುವಾಗ ‘ಅಪಾಚೆ ಎಎಚ್-64ಇ’ ಮತ್ತು ‘ಪ್ರಚಂಡ’ ಹೆಲಿಕಾಪ್ಟರ್‌ಗಳು ಬೆಂಗಾವಲಾಗಿ ಹಾರಾಟ ನಡೆಸಿದವು.

ಸ್ಕ್ವಾಡ್ರನ್ ಲೀಡರ್ ಜಗದೀಶ್ ಕುಮಾರ್ ನೇತೃತ್ವದಲ್ಲಿ ವಾಯುಪಡೆಯ ಸಿಬ್ಬಂದಿ ಇತ್ತ ಪರೇಡ್ ನಡೆಸುತ್ತಿದ್ದಾಗ, ಆಗಸದಲ್ಲಿ ತಲಾ ಎರಡು ರಫೇಲ್, ಮಿಗ್–29 ಮತ್ತು ಸುಖೋಯ್–30 ಯುದ್ಧವಿಮಾನಗಳು ತೋರಿದ ಕಸರತ್ತು ನೆರೆದವರ ಮೈನವಿರೇಳುವಂತೆ ಮಾಡಿತು.

ರಾಹುಲ್, ಖರ್ಗೆ, ಧನಕರ್ ಭಾಗಿ

ಸಂಸತ್ತಿನ ಎರಡೂ ಸದನಗಳ ವಿರೋಧ ಪಕ್ಷಗಳ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಮತ್ತು ಮಾಜಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಸಮಾರಂಭದಲ್ಲಿ ಪಾಲ್ಗೊಂಡರು.

ಧನಕರ್ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ಖರ್ಗೆ ಅವರೊಂದಿಗೆ ಮೊದಲ ಸಾಲಿನಲ್ಲಿ ಕುಳಿತರು. ಖರ್ಗೆ ಅವರ ಅಡ್ಡವಾಗಿ ಮೂರನೇ ಸಾಲಿನಲ್ಲಿದ್ದ ರಾಹುಲ್ ಜತೆ ಕೇಂದ್ರ ಸಚಿವರು ಕುಳಿತಿದ್ದರು. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರೂ ಅತಿಥಿಗಳಾಗಿದ್ದರು.

ಸರ್ಕಾರ ನೀಡಿದ ಭಾಷಣ ಓದಿದ ರಾಜ್ಯಪಾಲರು

ವಿಧಾನ ಮಂಡಲದ ಅಧಿವೇಶನದಲ್ಲಿ ರಾಜ್ಯಪಾಲರು ಪೂರ್ಣವಾಗಿ ಭಾಷಣವನ್ನು ಓದದ ಕಾರಣ, ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ರಾಜಕೀಯ ಸಂಘರ್ಷ ಉಂಟಾಗಿತ್ತು.

ಇದರ ಮಧ್ಯೆಯೇ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಸೋಮವಾರ ಯಥಾವತ್ತಾಗಿ ಓದಿದರು.

24 ಪುಟಗಳ ಭಾಷಣದ ಪ್ರತಿಯಲ್ಲಿ ಒಕ್ಕೂಟ ವ್ಯವಸ್ಥೆ ಉಳಿಸಿಕೊಳ್ಳುವ ಒಂದು ಸಾಲು ಹೊರತುಪಡಿಸಿದರೆ ಹೆಚ್ಚಿನ ಭಾಗ ರಾಜ್ಯ ಸರ್ಕಾರದ ಸಾಧನೆಗಳ ಪಟ್ಟಿ. ಮುಂದಿನ ಗುರಿಯ ನೋಟ ಇತ್ತು. ಕೇಂದ್ರದ ವಿರುದ್ಧ ಟೀಕೆ ಟಿಪ್ಪಣಿಗಳಿರಲಿಲ್ಲ.

ಭಾಷಣದ ಮುಖ್ಯಾಂಶಗಳು

- ಹಿಂದುಳಿದವರ ಬಲವರ್ಧನೆಗೆ ₹1.12 ಲಕ್ಷ ಕೋಟಿ ಹಂಚಿಕೆ
- ಗ್ಯಾರಂಟಿ ಯೋಜನೆಗಳಿಗೆ ₹1.13 ಲಕ್ಷ ಕೋಟಿ ವಿನಿಯೋಗ
- ವಾರ್ಷಿಕ 12 ದಿನಗಳ ವೇತನ ಸಹಿತ ಋತು ಚಕ್ರ ರಜೆ
- ಬೆಂಗಳೂರು ಅಭಿವೃದ್ಧಿಗೆ ₹1.5 ಲಕ್ಷ ಕೋಟಿ ಯೋಜನೆ
- ನ್ಯಾಯಾಲಯಗಳಲ್ಲಿ ಶೇ 80ಕ್ಕೂ ಹೆಚ್ಚಿನ ಪ್ರಕರಣಗಳ ಇತ್ಯರ್ಥ
- ಕಂದಾಯ ಗ್ರಾಮಗಳ ಘೋಷಣೆ, 1.11 ಲಕ್ಷ ಹಕ್ಕುಪತ್ರ ವಿತರಣೆ
- ಹೆಲ್ತ್ ಹಬ್‌ಗಳಾಗಿ ಹುಬ್ಬಳ್ಳಿ, ಕಲಬುರಗಿ ನಗರಗಳ ಅಭಿವೃದ್ಧಿ
- ಹಾಲು ಉತ್ಪಾದಕರಿಗೆ ₹4,130 ಕೋಟಿ ವಿತರಣೆ
- ಬೆಂಗಳೂರು ನಗರ ಅಭಿವೃದ್ಧಿಗೆ ₹1.5 ಲಕ್ಷ ಕೋಟಿ ಹಂಚಿಕೆ
- ಅಮೃತ ನಗರೋತ್ಥಾನಕ್ಕೆ ₹3,885 ಕೋಟಿ ವೆಚ್ಚ

ಬ್ರಹ್ಮೋಸ್...
ನವದೆಹಲಿಯ ಕರ್ತವ್ಯ ಪಥದಲ್ಲಿ ಸೋಮವಾರ ನಡೆದ ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಗಳನ್ನು ಪ್ರದರ್ಶಿಸಲಾಯಿತು – ಎಎಫ್‌ಪಿ ಚಿತ್ರ

ದೇಶಭಕ್ತಿಯ ಕಹಳೆ
ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳು ಸೇರಿ 30ಸಾವಿರಕ್ಕೂ ಅಧಿಕ ಜನಸಮೂಹ ಪಾಲ್ಗೊಂಡು ದೇಶಭಕ್ತಿಯ ಕಹಳೆ ಮೊಳಗಿಸಿತು

ಸಂವಿಧಾನವು ಜನರ ಹಕ್ಕುಗಳ ರಕ್ಷಿಸುವ ಗುರಾಣಿ: ರಾಹುಲ್

ನವದೆಹಲಿ (ಪಿಟಿಐ): ‘ಸಂವಿಧಾನವು ಪ್ರತಿಯೊಬ್ಬ ಭಾರತೀಯನ ಧ್ವನಿ ಮತ್ತು ಹಕ್ಕುಗಳನ್ನು ರಕ್ಷಿಸುವ ಗುರಾಣಿಯಾಗಿದೆ. ಹೀಗಾಗಿ ಭಾರತದ ಸಂವಿಧಾನವನ್ನು ರಕ್ಷಿಸುವ ನಮ್ಮ ಸಂಕಲ್ಪವು ಬಂಡೆಯಂತೆ ಬಲಿಷ್ಠವಾಗಿದೆ’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರತಿಪಾದಿಸಿದ್ದಾರೆ.

‘ನಮ್ಮ ಗಣರಾಜ್ಯವು ಈ ಬಲವಾದ ಅಡಿಪಾಯದ ಮೇಲೆ ನಿಂತಿದ್ದು, ಅದು ಸಮಾನತೆ ಮತ್ತು ಸಾಮರಸ್ಯದ ಮೂಲಕ ಬಲಗೊಳ್ಳುತ್ತದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸಂವಿಧಾನವನ್ನು ರಕ್ಷಿಸುವುದು ಎಂದರೆ ಭಾರತೀಯ ಗಣರಾಜ್ಯವನ್ನು ರಕ್ಷಿಸುವುದು ಎಂದರ್ಥ. ಇದು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನಕ್ಕೆ ಅರ್ಪಿಸುವ ನಿಜವಾದ ಗೌರವ. ಜೈ ಹಿಂದ್, ಜೈ ಸಂವಿಧಾನ್’ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

‘ನಮ್ಮ ಸಂವಿಧಾನದ ತತ್ವಗಳು ಮತ್ತು ಚಿಂತನೆಯನ್ನು ರಕ್ಷಿಸುವಲ್ಲಿ ದೃಢವಾಗಿ ನಿಲ್ಲುವ ಅಗತ್ಯ ಇಂದಿದೆ. ಸಂವಿಧಾನ ರಚನಕಾರರು ನಮಗೆ ನೀಡಿರುವ ಶಾಶ್ವತ ಮೌಲ್ಯಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕಾಗಿ ನಾವು ಎಲ್ಲ ತ್ಯಾಗಕ್ಕೂ ಸಿದ್ಧರಿರಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ದೇಶದ ಜನರಿಗೆ ಶುಭ ಕೋರಿರುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ‘ಇಂದು ನಮ್ಮ ಸಂವಿಧಾನ ಜಾರಿಗೆ ಬಂದ ದಿನದ ಸ್ಮರಣೆ. ಭಾರತದ ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ, ನ್ಯಾಯ, ಸಹೋದರತೆಯ ಮೌಲ್ಯಗಳನ್ನು ಸಂವಿಧಾನ ಖಾತರಿಪಡಿಸಿದೆ. ಸಂವಿಧಾನ ಚಿರಾಯುವಾಗಲಿ, ಜೈ ಹಿಂದ್’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಜನರು ತಮ್ಮ ಕರ್ತವ್ಯ ಪಾಲಿಸಬೇಕು’

ಮೋಹನ್ ಭಾಗವತ್

ಮುಜಫ್ಫರ್‌ಪುರ (ಪಿಟಿಐ): ‘ಭಾರತವನ್ನು ವಿಶ್ವದ ಮುಂಚೂಣಿ ಗಣರಾಜ್ಯವನ್ನಾಗಿ ಮಾಡಲು ದೇಶದ ನಾಗರಿಕರು ಸಂವಿಧಾನದಲ್ಲಿ ಆಡಕವಾಗಿರುವ ಪವಿತ್ರ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಪಾಲಿಸಬೇಕು. ಸಂತೋಷ, ಶಾಂತಿ ಮತ್ತು ಧರ್ಮದ ಸಂದೇಶವನ್ನು ಜಗತ್ತಿಗೆ ಸಾರಬೇಕು’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಕರೆ ನೀಡಿದ್ದಾರೆ.

ಮುಜಫ್ಫರ್‌ಪುರದಲ್ಲಿ ಆರ್‌ಎಸ್‌ಎಸ್ ವಿಭಾಗೀಯ ಕಚೇರಿಯಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

‘ಸಂವಿಧಾನ ಧರ್ಮವನ್ನು ಬೋಧಿಸುತ್ತದೆ. ಅದರ ನಿರಂತರ ಓದು ನಮ್ಮ ಕರ್ತವ್ಯಗಳನ್ನು ಜಾಗೃತಗೊಳಿಸುತ್ತದೆ. ಪ್ರತಿಯೊಬ್ಬರೂ ಸಂವಿಧಾನ ಪೀಠಿಕೆ ಓದಲು, ರಾಜ್ಯನೀತಿ, ಮೂಲಭೂತ ಕರ್ತವ್ಯ ಮತ್ತು ಹಕ್ಕುಗಳನ್ನು ತಿಳಿಯಲು ಪ್ರೇರೇಪಿಸಬೇಕು. ಸಂವಿಧಾನ ರಚನಾಕಾರರು ಧರ್ಮಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದ್ದರು. ಅಂಬೇಡ್ಕರ್ ಅವರೂ ಧರ್ಮದ ಅಗತ್ಯದ ಬಗ್ಗೆ ಹಲವು ಬಾರಿ ಹೇಳಿದ್ದರು. ದೇಶದಲ್ಲಿ ಕಾನೂನಾಗಳಿವೆ. ಆದರೆ, ಎಲ್ಲವೂ ಧರ್ಮದ ಆಧಾರದ ಮೇಲೆ ನಡೆಯುತ್ತವೆ’ ಎಂದರು.

> ರಾಷ್ಟ್ರಧ್ವಜ, ಸಂವಿಧಾನದ ಮೌಲ್ಯ ಹಾಗೂ ದೇಶದ ಪ್ರಾಚೀನ ಪರಂಪರೆಯ ಆಧ್ಯಾತ್ಮಿಕ ಸಾರವನ್ನು ರಕ್ಷಿಸಲು ಜನರು ಮುಂದಾಗಬೇಕು
> **ದತ್ತಾತ್ರೇಯ ಹೊಸಬಾಳೆ**, ಆರ್‌ಎಸ್‌ಎಸ್ ಸರಕಾರ್ಯವಾಹ

ವಿಬಿ ಜಿ ರಾಮ್ ಜಿ: ವಾಕ್ಸಮರ

ಪ್ರಜಾವಾಣಿ ವಾರ್ತೆ

ಗದಗ: ‘ವಿಬಿ ಜಿ ರಾಮ್ ಜಿ’ ಕಾಯ್ದೆ ವಿಷಯವು ಸೋಮವಾರ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಎಸ್.ವಿ. ಸಂಕನೂರ ಮತ್ತು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

ಗಣರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ಸಚಿವ ಎಚ್.ಕೆ.ಪಾಟೀಲ, ‘ಕೇಂದ್ರ ಸರ್ಕಾರ ಮನರೇಗಾ ಯೋಜನೆ ಬದಲಿಸಿ ವಿಬಿ ಜಿ ರಾಮ್ ಜಿ ಯೋಜನೆ ಮೂಲಕ ಬಡ ಕೂಲಿಕಾರರ ಉದ್ಯೋಗ ಮತ್ತು ನಿರುದ್ಯೋಗ ಭತ್ಯೆಯ ಯೋಜನೆ ಕಸಿದುಕೊಂಡಿದೆ’ ಎಂದರು.

ವೇದಿಕೆಯಲ್ಲಿದ್ದ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಸಚಿವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು. ಅವರು ಭಾಷಣ ಮಾಡುತ್ತಿದ್ದ ಸ್ಥಳಕ್ಕೆ ತೆರಳಿ ಖಂಡಿಸಿದರು. ಬಳಿಕ ಸಿಟ್ಟಿನಿಂದಲೇ ವೇದಿಕೆಯಿಂದ ಇಳಿದು ಹೊರನಡೆದರು. ಆಗ ಎಚ್.ಕೆ.ಪಾಟೀಲ ಅವರು ಮೂರು–ನಾಲ್ಕು ಮಾತುಗಳನ್ನು ಆಡಿದ್ದು ಬಿಟ್ಟರೆ, ಬೇರೇನೂ ಪ್ರತಿಕ್ರಿಯಿಸಲಿಲ್ಲ. ಭಾಷಣ ಮುಂದುವರಿಸಿದರು.

ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಎಸ್.ವಿ.ಸಂಕನೂರ, ‘ಗಣರಾಜ್ಯೋತ್ಸವ ಸಂದೇಶ ಓದುವ ವೇಳೆ ಸಚಿವ ಎಚ್.ಕೆ.ಪಾಟೀಲ ಕೇಂದ್ರದ ವಿರುದ್ಧ ಟೀಕೆ ಮಾಡಿದರು. ವಿಬಿ ಜಿ ರಾಮ್ ಜಿ ಯೋಜನೆ ಕುರಿತು ಜನರಿಗೆ ತಪ್ಪು ಸಂದೇಶ ನೀಡಿದ್ದಾರೆ. ಬಡವರ ಉದ್ಯೋಗದ ಹಕ್ಕು ಕಸಿದುಕೊಂಡಿದ್ದಾರೆ ಎಂಬ ಆರೋಪ ಕೇಳಲಿಕ್ಕೆ ಸಾಧ್ಯವಿಲ್ಲ. ಇದನ್ನು ಪ್ರತಿಭಟಿಸಿ, ಹೊರನಡೆದು ಬಂದಿದ್ದೇನೆ’ ಎಂದರು.

10,800 ಶಿಕ್ಷಕರ ನೇಮಕ –ಸಚಿವ

ಶಿವಮೊಗ್ಗ: ‘ಮುಂದಿನ ಶೈಕ್ಷಣಿಕ ವರ್ಷದೊಳಗೆ ಸರ್ಕಾರಿ ಶಾಲೆಗಳಿಗೆ 10,800 ಶಿಕ್ಷಕರ ನೇಮಕ ಹಾಗೂ ಅನುದಾನಿತ ಶಾಲೆಗಳಿಗೆ ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೋಮವಾರ ಇಲ್ಲಿ ಹೇಳಿದರು.

ಗಣರಾಜ್ಯೋತ್ಸವ ನಿಮಿತ್ತ ಧ್ವಜಾರೋಹಣ ನೆರವೇರಿಸಿದ ಅವರು, ‘5,000 ಸರ್ಕಾರಿ ಶಾಲೆಗಳಲ್ಲಿ ₹ 160 ಕೋಟಿ ವೆಚ್ಚದಲ್ಲಿ ಸ್ಮಾರ್ಟ್ ಕ್ಲಾಸ್, ವಿಜ್ಞಾನ ಪ್ರಯೋಗಾಲಯ ಅಳವಡಿಸಲಾಗುವುದು. ಮೂಲಸೌಕರ್ಯಕ್ಕಾಗಿ ₹ 500 ಕೋಟಿ ವ್ಯಯಿಸಲಾಗುತ್ತಿದೆ’ ಎಂದರು. ‘ಎಲ್‌.ಕೆ.ಜಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೂ ಉಚಿತ ಪಠ್ಯಪುಸ್ತಕ ಹಾಗೂ ಉಚಿತ ನೋಟ್‌ಬುಕ್ ನೀಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿದೆ’ ಎಂದು ತಿಳಿಸಿದರು.

ಶುಭಾಂಶು ಶುಕ್ಲಾಗೆ ಅಶೋಕ ಚಕ್ರ ಪ್ರದಾನ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗ್ರೂಪ್ ಕ್ಯಾಪ್ಟನ್, ಗಗನಯಾನಿ ಶುಭಾಂಶು ಶುಕ್ಲಾ ಅವರಿಗೆ ಸೋಮವಾರ ‘ಅಶೋಕ ಚಕ್ರ’ ಪ್ರದಾನ ಮಾಡಿದರು.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಭೇಟಿ ನೀಡಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಇತಿಹಾಸ ಸೃಷ್ಟಿಸಿದ ಶುಭಾಂಶು ಶುಕ್ಲಾ ಅವರಿಗೆ ಕರ್ತವ್ಯ ಪಥದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದೇಶದ ಅತ್ಯುನ್ನತ ಶಾಂತಿಕಾಲದ ಶೌರ್ಯ ಪ್ರಶಸ್ತಿ ನೀಡಿ ಗೌರವಿಸಿದರು.

ಜಗತ್ತಿನ ವಿವಿಧೆಡೆ ಹಾರಾಡಿದ ತ್ರಿವರ್ಣ ಧ್ವಜ

ಶುಭಾಶಯ ಕೋರಿದ ಟ್ರಂಪ್

ಗಣರಾಜ್ಯೋತ್ಸವದ ಅಂಗವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶುಭಾಶಯ ಕೋರಿದ್ದಾರೆ. ‘77ನೇ ಗಣರಾಜ್ಯೋತ್ಸವದ ಈ ಸಂದರ್ಭದಲ್ಲಿ ಭಾರತ ಸರ್ಕಾರ ಮತ್ತು ಭಾರತದ ಜನರಿಗೆ ಅಮೆರಿಕದ ಜನರ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ’ ಎಂದು ಸಂದೇಶದಲ್ಲಿ ತಿಳಿಸಿದ್ದಾರೆ. ‘ಅಮೆರಿಕ ಮತ್ತು ಭಾರತ ವಿಶ್ವದ ಅತ್ಯಂತ ಹಳೆಯ ಹಾಗೂ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿ ಐತಿಹಾಸಿಕ ಬಾಂಧವ್ಯವನ್ನು ಹಂಚಿಕೊಂಡಿವೆ’ ಎಂದಿದ್ದಾರೆ. ನವದೆಹಲಿಯಲ್ಲಿರುವ ಅಮೆರಿಕದ ರಾಯಭಾರ ಕಚೇರಿಯು ಟ್ರಂಪ್ ಅವರ ಸಂದೇಶವನ್ನು ಜಾಲತಾಣದಲ್ಲಿ ಹಂಚಿಕೊಂಡಿದೆ.

ಬೀಜಿಂಗ್/ವಾಷಿಂಗ್ಟನ್ (ಪಿಟಿಐ): ವಿಶ್ವದ ವಿವಿಧೆಡೆ ಭಾರತೀಯರು ಸೋಮವಾರ 77ನೇ ಗಣರಾಜ್ಯೋತ್ಸವವನ್ನು ಸಡಗರ, ಸಂಭ್ರಮದಿಂದ ಆಚರಿಸಿದರು. ವಿದೇಶಗಳಲ್ಲಿನ ಭಾರತದ ರಾಯಭಾರ ಕಚೇರಿಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವ ಮೂಲಕ ಗಣರಾಜ್ಯೋತ್ಸವ ಆಚರಿಸಲಾಯಿತು.

ಅಧಿಕಾರಿಗಳು, ಸಿಬ್ಬಂದಿ, ಅನಿವಾಸಿ ಭಾರತೀಯರು ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡರು. ವಂದೇ ಮಾತರಂ, ಭಾರತ್ ಮಾತಾ ಕಿ ಜೈ ಘೋಷಣೆಗಳು ಪ್ರತಿಧ್ವನಿಸಿದವು.

ಬೀಜಿಂಗ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯಲ್ಲಿ ‘ವಂದೇ ಮಾತರಂ’ ಇತಿಹಾಸ ಸಾರುವ ವಿಷಯಾಧಾರಿತ ಪ್ರದರ್ಶನ ಏರ್ಪಡಿಸಲಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಈ ಗೀತೆ ದೇಶವನ್ನು ಒಗ್ಗೂಡಿಸುವಲ್ಲಿ ಹೇಗೆ ಮಹತ್ವದ ಪಾತ್ರ ನಿರ್ವಹಿಸಿತು ಎಂಬುದನ್ನು ಎತ್ತಿ ತೋರಿಸಲಾಯಿತು. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಇದೇ ವೇಳೆ ಜರುಗಿದವು.

ವಿವಿಧ ನಾಯಕರ ಶುಭಾಶಯ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ಭೂತಾನ್ ಪ್ರಧಾನಿ ಸೇರಿದಂತೆ ಹಲವು ಜಾಗತಿಕ ನಾಯಕರು ಗಣರಾಜ್ಯೋತ್ಸವಕ್ಕೆ ಶುಭಾಶಯ ಕೋರಿದ್ದಾರೆ. ಇದೇ ವೇಳೆ ಅವರು ಭಾರತದ ಜತೆಗಿನ ಸಂಬಂಧ ಮತ್ತು ಆಳವಾದ ಸ್ನೇಹವನ್ನು ಸ್ಮರಿಸಿದ್ದಾರೆ.

> ಭಾರತ- ಅಮೆರಿಕ ಐತಿಹಾಸಿಕ ಬಾಂಧವ್ಯವನ್ನು ಹಂಚಿಕೊಂಡಿವೆ. ರಕ್ಷಣೆ, ಇಂಧನ, ನಿರ್ಣಾಯಕ ಖನಿಜಗಳು ಸೇರಿದಂತೆ ಅತ್ಯಾಧುನಿಕ ಮತ್ತು ನೂತನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ನಿಕಟ ಸಹಕಾರ ಹೊಂದಿವೆ
> **ಮಾರ್ಕೊ ರುಬಿಯೊ**, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ

‘ಭಾರತ–ಚೀನಾ ಸಂಬಂಧ ಉತ್ತಮವಾಗಿದೆ’

ಬೀಜಿಂಗ್ (ಪಿಟಿಐ): ಭಾರತ ಮತ್ತು ಚೀನಾ ಒಳ್ಳೆಯ ನೆರೆ ದೇಶಗಳಾಗಿದ್ದು, ಉತ್ತಮ ಸ್ನೇಹಿತರು ಮತ್ತು ಪಾಲುದಾರರು ಎಂದು ಬಣ್ಣಿಸಿರುವ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ‘ಚೀನಾದ ಡ್ರ್ಯಾಗನ್ ಮತ್ತು ಭಾರತದ ಆನೆ ಒಟ್ಟಿಗೆ ನೃತ್ಯ ಮಾಡುವುದು ಎರಡೂ ದೇಶಗಳಿಗೆ ಸರಿಯಾದ ಆಯ್ಕೆ’ ಎಂದು ಹೇಳಿದ್ದಾರೆ.

ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ 77ನೇ ಗಣರಾಜ್ಯೋತ್ಸವದ ಶುಭಾಶಯ ಕೋರಿರುವ ಚೀನಾ ಅಧ್ಯಕ್ಷರು, ‘ಭಾರತ- ಚೀನಾ ನಡುವಿನ ಸಂಬಂಧಗಳು ಸುಧಾರಿಸುತ್ತಿದ್ದು, ಪ್ರಗತಿ ಸಾಧಿಸುತ್ತಿವೆ. ಎರಡೂ ದೇಶಗಳ ನಡುವೆ ಉತ್ತಮ ಅಲ್ಲದೇ ಜನರ ಮೂಲಭೂತ ಹಿತಾಸಕ್ತಿಗಳು ಹೊಂದಿಕೆಯಾಗುತ್ತವೆ. ವಿಶ್ವಶಾಂತಿ ಮತ್ತು ಸಮೃದ್ಧಿಗಾಗಿ ಉಭಯ ದೇಶಗಳು ಮಹತ್ವದ ಪಾತ್ರ ನಿರ್ವಹಿಸಬೇಕಿದೆ’ ಎಂದು ತಿಳಿಸಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜಾತಿಯ ಬಗ್ಗೆ ಕೇಳಬೇಡ, ಜಾತಿಯನ್ನು ಹೇಳಬೇಡ, ಜಾತಿಯ ಬಗ್ಗೆ ಚಿಂತಿಸಲೂ ಬೇಡ.

–ನಾರಾಯಣ ಗುರು

ಸಂಪಾದಕೀಯ

ಟ್ರಂಪ್ ರಚಿಸಿದ ಶಾಂತಿ ಮಂಡಳಿ ವ್ಯಾಖ್ಯಾನ, ಉದ್ದೇಶ ಅಸ್ಪಷ್ಟ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಲೋಚನೆಯ ಕೂಸಾಗಿರುವ 'ಶಾಂತಿ ಮಂಡಳಿ'ಯು ಜಾಗತಿಕ ಮಟ್ಟದಲ್ಲಿ ವಿವಿಧ ದೇಶಗಳ ಒಕ್ಕೂಟದಂತೆ ಆಗುವುದು ಎಂದು ಕಂಡರೂ, ಅದಕ್ಕೆ ಸ್ಪಷ್ಟವಾದ ವ್ಯಾಖ್ಯಾನ ಇಲ್ಲ, ಅದರ ಸ್ಪಷ್ಟ ಉದ್ದೇಶ ಏನು ಎಂಬುದು ಗೊತ್ತಾಗಿಲ್ಲ. ಮಂಡಳಿಯ ಸನ್ನದನ್ನು ಟ್ರಂಪ್ ಅವರು ಈಚೆಗೆ ದಾವೋಸ್‌ನಲ್ಲಿ ಬಿಡುಗಡೆ ಮಾಡಿದರು. ಆದರೆ, ಅದರಲ್ಲಿರುವ ಅಂಶಗಳು ಟ್ರಂಪ್ ಅವರು ಮೊದಲು ಮಂಡಳಿಯ ಬಗ್ಗೆ ಘೋಷಣೆ ಮಾಡಿದಾಗ ಹೇಳಿದ್ದಕ್ಕಿಂತ ಭಿನ್ನವಾಗಿವೆ. ಗಾಜಾದಲ್ಲಿ ಎರಡನೆಯ ಹಂತದ ಶಾಂತಿ ಯೋಜನೆಯ ಭಾಗವಾಗಿ, ಆ ಪ್ರದೇಶದ ಆಡಳಿತ ಮತ್ತು ಪುನರ್‌ನಿರ್ಮಾಣದ ಹೊಣೆಯನ್ನು ವಹಿಸಿ ಈ ಮಂಡಳಿಯನ್ನು ಟ್ರಂಪ್ ಘೋಷಿಸಿದ್ದರು. ಈಗ ಮಂಡಳಿಯ ವ್ಯಾಪ್ತಿ ವಿಶಾಲವಾಗಿದೆ. ಸನ್ನದಿನಲ್ಲಿ ಗಾಜಾ ಬಗ್ಗೆ ಉಲ್ಲೇಖವಿಲ್ಲ, ಅದು 'ಅಂತರರಾಷ್ಟ್ರೀಯ ಶಾಂತಿಪಾಲನಾ ಸಂಸ್ಥೆ'ಯಂತೆ ಇರಲಿದೆ. ಈ ಮಂಡಳಿಯು ವಿಶ್ವಸಂಸ್ಥೆಯ ಜೊತೆಯಾಗಿ ಕೆಲಸ ಮಾಡುತ್ತದೆ ಎಂದು ಟ್ರಂಪ್ ಹೇಳುತ್ತಿದ್ದರಾದರೂ, ಈ ಮಂಡಳಿಯು ವಿಶ್ವಸಂಸ್ಥೆಗೆ ಬದಲಿಯಾಗಿ ರೂಪುಗೊಳ್ಳುವ ಸಾಧ್ಯತೆ ಇದೆ ಎಂದೂ ಅವರು ಒಮ್ಮೆ ಹೇಳಿದ್ದಾರೆ. ಮಂಡಳಿಗೆ ಟ್ರಂಪ್ ಅವರು ವೈಯಕ್ತಿಕ ನೆಲೆಯಲ್ಲಿ ಅಧ್ಯಕ್ಷರಾಗಿರುತ್ತಾರೆ; ಅಮೆರಿಕದ ಅಧ್ಯಕ್ಷರಾಗಿ ಅಲ್ಲ. ಟ್ರಂಪ್ ಅವರು ತಾವು ಬಯಸಿದಷ್ಟು ಕಾಲ ಅದರ ಅಧ್ಯಕ್ಷರಾಗಿರುತ್ತಾರೆ, ಮಂಡಳಿಯ ಅಧ್ಯಕ್ಷ ಹುದ್ದೆಯ ಉತ್ತರಾಧಿಕಾರಿ ಯಾರು ಎಂಬುದನ್ನು ಅವರೇ ಹೇಳಲಿದ್ದಾರೆ. ಟ್ರಂಪ್ ಅವರು ವೈಯಕ್ತಿಕವಾಗಿ ಕೆಲವರನ್ನು ಮಂಡಳಿಗೆ ನಾಮನಿರ್ದೇಶನ ಮಾಡಿದ್ದಾರೆ. ಯಾವುದೇ ದೇಶದ ಸದಸ್ಯತ್ವವನ್ನು ರದ್ದುಪಡಿಸುವ ಅಧಿಕಾರವು ಟ್ರಂಪ್ ಅವರಿಗೆ ಇರಲಿದೆ.

ಅಮೆರಿಕದ ಅಧ್ಯಕ್ಷರ ಚಿಂತನೆಯ ಕೂಸಾದ 'ಶಾಂತಿ ಮಂಡಳಿ'ಯ ಉದ್ದೇಶ, ಆಶಯಗಳು ಅಸ್ಪಷ್ಟವಾಗಿವೆ. ಈ ಕೂಟವನ್ನು ಸೇರಲು ಭಾರತ ಅವಸರದ ತೀರ್ಮಾನ ಕೈಗೊಳ್ಳಬಾರದು.

ಮಂಡಳಿಯನ್ನು ಸೇರುವಂತೆ ಟ್ರಂಪ್ ಅವರು ಭಾರತಕ್ಕೆ ಆಹ್ವಾನ ನೀಡಿದ್ದಾರೆ. ಆದರೆ ಭಾರತವು ಆ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಪ್ಯಾಲೆಸ್ಟೀನ್ ನಾಗರಿಕರ ಹೋರಾಟಕ್ಕೆ ಭಾರತವು ಬೆಂಬಲ ನೀಡುತ್ತ ಬಂದಿದೆ, ದ್ವಿರಾಷ್ಟ್ರ ಸಿದ್ಧಾಂತವು ಸಮಸ್ಯೆಗೆ ಪರಿಹಾರ ನೀಡುತ್ತದೆ ಎಂದು ಹೇಳುತ್ತ ಬಂದಿದೆ. ಆದರೆ ಈಚಿನ ವರ್ಷಗಳಲ್ಲಿ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಈ ನಿಲುವನ್ನು ಒಂದಿಷ್ಟು ಸಡಿಲಿಸಿದೆ. ಕೊಲ್ಲಿ ರಾಷ್ಟ್ರಗಳಾದ ಸೌದಿ ಅರೇಬಿಯಾ ಮತ್ತು ಯುಎಇ ಈ ಮಂಡಳಿಯನ್ನು ಸೇರಿವೆ. ಮಂಡಳಿಯನ್ನು ಸೇರುವಂತೆ ಅಮೆರಿಕವು ಭಾರತವನ್ನು ಒತ್ತಾಯಿಸಬಹುದು. ಆದರೆ ಈ ಮಂಡಳಿಯ ಉದ್ದೇಶದ ಬಗ್ಗೆ ಸ್ಪಷ್ಟತೆ ಇಲ್ಲದಿರುವಾಗ ಅದನ್ನು ಭಾರತ ಸೇರುವುದು ಸೂಕ್ತವಾಗಲಿಕ್ಕಿಲ್ಲ. ಗಾಜಾದಲ್ಲಿ ಶಾಂತಿ ಸ್ಥಾಪನೆ ವಿಚಾರವಾಗಿ ಟ್ರಂಪ್ ಅವರು ಹೊಂದಿರುವ ಆಲೋಚನೆಗಳು, ಅದೇ ವಿಷಯವಾಗಿ ಇತರ ಹಲವು ದೇಶಗಳು ಹೊಂದಿರುವ ಆಲೋಚನೆಗಳಿಗಿಂತ ಬಹಳ ಭಿನ್ನವಾಗಿವೆ. ಟ್ರಂಪ್ ಅವರ ಸಂಬಂಧಿ ಜಾರಡ್ ಕುಶ್ನರ್ ಅವರು ಗಾಜಾದಲ್ಲಿ ರಿಯಲ್ ಎಸ್ಟೇಟ್ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ. ಕುಶ್ನರ್ ಅವರೂ ಮಂಡಳಿಯ ಸದಸ್ಯ. ಮಂಡಳಿಯಲ್ಲಿ ಪ್ಯಾಲೆಸ್ಟೀನ್ ಪ್ರತಿನಿಧಿಗಳಿಗೆ ಸದಸ್ಯತ್ವ ಇಲ್ಲ. ಮಂಡಳಿಗೆ ನೀಡಿರುವ ವಿಶಾಲವಾದ ಹೊಣೆಗಾರಿಕೆಯ ಫಲವಾಗಿ ಅದು ಜಗತ್ತಿನ ಇತರೆಡೆಗಳಲ್ಲಿನ ಸಮಸ್ಯೆ ಪರಿಹರಿಸಲಿಕ್ಕೆ ಕೂಡ ಮುಂದಾಗಬಹುದು. ಕಾಶ್ಮೀರದ ವಿಚಾರವಾಗಿಯೂ ಅದು ತಲೆಹಾಕಬಹುದು. ಹೀಗಾಗಿ ಭಾರತವು ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಬೇಕು.

ಮಂಡಳಿಯನ್ನು ಸೇರುವಂತೆ 62 ದೇಶಗಳಿಗೆ ಆಹ್ವಾನ ನೀಡಲಾಗಿದೆಯಾದರೂ 19 ದೇಶಗಳು ಮಾತ್ರ ಮಂಡಳಿಯನ್ನು ಸೇರಿ, ಅದರ ಸನ್ನದಿಗೆ ಸಹಿ ಹಾಕಿವೆ. ಯಾವ ದೇಶವೂ ಮಂಡಳಿಯ ಶಾಶ್ವತ ಸದಸ್ಯತ್ವ ಹೊಂದಲು ಅಗತ್ಯವಿರುವ ಶುಲ್ಕವನ್ನು ಪಾವತಿಸಿಲ್ಲ! ಅಮೆರಿಕದ ಮಿತ್ರ ದೇಶಗಳು, ಐರೋಪ್ಯ ಒಕ್ಕೂಟದ ಪ್ರಮುಖ ಸದಸ್ಯ ರಾಷ್ಟ್ರಗಳು ಮಂಡಳಿಯಿಂದ ದೂರ ಉಳಿದಿವೆ. ಮಂಡಳಿಯನ್ನು ಸೇರುವುದಿಲ್ಲ ಎಂಬ ಸೂಚನೆಯನ್ನು ಬ್ರಿಟನ್ ಮತ್ತು ಫ್ರಾನ್ಸ್ ರವಾನಿಸಿವೆ. ಚೀನಾ ಮತ್ತು ರಷ್ಯಾ ತಮ್ಮ ನಿಲುವನ್ನು ಸ್ಪಷ್ಟಪಡಿಸಿಲ್ಲ. ಮಂಡಳಿಯ ಸ್ವರೂಪವನ್ನು ಗಮನಿಸಿದರೆ, ಅದು ಟ್ರಂಪ್ ಅವರ ಖಾಸಗಿ ಸಂಸ್ಥೆಯಾಗಿ ಕೆಲಸ ಮಾಡಬಹುದು ಎಂಬಂತೆ ಕಾಣುತ್ತದೆ. ಈ ಮಂಡಳಿಯು ವಿಶ್ವಸಂಸ್ಥೆಯ ಅಧಿಕಾರಕ್ಕೆ ಅಡ್ಡಿ ಸೃಷ್ಟಿಸಬಹುದು ಎಂಬ ಅಭಿಪ್ರಾಯ ಅಂತರರಾಷ್ಟ್ರೀಯ ಸಮುದಾಯದಲ್ಲಿ ಇದೆ. ಮಂಡಳಿಯನ್ನು ಸೇರಲು ಅವಸರ ಪ್ರದರ್ಶಿಸುವುದು ಭಾರತದ ಹಿತಕ್ಕೆ ಪೂರಕವೇನೂ ಅಲ್ಲ.

ಜಾಲತಾಣ

ಕೇಂದ್ರದ ಇಬ್ಬಗೆ ನೀತಿ

ಈ ಬಾರಿಯ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧ ದಿಬ್ಬಣ ಕಾಣೆಯಾಗಿದ್ದು ವಿಷಾದನೀಯ. ಪರ್ಯಾಯ ನೀತಿಯಂತೆ ನಮಗೆ ತಪ್ಪಿದ್ದು ಎಂದುಕೊಂಡರೂ ಗುಜರಾತ್ ಮತ್ತು ಉತ್ತರಪ್ರದೇಶಕ್ಕೆ ಪ್ರತಿವರ್ಷವೂ ಅವಕಾಶ ದೊರಕುತ್ತಿರುವ ಇಬ್ಬಗೆ ನೀತಿಗೆ ಧಿಕ್ಕಾರ.

ಸಿಂಪಲ್ ಸುನಿ, ಸಿನಿಮಾ ನಿರ್ದೇಶಕ, 'ಎಕ್ಸ್'ನಿಂದ

ಕಿಡಿನುಡಿ

'ವಿಬಿ–ಜಿ ರಾಮ್ ಜಿ' ಯೋಜನೆಗೆ ಅನುದಾನ ಒದಗಿಸಿ ಕೊಡುವವರು ಯಾರು? ಕೇಂದ್ರವೇ ಅನುದಾನ ನೀಡಬೇಕು. ಬಿಜೆಪಿ ನಾಯಕರು ಚರ್ಚೆಗೆ ಬರುತ್ತೇವೆಂದು ಹೇಳಿದ್ದಾರೆ. ಸದನದಲ್ಲಿ ಅವರ ಚರ್ಚೆಗೆ ಉತ್ತರಿಸಲು ಸಿದ್ಧ.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 27-1-2001

• **ಭೂಕಂಪ: ಗುಜರಾತ್‌ನಲ್ಲೇ 1,200 ಮಂದಿ ಸಾವು**

ಅಹ್ಮದಾಬಾದ್, ಜ. 26 (ಯುಎನ್‌ಐ, ಪಿಟಿಐ)– ಕಳೆದ 200 ವರ್ಷಗಳಲ್ಲಿಯೇ ಅತ್ಯಂತ ಭೀಕರ ಎನ್ನಲಾದ ಭೂಕಂಪದಲ್ಲಿ ಗುಜರಾತ್ ರಾಜ್ಯವೊಂದರಲ್ಲೇ 1,200 ಮಂದಿ ಮೃತಪಟ್ಟಿದ್ದಾರೆ. ಎರಡು ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಚೆನ್ನೈ, ಕಲ್ಕತ್ತಾ, ಮುಂಬೈ, ದೆಹಲಿ ಮುಂತಾದ ದೇಶದ ಇತರ ಭಾಗಗಳಿಂದಲೂ ಭೂಕಂಪ ಸಂಭವಿಸಿದ ವರದಿಗಳು ಬಂದಿದ್ದರೂ ಗುಜರಾತ್ ಎಲ್ಲಕ್ಕಿಂತ ಹೆಚ್ಚು ಹಾನಿಯನ್ನು ಅನುಭವಿಸಿದೆ. ಸಾವುನೋವುಗಳ ಸ್ಪಷ್ಟ ಚಿತ್ರಣ ಇನ್ನೂ ಸಿಕ್ಕಿಲ್ಲ. ಕೋಟ್ಯಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

• **ತಲಕಾಡು: ಕಾವೇರಿ ನದಿಯಲ್ಲಿ ಈಜಲು ಹೋದ ಆರು ಯುವಕರ ಸಾವು**

ಟಿ. ನರಸೀಪುರ, ಜ. 26– ಕಾವೇರಿ ನದಿಯಲ್ಲಿ ಈಜಲು ಹೋದ ಬೆಂಗಳೂರಿನ 6 ಮಂದಿ ಯುವ ಪ್ರವಾಸಿಗರು ಕಾವೇರಿ ನದಿಯಲ್ಲಿ ಕೊಚ್ಚಿಕೊಂಡು ಹೋಗಿರುವ ದಾರುಣ ಘಟನೆ ತಾಲ್ಲೂಕಿನ ತಲಕಾಡು ಬಳಿ ಇಂದು ಮಧ್ಯಾಹ್ನ ನಡೆದಿದೆ.

ಗುರುಪ್ರಸಾದ್ (24), ಗೋಪಿನಾಥ (24), ನಾಗೇಂದ್ರ (25), ರವಿಕುಮಾರ್ (24), ಮಹೇಶ್ (24) ಹಾಗೂ ಮಂಜುನಾಥ್ (24) ಎಂಬುವರೇ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಚ್. ಶ್ರೀನಿವಾಸ್ ತಿಳಿಸಿದ್ದಾರೆ.

• **ಚೆನ್ನೈಗೆ ತೆರಳಿ ಕರುಣಾನಿಧಿಗೆ ರಾಜ್ ಧನ್ಯವಾದ ಅರ್ಪಣೆ**

ಚೆನ್ನೈ, ಜ. 26 (ಪಿಟಿಐ)– 'ನನ್ನ ತಂದೆಯ ಮೀಸೆ ವೀರಪ್ಪನ್‌ಗೆ ಇರೋದಕ್ಕಿಂತ ತುಂಬ ದೊಡ್ಡದಾಗಿತ್ತು. ವೀರಪ್ಪನ್‌ನನ್ನು ಹತ್ತಿರದಿಂದ ನೋಡುವ ಕುತೂಹಲ ನನಗಿತ್ತು'.

ನಟ ಡಾ. ರಾಜ್‌ಕುಮಾರ್ ಅವರು ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರನ್ನು ಭೇಟಿ ಮಾಡಲು ಚೆನ್ನೈಗೆ ಹೋದಾಗ ವೀರಪ್ಪನ್ ಕುರಿತು ಹೀಗೆ ತಮಾಷೆಯಾಗಿ ಹೇಳಿದರು.

75 ವರ್ಷಗಳ ಹಿಂದೆ

• **ಬಿಡುವು**

ಗಣರಾಜ್ಯೋತ್ಸವದ ಪ್ರಯುಕ್ತ 26-1-1951ರ ಶುಕ್ರವಾರದಂದು ಕಚೇರಿಗೆ ರಜೆ ಇತ್ತು. ಹಾಗಾಗಿ, 27-1-1951ರ ಶನಿವಾರದ ಸಂಚಿಕೆ ಪ್ರಕಟವಾಗಿಲ್ಲ.

ಪ್ರಧಾನಿ ಎದುರಿನ ಸವಾಲುಗಳು!

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

> ವರ್ತಮಾನದ ಹಲವು ಘಟನೆಗಳು ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸನ್ನು ಮಂಕಾಗಿಸುವಂತಿವೆ. ಅರಾವಳಿಯ ಅಪವ್ಯಾಖ್ಯಾನ, ದೆಹಲಿಯ ವಾಯುಮಾಲಿನ್ಯದ ಪ್ರಕರಣಗಳಲ್ಲಿ ಸರ್ಕಾರದ ವರ್ತನೆ ಪ್ರಬುದ್ಧವಾಗಿಲ್ಲ. ಸಂಬಂಧಿಸಿದವರು ಶಿಸ್ತು ಹಾಗೂ ಜವಾಬ್ದಾರಿಯುತವಾಗಿ ವರ್ತಿಸುವಂತೆ ಕ್ರಮ ಕೈಗೊಳ್ಳಲು ಪ್ರಧಾನಿಯವರು ಇನ್ನೂ ಕಾಯುತ್ತಾ ಕೂರಬಾರದು.

ವರ್ತಮಾನದ ಹಲವು ಬೆಳವಣಿಗೆಗಳ ಕಾರಣದಿಂದಾಗಿ ದೇಶಕ್ಕೆ ಹಾಗೂ ಮುಖ್ಯವಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಲವು ಸವಾಲುಗಳು ಎದುರಾಗಲಿವೆ. ಈ ಬೆಳವಣಿಗೆಗಳ ನಡುವೆ ಪರಸ್ಪರ ಸಂಬಂಧ ಇಲ್ಲವಾದರೂ, ಎಲ್ಲವೂ ಸರಿಯಾದ ಹಾದಿಯಲ್ಲಿ ಸಾಗುತ್ತಿಲ್ಲ ಎಂಬ ಭಾವನೆ ಮೂಡಿಸಿರುವುದು ಅವೆಲ್ಲವುಗಳಲ್ಲಿನ ಸಮಾನ ಅಂಶ.

ಜಾಗತಿಕ ಮಟ್ಟದಲ್ಲಿ ಹಾಗೂ ರಾಜತಾಂತ್ರಿಕ ವಿಚಾರಗಳಲ್ಲಿ ಪ್ರಧಾನಿಯವರು ಅಸಂಖ್ಯ ಸವಾಲುಗಳನ್ನು ನಿಭಾಯಿಸುತ್ತಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಲವು ವಿಷಯಗಳಲ್ಲಿ ಅನಿರೀಕ್ಷಿತ ಬಗೆಯಲ್ಲಿ ವರ್ತಿಸುತ್ತಿರುವುದನ್ನು ಮೋದಿ ಅವರು ಜಾಣತನದಿಂದ ನಿಭಾಯಿಸುತ್ತಿದ್ದಾರೆ. ಆದರೆ, ಸರಿಯಾದ ರೀತಿಯಲ್ಲಿ ನಿಭಾಯಿಸದ ಇತರ ಸಂಗತಿಗಳೂ ಇವೆ. ಉದಾಹರಣೆಗೆ, ಇಂಡಿಗೊ ಬಿಕ್ಕಟ್ಟನ್ನು ನಾಗರಿಕ ವಿಮಾನಯಾನ ಸಚಿವಾಲಯವು ಸರಿಯಾಗಿ ನಿರ್ವಹಿಸಲಿಲ್ಲ; ಅರಾವಳಿ ಗಣಿಗಾರಿಕೆ ಗುತ್ತಿಗೆ, ರಾಷ್ಟ್ರ ರಾಜಧಾನಿಯಲ್ಲಿ ಗಾಳಿಯ ಗುಣಮಟ್ಟ ಕುಸಿಯುತ್ತಿರುವ ವಿಷಯವನ್ನು ಪರಿಸರ ಸಚಿವಾಲಯ ಸರಿಯಾಗಿ ನಿಭಾಯಿಸಲಿಲ್ಲ.

ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದ ಶಾಸಕರೊಬ್ಬರಿಗೆ ದೆಹಲಿ ಹೈಕೋರ್ಟ್‌ನಿಂದ ಜಾಮೀನು ದೊರೆಯಿತು. ಗೋವಾ ಸರ್ಕಾರದ ಅದಕ್ಷತೆಯನ್ನು ಹೇಳುವ ರೀತಿಯಲ್ಲಿ ಗೋವಾದ ನೈಟ್ ಕ್ಲಬ್ ಒಂದರಲ್ಲಿ ಅಗ್ನಿ ದುರಂತ ಘಟಿಸಿತು. ವಿಚಿತ್ರವೆಂದರೆ ಇವೆಲ್ಲವೂ 2025ರ ಕೊನೆಯ ತ್ರೈಮಾಸಿಕದಲ್ಲಿ ನಡೆದಿವೆ.

ಮೊದಲಿಗೆ ಇಂಡಿಗೊ ಕಂಪನಿಯ ಬಿಕ್ಕಟ್ಟನ್ನು ಗಮನಿಸೋಣ. ಇಂಡಿಗೊ ಕಂಪನಿಗೆ ಭಾರತದ ನಾಗರಿಕ ವಿಮಾನಯಾನ ಮಾರುಕಟ್ಟೆಯಲ್ಲಿ ಶೇಕಡ 65ರಷ್ಟು ಪಾಲು ತನ್ನದಾಗಿಸಿಕೊಳ್ಳಲು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಅವಕಾಶ ಮಾಡಿಕೊಟ್ಟಿದ್ದು ಏಕೆ? ಈ ಕಂಪನಿಯು ವಿಮಾನಯಾನ ಕ್ಷೇತ್ರದ ಕತ್ತು ಹಿಸುಕಲು ಆಗುವಷ್ಟು ಶಕ್ತಿಯನ್ನು ಸಂಪಾದಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದು ಏಕೆ? ಡಿಜಿಸಿಎ ಸದಸ್ಯರು ಯಾರು? ಅವರು ವಿಮಾನಯಾನ ಕ್ಷೇತ್ರದ ಸಮರ್ಥ ವ್ಯಕ್ತಿಗಳೇ ಅಥವಾ ಅವರು ಅಧಿಕಾರಶಾಹಿ ವಲಯದ ವ್ಯಕ್ತಿಗಳೇ?

ಎರಡನೆಯದು, ಅರಾವಳಿ ಪರ್ವತಗಳಿಗೆ ಸಂಬಂಧಿಸಿದ್ದು. ಸುಪ್ರೀಂ ಕೋರ್ಟ್ ನವೆಂಬರ್ 20ರಂದು ನೀಡಿದ್ದ ತೀರ್ಪನ್ನು ಪರಿಸರ ಸಚಿವಾಲಯವು ಸಮರ್ಥಿಸುತ್ತಲೇ ಇತ್ತು. ಆದರೆ, ಕಿಚ್ಚನ್ನು ಆರಿಸಲು ಸುಪ್ರೀಂ ಕೋರ್ಟ್ ತಾನೇ ಖುದ್ದಾಗಿ ಮುಂದಾಯಿತು. ತನ್ನ ತೀರ್ಪನ್ನು ಅಮಾನತಿನಲ್ಲಿ ಇರಿಸಲು ನಿರ್ಧರಿಸಿತು. ಅರಾವಳಿ ಪರ್ವತ ಅಂದರೆ 100 ಮೀಟರ್‌ಗಿಂತ ಹೆಚ್ಚು ಎತ್ತರದ ಪರ್ವತ ಎಂದು 'ತಜ್ಞರ ತಂಡ'ವೊಂದು ನೀಡಿದ್ದ ವಿಚಿತ್ರ ವ್ಯಾಖ್ಯಾನವನ್ನು ಕೋರ್ಟ್ ನವೆಂಬರ್‌ನಲ್ಲಿ ಮಾನ್ಯ ಮಾಡಿತ್ತು. 'ತಜ್ಞರು' ಎಂದು ಹೇಳಿಕೊಂಡವರು ನೀಡಿದ ಅಭಿಪ್ರಾಯವನ್ನು ಸಚಿವಾಲಯವು ಬಹಳ ಗಟ್ಟಿಯಾಗಿ ಸಮರ್ಥಿಸಿಕೊಂಡಿತ್ತಾದರೂ, ಸುಪ್ರೀಂ ಕೋರ್ಟ್ ತನ್ನ ಈಚಿನ ಆದೇಶದಲ್ಲಿ ಭಿನ್ನವಾಗಿ ಯೋಚಿಸಿತು. ವಿಷಯ ಇತ್ಯರ್ಥ ಆಗುವವರೆಗೆ ತೀರ್ಪಿಗೆ ತಡೆ ಇರುತ್ತದೆ ಎಂದು ಹೇಳಿತು. ಈ ತಜ್ಞರ ಪೈಕಿ ಬಹುತೇಕರು ಅಧಿಕಾರಿಗಳು; ಅವರು ಪರಿಸರ ಕ್ಷೇತ್ರದ ತಜ್ಞರಲ್ಲ.

ಪರಿಸರ ಸಚಿವರು ತಮ್ಮ ಸಚಿವಾಲಯವನ್ನು ಬಹಳ ಗಟ್ಟಿಯಾಗಿ ಸಮರ್ಥಿಸಿಕೊಂಡರೂ, ಅರಾವಳಿ ಪರ್ವತಗಳಿಗೆ ಸಂಬಂಧಿಸಿದ ತೀರ್ಪು ಹಾಗೂ ಸರ್ಕಾರದ ನಿಲುವಿನ ವಿರುದ್ಧವಾಗಿ ಸಾರ್ವಜನಿಕರು ಬಹಳ ದೊಡ್ಡ ಮಟ್ಟದಲ್ಲಿ ಪ್ರತಿರೋಧ ವ್ಯಕ್ತಪಡಿಸಿದರು. ಈ ಪ್ರತಿರೋಧಕ್ಕೆ ಟಿ.ವಿ. ಹಾಗೂ ಪತ್ರಿಕಾ ಮಾಧ್ಯಮಗಳ ವರದಿಗಳೂ ಕಾರಣವಾದವು. ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ತನ್ನ ತೀರ್ಪು ಪ್ರಕಟಿಸಿದ ನಂತರದಲ್ಲಿ ಸರ್ಕಾರವು ಡಜನ್ನುಗಟ್ಟಲೆ ಗಣಿಗಾರಿಕೆ ಗುತ್ತಿಗೆಗಳನ್ನು ಬಹಳ ತ್ವರಿತವಾಗಿ ನೀಡಿದೆ; ನವೆಂಬರ್ ತೀರ್ಪಿಗೆ ಮುಂದೆ ತಡೆಯಾಜ್ಞೆ ಬಂದರೆ ಅಥವಾ ಆ ತೀರ್ಪನ್ನು ಕೋರ್ಟ್ ಪುನರ್ ಪರಿಶೀಲನೆಗೆ ಒಳಪಡಿಸಿದರೆ ಅದರ ಪರಿಣಾಮ ಹೆಚ್ಚಿನ ಮಟ್ಟದಲ್ಲಿ ಇಲ್ಲದಂತಾಗಲಿ ಎಂಬ ಕಾರಣದಿಂದ ಹೀಗೆ ಮಾಡಲಾಗಿದೆ ಎನ್ನುವ ಮಾಹಿತಿಯನ್ನು ಕೂಡ ಕೆಲವು ಮಾಧ್ಯಮಗಳು ಪ್ರಸಾರ ಮಾಡಿವೆ. ಇದು ನಿಜವೇ ಆಗಿದ್ದಲ್ಲಿ ಬಹಳ ಆಘಾತಕಾರಿ. ಇದು ಗಣಿಗಾರಿಕೆ ಮಾಫಿಯಾದ ಪ್ರಭಾವವು ತೀರ್ಮಾನ ತೆಗೆದುಕೊಳ್ಳುವ ಸ್ಥಾನದಲ್ಲಿ ಇರುವವರ ಮೇಲೆ ಯಾವ ಮಟ್ಟದಲ್ಲಿದೆ ಎಂಬುದನ್ನು ತೋರಿಸುತ್ತದೆ. ದುರದೃಷ್ಟದ ಸಂಗತಿ ಎಂದರೆ, ನಡೆದುಹೋದ ವಿಚಾರಗಳಿಗೆ ಸಂಬಂಧಿಸಿದಂತೆ ತಾರ್ಕಿಕವಾಗಿ ಒಪ್ಪಿಗೆಯಾಗುವ ವಿವರಣೆಯನ್ನು ಸರ್ಕಾರ ನೀಡಿಲ್ಲ. ಇದು ಕೇಂದ್ರ ಸರ್ಕಾರಕ್ಕೆ ಅಪಖ್ಯಾತಿ ತರುತ್ತಿದೆ.

ದೆಹಲಿಯಲ್ಲಿನ ಗಾಳಿಯ ಗುಣಮಟ್ಟ ಕುಸಿದಿದೆ. ದೆಹಲಿಯು ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮಲಿನಗೊಂಡ ನಗರಗಳಲ್ಲಿ ಒಂದಾಗಿದೆ. ಈ ವಿಚಾರದಲ್ಲಿ ಪರಿಸರ ಸಚಿವಾಲಯದ ಬಳಿ ಹೇಳಲು ಹೆಚ್ಚೇನೂ ಇಲ್ಲ. ಈ ವರ್ಷದಲ್ಲಿ ದೆಹಲಿಯ ಹಲವು ಕಡೆಗಳಲ್ಲಿ ಗಾಳಿಯ ಗುಣಮಟ್ಟ ಸೂಚ್ಯಂಕವು 400ರಿಂದ 1000ದ ನಡುವೆ ಇತ್ತು. ಕಳೆದ ವರ್ಷದಲ್ಲಿ ಇದು 1000ದ ಗಡಿಯನ್ನು ತಲುಪಿತ್ತು. ಆದರೆ, ಇವೆಲ್ಲದಕ್ಕೂ ಪರಿಸರ ಸಚಿವಾಲಯದ ಬಳಿ ಇದ್ದ ಪ್ರತಿಕ್ರಿಯೆ ಎಂದರೆ, ಪಂಜಾಬ್‌ನಲ್ಲಿ ಕೂಳೆ ಸುಡುವ ಕೆಲಸವನ್ನು ದೂಷಿಸುವುದು, ಆಮ್ ಆದ್ಮಿ ಪಕ್ಷದ ಬಗ್ಗೆ ಉಲ್ಲೇಖಿಸುವುದು ಇತ್ಯಾದಿ. ಅಂದರೆ ಹೊಣೆಗಾರಿಕೆಯ ಸ್ಥಾನದಲ್ಲಿ ಇರುವವರು ಸಂಪೂರ್ಣವಾಗಿ ಅಸಹಾಯಕರಾಗಿದ್ದಾರೆ. ಇದು ಕೇಂದ್ರ ಸರ್ಕಾರದ ಹೆಸರಿಗೆ ಧಕ್ಕೆ ತರುತ್ತಿದೆ.

ಉನ್ನಾವೊ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್‌ಗೆ ನೀಡಿದ್ದ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿದ್ದ ದೆಹಲಿ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿತು. ಸಿಬಿಐ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ಅವರು, ಹೈಕೋರ್ಟ್ ಆದೇಶಕ್ಕೆ ತಡೆ ನೀಡುವಂತೆ ಮನವಿ ಮಾಡಿದರು. ಆದರೆ, ಅಂತಹ ವ್ಯಕ್ತಿಯನ್ನು ಬಿಜೆಪಿಯಲ್ಲಿ ಇರಿಸಿಕೊಂಡಿದ್ದು ಏಕೆ ಎಂಬ ಪ್ರಶ್ನೆ ಹಾಗೇ ಉಳಿದುಕೊಂಡಿದೆ. ಬೇಸರದ ಸಂಗತಿಯೆಂದರೆ, ಈ ವ್ಯಕ್ತಿ ಎಸಗಿರುವ ಅಪರಾಧ ಬಹಳ ಗಂಭೀರ ಸ್ವರೂಪದ್ದಾಗಿದ್ದರೂ, ಸಂತ್ರಸ್ತರನ್ನೇ ಅವಮಾನಿಸುವ ಜನರು ಇದ್ದಾರೆ. ಸಂತ್ರಸ್ತರನ್ನು ಬೆದರಿಸುವವರು ಇದ್ದಾರೆ. ಸಂತ್ರಸ್ತೆಯ ತಂದೆಯನ್ನು ಕೊಂದ ಪ್ರಕರಣದಲ್ಲಿ ಸೆಂಗರ್ ಜೈಲಿನಲ್ಲಿದ್ದರೂ ತಾಂತ್ರಿಕ ಕಾರಣಗಳನ್ನು ಉಲ್ಲೇಖಿಸಿ ಅವರನ್ನು ಸಮರ್ಥಿಸಿಕೊಳ್ಳುವವರೂ ಇದ್ದಾರೆ. ಸೆಂಗರ್ ಅವರನ್ನು ಬಿಡುಗಡೆ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ವಕೀಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಹೇಶ್ ಜೇಠ್ಮಲಾನಿ ಅವರು ಅರಾವಳಿ ಪರ್ವತಗಳು ಹಾಗೂ ಸೆಂಗರ್ ಜಾಮೀನು ಕುರಿತು ಸುಪ್ರೀಂ ಕೋರ್ಟ್ ನೀಡಿದ ಸೂಚನೆಗಳನ್ನು ಶ್ಲಾಘಿಸಿದ್ದಾರೆ. ಅರಾವಳಿ ಪರ್ವತಗಳ ವಿಚಾರದಲ್ಲಿ ಜೇಠ್ಮಲಾನಿ ಅವರ ಪ್ರಕಾರ, ಸುಪ್ರೀಂ ಕೋರ್ಟ್ ಮೊದಲು ನೀಡಿದ ತೀರ್ಪು 'ಆಶ್ಚರ್ಯ ಮೂಡಿಸುವಂತೆ ಇತ್ತು'.

ಗೋವಾದ ನೈಟ್ ಕ್ಲಬ್ ಒಂದರಲ್ಲಿ ನಡೆದ ಬೆಂಕಿ ದುರಂತವು 25 ಜನರ ಜೀವವನ್ನು ಬಲಿ ಪಡೆಯಿತು. 50 ಮಂದಿಗೆ ಗಾಯಗಳಾದವು. ಈ ಘಟನೆಯ ಬಗ್ಗೆ ಕಡಿಮೆ ಮಾತನಾಡಿದಷ್ಟೂ ಒಳಿತು. ಈ ಕ್ಲಬ್ ಒಂದು ದ್ವೀಪದಲ್ಲಿದೆ, ಅಲ್ಲಿಂದ ಹೊರಬರಲು ಕಿರಿದಾದ ದಾರಿ ಇದೆ. ಈ ಕ್ಲಬ್ ಹಲವು ನಿಯಮಗಳನ್ನು ಉಲ್ಲಂಘಿಸಿದೆ, ಅಗ್ನಿ ಸುರಕ್ಷತಾ ದೃಷ್ಟಿಯಿಂದ ಇದು ಯಾವ ರೀತಿಯಿಂದಲೂ ಸುಸ್ಥಿತಿಯಲ್ಲಿ ಇರಲಿಲ್ಲ. ಆದರೆ, ಇದಕ್ಕೆ ಪರವಾನಗಿ ನೀಡಿದ್ದು ಯಾರು? ಅಗ್ನಿ ಸುರಕ್ಷತಾ ಅನುಮತಿಗಳು ಇಲ್ಲದೆ ಇದು ಹೇಗೆ ನಡೆಯುತ್ತಿತ್ತು? ಇಲ್ಲಿ ಭ್ರಷ್ಟಾಚಾರವು ತನ್ನ ಅತ್ಯಂತ ಕೊಳಕು ರೂಪವನ್ನು ತೋರಿಸಿದಂತೆ ಕಾಣುತ್ತಿದೆ. ಈ ದುರ್ಘಟನೆಗೆ ಕಾರಣರಾದವರೆಲ್ಲ ಬೆಲೆ ತೆರುವಂತೆ ಮಾಡಬೇಕು.

ಇಂದೋರ್‌ನಲ್ಲಿ ಕುಡಿಯುವ ನೀರಿನಲ್ಲಿ ಕೊಳಚೆ ನೀರನ್ನು ಬೆರೆಸಿದ್ದು ಇನ್ನೂ ಹೆಚ್ಚು ಆಘಾತಕಾರಿ ಸುದ್ದಿ. ಇದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಕೇಳಿದಾಗ ಮಧ್ಯಪ್ರದೇಶದ ಬಿಜೆಪಿ ನಾಯಕ ಹಾಗೂ ಕ್ಯಾಬಿನೆಟ್ ಸಚಿವ ಕೈಲಾಶ್ ವಿಜಯವರ್ಗೀಯ ಅವರು ಬಹಳ ಉದ್ಧಟತನದಿಂದ ನಡೆದುಕೊಂಡರು. ಈವರೆಗೆ ಅಲ್ಲಿ ಹಲವು ಜನ ಮೃತಪಟ್ಟಿದ್ದಾರೆ, ಡಜನ್ನುಗಟ್ಟಲೆ ಜನ ಆಸ್ಪತ್ರೆಯಲ್ಲಿದ್ದಾರೆ. ಸರ್ಕಾರ ಏನು ಮಾಡುತ್ತಿದೆ ಎಂದು ಟಿ.ವಿ. ವರದಿಗಾರರೊಬ್ಬರು ಕೇಳಿದಾಗ ವಿಜಯವರ್ಗೀಯ ಅವರು ಬಹಳ ಸಿಟ್ಟಿನಿಂದ ಪ್ರತಿಕ್ರಿಯೆ ನೀಡಿದರು, ನಿಂದನೆಯ ಭಾಷೆಯನ್ನು ಬಳಸಿದರು. ಇವರಂತಹ ನಾಯಕರು ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಬಹಳ ದೊಡ್ಡ ಮಟ್ಟದಲ್ಲಿ ಹಾನಿ ಉಂಟುಮಾಡುತ್ತಿದ್ದಾರೆ. ಪಕ್ಷದ ಹೆಸರು ಹಾಳು ಮಾಡುತ್ತಿರುವ ಇಂತಹ ವ್ಯಕ್ತಿಗಳ ವಿರುದ್ಧ ಬಿಜೆಪಿಯ ನಾಯಕತ್ವವು ಕ್ರಮ ಜರುಗಿಸಬೇಕು. ಉದ್ಧಟತನದಿಂದ ವರ್ತಿಸುವ ನಾಯಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.

ಸಂಬಂಧಪಟ್ಟವರು ಶಿಸ್ತಿನಿಂದ ವರ್ತಿಸುವಂತೆ ಮಾಡಲು ಪ್ರಧಾನಿಯವರು ಕ್ರಮ ಜರುಗಿಸಲು ಸಮಯ ಬಂದಿದೆ ಎಂದು ಹೇಳಬೇಕಾಗುತ್ತದೆ. ಕೇಂದ್ರದ ಮಂತ್ರಿ ಪರಿಷತ್ತಿನಲ್ಲಿ ಯಾರಿರಬೇಕು ಎಂಬ ವಿಚಾರದಲ್ಲಿ, ಬಿಜೆಪಿಯು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಸರ್ಕಾರವನ್ನು ಯಾರು ನಡೆಸಬೇಕು ಎಂಬ ವಿಚಾರದಲ್ಲಿ ಅವರು ಗಟ್ಟಿಯಾದ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಹೀಗೆ ಮಾಡಿದಾಗ ಇಂತಹ ಅಹಿತಕರ ಬೆಳವಣಿಗೆಗಳು ಪ್ರಧಾನಿಯವರ ಹೆಸರಿನ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುವುದನ್ನು ತಡೆಯಲು ಆಗುತ್ತದೆ.

ಎಐ ಚಿತ್ರ

ವಾಚಕರ ವಾಣಿ

ಪಶ್ಚಿಮಘಟ್ಟಕ್ಕೆ ಉಸಿರುಗಟ್ಟಿಸಿದ ಪ್ಲಾಸ್ಟಿಕ್

ಕಾರ್ಯಾಗಾರವೊಂದರ ನಿಮಿತ್ತ ಇತ್ತೀಚೆಗೆ ಕುಪ್ಪಳಿಗೆ ಭೇಟಿ ನೀಡುವ ಸಂದರ್ಭ ಒದಗಿಬಂದಿತ್ತು. ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಹೊರಟಾಗ ಕಾಡಿನ ಸೌಂದರ್ಯ ನೋಡುತ್ತಾ ಕುಳಿತವಳಿಗೆ ಕಂಡದ್ದು ರಸ್ತೆಯ ಅಂಚಿನ ಮರಗಳ ಕೆಳಗೆ ಬಿದ್ದಿರುವ ಪ್ಲಾಸ್ಟಿಕ್ ತ್ಯಾಜ್ಯ. ಕೆಲವೆಡೆ ಕಾಡಿನೊಳಗೆ ರಾಶಿ ಹಾಕಲಾಗಿದೆ. ಪಶ್ಚಿಮಘಟ್ಟಗಳ ಬಗ್ಗೆ ನಾವು ಸಾಕಷ್ಟು ಓದುತ್ತೇವೆ, ತಿಳಿಯುತ್ತೇವೆ. ಆದರೆ, ಅವುಗಳನ್ನು ಸಂರಕ್ಷಣೆ ಮಾಡುವಲ್ಲಿ ವಿಫಲರಾಗಿದ್ದೇವೆ. ಇದರಿಂದ ಕಾಡು ಮತ್ತು ವನ್ಯಜೀವಿಗಳಿಗೆ ಆಪತ್ತು ತಪ್ಪಿದ್ದಲ್ಲ. ಈ ಕುರಿತು ಸರ್ಕಾರ ಗಮನಹರಿಸಬೇಕಿದೆ. ಸಾಧ್ಯವಾದರೆ ಸ್ವಯಂಸೇವಕರನ್ನು ಆಹ್ವಾನಿಸಿ ತ್ಯಾಜ್ಯ ವಿಲೇವಾರಿ ಮಾಡಬೇಕು. ಪರಿಸರ ದಿನಾಚರಣೆಯು ಒಂದು ದಿನಕ್ಕೆ ಸೀಮಿತವಾಗಬಾರದು. ಅದು ನಿರಂತರವಾಗಿರಬೇಕು ಎನ್ನುವುದು ಆಳುವ ವರ್ಗಕ್ಕೆ ಅರ್ಥವಾಗಬೇಕಿದೆ.

ರೇಷ್ಮಾ ಗುಳೇದಗುಡ್ಡಾಕರ್, ಕೊಟ್ಟೂರು

ಸರ್ಕಾರಕ್ಕೆ ಚೆಲ್ಲಾಟ: ಯುವಜನಕ್ಕೆ ಸಂಕಟ

ರಾಜ್ಯದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿದೆ. ಆಳುವ ವರ್ಗವು ಲಕ್ಷಾಂತರ ಅಭ್ಯರ್ಥಿಗಳ ಜೀವನದ ಜತೆ ಚೆಲ್ಲಾಟವಾಡುತ್ತಿದೆ. ಪರೀಕ್ಷೆಗಳ ಘೋಷಣೆ, ಫಲಿತಾಂಶ ಮತ್ತು ನೇಮಕಾತಿ ಆದೇಶ ವಿತರಣೆ ನಡುವಿನ ಸುದೀರ್ಘ ಸಮಯದಿಂದಾಗಿ ಅಭ್ಯರ್ಥಿಗಳ ವಯೋಮಿತಿ ಮೀರುತ್ತಿದೆ. ಸರ್ಕಾರವು ನೇಮಕಾತಿ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು ಮತ್ತು ವಿಳಂಬವಾಗಿರುವ ಪರೀಕ್ಷೆಗಳಿಗೆ ವಿಶೇಷವಾಗಿ 'ವಯೋಮಿತಿ ಸಡಿಲಿಕೆ' ಘೋಷಿಸಬೇಕು. ಪ್ರಸ್ತುತ ಕೃತಕ ಬುದ್ಧಿಮತ್ತೆಯಿಂದಾಗಿ ಖಾಸಗಿ ವಲಯದಲ್ಲಿ ಉದ್ಯೋಗ ಕಡಿತದ ಭೀತಿ ಎದುರಾಗಿದೆ. ಯುವಜನತೆಗೆ ಸರ್ಕಾರಿ ಉದ್ಯೋಗವೇ ಈಗ ಭರವಸೆಯಾಗಿ ಉಳಿದಿದೆ. ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಪೂರಕವಾಗಿ ಯುವಜನರಿಗೆ ಕೌಶಲ ತರಬೇತಿ ನೀಡುವುದು ಸರ್ಕಾರದ ಜವಾಬ್ದಾರಿ.

ಗೌರಿ ತ್ರಿವೇಣಿ, ಹೊಸಪೇಟೆ

ಪ್ರಲಾಪ ಸಾಕು; ಗಂಭೀರ ಚರ್ಚೆ ಬೇಕು

ಪ್ರತಿಬಾರಿಯೂ ಸದನದಲ್ಲಿ ನಡೆಯುವ ಕಲಾಪವನ್ನು ಗಮನಿಸುವಾಗ ಸಾರ್ವಜನಿಕ ಸಮಸ್ಯೆಗಳ ಬದಲಾಗಿ ಶಾಸಕರ ಪರಸ್ಪರ ನಿಂದನೆ, ತೇಜೋವಧೆಯೊಂದಿಗೆ ಮುಂದಿನ ಚುನಾವಣೆಗೆ ಮತಗಳಿಗೆ ಬೇಕಾದ ವೇದಿಕೆಯ ಸಿದ್ಧತೆಯಲ್ಲೇ ಅಧಿವೇಶನವು ಮುಕ್ತಾಯವಾಗುತ್ತದೆ. ವಿವೇಕಯುತವಾಗಿ ಮುಗಿಸಬಹುದಾದ ರಾಜ್ಯಪಾಲರ ಅಪೂರ್ಣ ಭಾಷಣದ ವಿಚಾರವನ್ನು ಇಡೀ ದಿನ ಚರ್ಚೆಯಾಗಿಸಿ ಕಲಾಪವನ್ನು ವ್ಯರ್ಥಗೊಳಿಸಲಾಯಿತು. ಇದು ವಿವೇಚನಾರಹಿತ ನಡೆ. ರಾಜ್ಯಪಾಲರ ಭಾಷಣ ಕುರಿತು ಸಂವಿಧಾನದಲ್ಲಿರುವ ಸಾಧಕ–ಬಾಧಕ ಅರಿತು ಮುಂದುವರಿಯಬೇಕಾದ ನಾಯಕರು ಅದರ ಹಿಂದೆ ಬಿದ್ದು ಮೊಂಡುವಾದ ಮಾಡುತ್ತಾ ಕಾಲಹರಣ ಮಾಡಿದ್ದು ವಿಪರ್ಯಾಸ. ಕಳೆದ ಎರಡ್ಮೂರು ವರ್ಷಗಳಿಂದ ಸರ್ಕಾರಿ ನೇಮಕಾತಿ ಇಲ್ಲದೆ ಯುವಜನರು ಬೀದಿಗಿಳಿದು ಹೋರಾಡುತ್ತಿದ್ದಾರೆ. ಈ ಬಗ್ಗೆ ಸದನದಲ್ಲಿ ಒಂದು ದಿನ ಚರ್ಚೆ ನಡೆಯಲಿ.

ರಿಚರ್ಡ್ ಆಂಟನಿ, ಶ್ರೀರಂಗಪಟ್ಟಣ

ಪ್ರಾದೇಶಿಕ ಸೊಗಡು: ಸಿನಿಮಾಕ್ಕೆ ಕಸುವು

ಇತ್ತೀಚೆಗೆ ಚಂದನವನದಲ್ಲಿ ಪ್ರಾದೇಶಿಕ ಸೊಗಡು ಬಿಂಬಿಸುವ ಸಿನಿಮಾಗಳ ನಿರ್ಮಾಣ ಅಪರೂಪವೆಂದೇ ಹೇಳಬಹುದು. ತಮಿಳು, ಮಲಯಾಳ ಚಿತ್ರರಂಗವು ಇದಕ್ಕೆ ಅಪವಾದ. ಇಂತಹ ಸಿನಿಮಾಗಳು ಜನರ ಮನಸ್ಸಿಗೆ ಹತ್ತಿರವಾಗುತ್ತವೆ. ಜಡೇಶ್ ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್' ಕನ್ನಡ ಸಿನಿಮಾ ಪ್ರಾದೇಶಿಕ ಸೊಗಡಿನೊಂದಿಗೆ ಸಾಹಿತ್ಯ ಮತ್ತು ಸಂವಿಧಾನದ ಹೂರಣವಿರುವ ಚಿತ್ರ. 'ಸಂಧಾನ ಅಲ್ಲ ಸಂವಿಧಾನ', 'ರಾಜಪ್ರಭುತ್ವ ಅಲ್ಲ ಪ್ರಜಾಪ್ರಭುತ್ವ' – ಚಿತ್ರದಲ್ಲಿನ ಇಂತಹ ಸಂಭಾಷಣೆಗಳು ಸಮಕಾಲೀನ ಸಮಾಜದ ಸ್ಥಿತಿಗತಿ ಬಗ್ಗೆ ಜನರನ್ನು ವಿಮರ್ಶಿಸುವಂತೆ ಮಾಡುತ್ತವೆ. ಕನ್ನಡದಲ್ಲಿ ಒಂದು ಕಾಲದಲ್ಲಿ ಪ್ರಾದೇಶಿಕ ಸೊಗಡು ತುಂಬಿರುತ್ತಿದ್ದ ಸಿನಿಮಾಗಳು ಹೆಚ್ಚು ತೆರೆಕಾಣುತ್ತಿದ್ದವು. ಸದ್ಯ ಅವುಗಳ ಸಂಖ್ಯೆ ಕಡಿಮೆಯಾಗಿದೆ. ಮಣ್ಣಿನ ವಾಸನೆ ಬೆರೆತ ಸಿನಿಮಾಗಳು ಪ್ರೇಕ್ಷಕರ ಹೃದಯವನ್ನೂ ಗೆಲ್ಲುತ್ತವೆ. ನಿರ್ದೇಶಕರು ಇದರತ್ತ ಗಮನಹರಿಸಬೇಕಿದೆ.

ಪ್ರವೀಣ ಈ., ಚನ್ನಗಿರಿ

ಅರ್ಹತಾ ಪರೀಕ್ಷೆ ಬಗ್ಗೆ ಶಿಕ್ಷಕರಲ್ಲಿ ಗೊಂದಲ

ಪ್ರೌಢಶಾಲಾ ಶಿಕ್ಷಕರಿಂದ ಪದವಿಪೂರ್ವ ಉಪನ್ಯಾಸಕರ ಹುದ್ದೆಗೆ ಪದೋನ್ನತಿಗಾಗಿ ಅರ್ಹತಾ ಪರೀಕ್ಷೆ ನಡೆಸಲು ಸರ್ಕಾರ ತೀರ್ಮಾನಿಸಿದೆ. ಈ ಪರೀಕ್ಷೆಯನ್ನು ಮೊದಲ ಬಾರಿಗೆ ನಡೆಸಲಾಗುತ್ತಿದೆ; ಪರೀಕ್ಷೆಯು ವಿವರಣಾತ್ಮಕವಾಗಿ ಇರಲಿದೆ ಎಂಬುದಷ್ಟೇ ಅಭ್ಯರ್ಥಿಗಳಿಗೆ ತಿಳಿದಿದೆ. ಅದನ್ನು ಬಿಟ್ಟರೆ ಪ್ರಶ್ನೆಪತ್ರಿಕೆಯ ವಿವರಣೆ, ಸ್ವರೂಪ, ಅಂಕಗಳ ವಿನ್ಯಾಸ, ಮತ್ತು ವಿಭಾಗವಾರು ಕುರಿತು ಸ್ಪಷ್ಟ ಮಾಹಿತಿ ಪ್ರಕಟವಾಗಿಲ್ಲ. ಇದರಿಂದ ಪರೀಕ್ಷೆಗೆ ತಯಾರಾಗುತ್ತಿರುವ ಶಿಕ್ಷಕರಿಗೆ ಗೊಂದಲ ಉಂಟಾಗಿದೆ. ಪರೀಕ್ಷೆಯ ಮಾದರಿ ಕುರಿತು ಪೂರ್ವ ಮಾಹಿತಿ ನೀಡಬೇಕಿದೆ. ಮಾದರಿ ಪ್ರಶ್ನೆಪತ್ರಿಕೆ ಅಥವಾ ಮಾರ್ಗಸೂಚಿ ಪ್ರಕಟಿಸಿದರೆ ಅನುಕೂಲವಾಗಲಿದೆ.

ಶ್ರೀಸಾಯಿ ರಾಘವ್ ಎಸ್., ರಾಣೆಬೆನ್ನೂರು

ಗಣಿತ ಪರೀಕ್ಷೆ ಸರಳೀಕರಣಕ್ಕೆ ಒತ್ತು ನೀಡಿ

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಗಣಿತಕ್ಕೆ ಹೆದರಿ ಶಿಕ್ಷಣದಿಂದ ವಂಚಿತರಾಗುವ ಸಾಧ್ಯತೆ ಇದೆ. ಹಾಗಾಗಿ, ಈ ವರ್ಷದ ಗಣಿತ ಪರೀಕ್ಷೆಯನ್ನು ಕೇಂದ್ರ ಪಠ್ಯಕ್ರಮದ ರೀತಿಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೂ ಸರಳೀಕರಣಗೊಳಿಸಿದರೆ ಉತ್ತಮ ಅಂಕಗಳಿಸಲು ಸಾಧ್ಯವಾಗಲಿದೆ. ಸಿಬಿಎಸ್‌ಇ ಮಾದರಿಯಲ್ಲಿ ಉತ್ತಮ ಅಂಕ ಪಡೆದು ಉನ್ನತ ಶಿಕ್ಷಣಕ್ಕೆ ಹೋಗಲು ಅನುಕೂಲವಾಗುತ್ತದೆ. ರಾಜ್ಯ ಶಿಕ್ಷಣ ಇಲಾಖೆಯು ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ

ಚುರುಮುರಿ

ಅಪಾರ್ಥ ಚಿಂತಾಮಣಿ

• ಲಿಂಗರಾಜು ಡಿ.ಎಸ್.

'ನಮ್ಮ ಕಾಲದ ರಾಜಕಾರಣಿಗಳು ದೀಪದಿಂದ ದೀಪ ಹಚ್ಚಿರಿ ಅಂತ ಹೇಳಿ ಹೊಂಟೋದ ಮ್ಯಾಲೆ ಈವತ್ತ ಜನನಾಯಕರು ದೀಪ ಇರೋದೇ ಬೆಂಕಿ ಹಚ್ಚಕ್ಕೆ ಅಂತ ದ್ವೇಷದ ಬೆಂಕಿ ಹಾಕಿ ಮೈಕಾಯಿಸ್ಕತಾವ್ರೆ' ಯಂಟಪ್ಪಣ್ಣ ಬೇಜಾರು ತೋರಿಸಿತು.

'ಇದೇನು ಕಂಡಿಯೇ, ರಾಜ್ಯಪಾಲರ ಬಾಯಿಂದ ನರೇಗಾ ಕೀರ್ತನೆ ಹಾಡಿಸಿ ಅವಯ್ಯನ ವ್ಯಾಜ್ಯಪಾಲರ ಮಾಡಕೊಂಟಿದ್ರಲ್ಲಾ. ಯಂಗೋ 'ಬತ್ತೀನಿ ತಡಿರಿ' ಅಂದ್ಕಂದು ಬಚಾವಾತು' ಅಂದ್ರು ತುರೇಮಣೆ.

'ಮನ್ನೆ ಶಾಸಕರು ದುಂಡಾವರ್ತಿ, ಗೂಂಡಾಗಿರಿ, ಅತ್ಯಾಚಾರಿ, ಪೋಕ್ಸೊ, ರೌಡಿ, ಬಲಾತ್ಕಾರಿ ಅಂತ ಹೇಳಿಕ್ಯಂದವ್ರೆ. ಯಾಕೋ ಕಾಣೆ' ಅಂತಂದೆ.

'ಅವೆಲ್ಲ ಅವರ ಹೆಸರು ಕಜಾ. ಜೈಲಗಿರೋ ದ್ವೇಷಭಕ್ತರು 'ನಮಗೆ ಮನೆ ಊಟ ಬೇಕು, ಜೈಲಲ್ಲಿ ಊಟ ತಿನ್ನಂಗುಲ್ಲ' ಅಂತ ಜುಲುಮೆ ಮಾಡ್ತಾವಂತೆ. ಜೈಲಲ್ಲಿ ಎಲ್ಲಾ ಬ್ಯಾರಕ್ಕಿಗೂ ಲೈವ್ ಸಿಸಿ ಕ್ಯಾಮೆರಾ ಹಾಕಿ ಜೈಲಲ್ಲಿ ಊಟ ಯಂಗಿರತದೆ, ಪಾರ್ಟಿಗಳು ಯಂಗಾತವೆ ಜನವೆಲ್ಲಾ ಲೈವಾಗಿ ನೋಡ್ಕಳಿ ಅಂತ ಬುಟ್ರಾಗಕುಲ್ವೇ. ಮೊಬೈಲ್ ಜಾಮರ್ ಹಾಕಿದ್ರೂ ಬರ್ಕತ್ತಾಯ್ತಿಲ್ಲವಂತೆ. ಲ್ಯಾಂಡ್‌ಲೈನ್ ಹಾಕಕೇನು ಮಲ್ಲಾಗರು?' ತಿಪ್ಪಣ್ಣ ಕೇಳಿದ.

'ಇವೆಲ್ಲಾ ಚಾಲುಗೆಟ್ಟ ಪೊಲೀಸುಗಳ ಚಿತಾವಣೆ ಕಯ್ಯಾ. ಪೊಲೀಸ ಪದದೇಲಿದ್ದ ಸ–ಕಾರವ ಸುತ್ತಿ ಮಗ್ಗುಲಿಗೆ ಮಡಿಕ್ಯಂದವೆ' ತುರೇಮಣೆ ಪುಂಗಿದರು.

'ಅಲ್ಲಾ ಮಹಾರಾಷ್ಟ್ರ ದೇಲಿ ಲಾರಿಲಿ ಸಾಗಿಸ್ತಿದ್ದ ಸಾವಿರ ಕೋಟಿ ಎಪ್ಪೆಸ್ ಆಗಿ ತಿಂಗಳಾದ್ರೂ ದೂರೇ ಕೊಟ್ಟಿಲ್ವಂತೆ. ಇಷ್ಟೆಲ್ಲಾ ಹಡಬಿಟ್ಟಿ ಕಾಸು ಲಾರೀಲಿ ತಕ್ಕೋದಾರೇ?' ತಿಪ್ಪಣ್ಣ ಆಶ್ಚರ್ಯಪಟ್ಟ.

'ಅಬಕಾರಿ ದುಪಟಿ ಕಮೀಸನರುಗಳೇನೂ ಕಮ್ಮಿಯಿಲ್ಲ ಅಣ್ತಮ್ಮ. ಲೈಸೆನ್ಸು ತಕ್ಕೋಕೆ ಬಂದೋರಿಗೆ ಅಮರಿಕ್ಯಂದು ಕೋಟಿ ಕೋಟಿ ಕಾಸು ಕೀಳ್ತಿರದು ಮಿನಿಸ್ಟ್ರು ತಿಮ್ಮಣ್ಣಗೆ ಗೊತ್ತಾತಿಲ್ಲವಂತೆ, ಪಾಪ' ಅಂತ ಕತೆ ಬಿಚ್ಚಿದೆ.

'ಒಂದೊತ್ತಿನ ಬೂವಕ್ಕೇ ಜನ ದೇಕ್ತಾ ಇರುವಾಗ ಇವು ನೋಡ್ರಯ್ಯಾ ಎರಡೂ ಕೈ ಚಾಚಿಕ್ಯಂದು ಸವ್ಯಚಾಚಿಗಳಾಗಿ ಬುಟ್ಟವೆ' ಯಂಟಪ್ಪಣ್ಣನ ಕಲ್ಪನೆಗೆ ಉಕ್ಕಿದ ನಗು ಬುಗ್ಗನೆ ಹೊರಚೆಲ್ಲಿತು.

ಸಂಗತ

ಅಧಿಕಾರ ಕೇಂದ್ರಗಳ ಸ್ವೇಚ್ಛೆ; ಜನ ಕಂಗಾಲು

ಸಮಾಜದ ಹಿತಕ್ಕಾಗಿ ಹುಟ್ಟಿಕೊಂಡ ಅಧಿಕಾರ ಕೇಂದ್ರಗಳು ಜನರ ಮೇಲೆಯೇ ಅಧಿಕಾರ ಚಲಾಯಿಸುತ್ತಿವೆ. ಮೂಲ ಆಶಯಗಳನ್ನೇ ನಿರ್ಲಕ್ಷಿಸಿವೆ.

• ನಡಹಳ್ಳಿ ವಸಂತ್

ಮಾನವರು ಈ ಭೂಮಿಯ ಮೇಲೆ ಸುಮಾರು 18–20 ಲಕ್ಷ ವರ್ಷಗಳಿಂದ ಬದುಕುತ್ತಿದ್ದಾರೆ. ಆದರೆ, ಕೃಷಿಯನ್ನು ಅನ್ವೇಷಿಸಿ ಸ್ಥಿರವಾದ ಬದುಕನ್ನು ಕಂಡುಕೊಂಡಿದ್ದು ಸುಮಾರು 10–12 ಸಾವಿರ ವರ್ಷಗಳಿಂದೀಚೆಗೆ. ಅಲ್ಲಿಯವರೆಗೂ ಮಾನವ ಕುಲ ಹೆಚ್ಚೆಂದರೆ 100–150 ಜನರ ಸಣ್ಣ ಗುಂಪುಗಳಲ್ಲಿ, ಬೆಟ್ಟ ಕಾಡುಗಳಲ್ಲಿ ಅಲೆಮಾರಿ ಬದುಕನ್ನು ನಡೆಸುತ್ತಾ ಬಂದಿತ್ತು. ಅಂತಹ ಚಿಕ್ಕ ಗುಂಪಿಗೆ ಒಬ್ಬ ನಾಯಕನಿರುತ್ತಿದ್ದ ಮತ್ತು ಗುಂಪಿನ ಸದಸ್ಯರೆಲ್ಲರೂ ಅವನ ಅಣತಿಯಂತೆ ನಡೆದುಕೊಳ್ಳುವುದು ಅಸ್ತಿತ್ವದ ಅನಿವಾರ್ಯತೆಯಾಗಿತ್ತು. ಆದರೆ, ಸಮಾಜ ದೊಡ್ಡ ದೊಡ್ಡ ಘಟಕಗಳಾಗತೊಡಗಿದಂತೆ ಎರಡು ಮೂರು ಹಂತದ ಅಧಿಕಾರ ಕೇಂದ್ರಗಳು ಅನಿವಾರ್ಯವಾದವು. ದೂರದಲ್ಲಿರುತ್ತಿದ್ದ ರಾಜರುಗಳು ತಮ್ಮ ಮಂತ್ರಿಗಳು, ಸೇನಾ ನಾಯಕರು, ಸಾಮಂತರು, ಪಾಳೆಯಗಾರರ ಮೂಲಕ ಆಡಳಿತ ನಡೆಸುತ್ತಿದ್ದರು. ಹೀಗೆ ಅಧಿಕಾರ ಕೇಂದ್ರಗಳು ಹೆಚ್ಚುತ್ತಲೇ ಹೋದವು.

ವಸ್ತುಗಳು ಮತ್ತು ಸೇವೆಗಳನ್ನು ಸೀಮಿತವಾಗಿ ಶೇಖರಿಸಲು ಸಾಧ್ಯವಾಗುವ ಕಾಲದಲ್ಲಿ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರ ಕಡಿಮೆಯಾಗಿರುತ್ತಿತ್ತು. ಆದರೆ, ಹಣದ ಆವಿಷ್ಕಾರವಾದ ಮೇಲೆ ದೊಡ್ಡ ಮಟ್ಟದಲ್ಲಿ ಅದನ್ನು ಸಂಗ್ರಹಿಸಲು ಸಾಧ್ಯವಾಯಿತಲ್ಲದೆ, ಹೊಸ ಅಧಿಕಾರ ಕೇಂದ್ರದ ಸೃಷ್ಟಿಯಾಯಿತು. ಕೈಗಾರಿಕಾ ಕ್ರಾಂತಿಯ ನಂತರ ಕಾರ್ಪೊರೇಟ್ ಆಡಳಿತ ವ್ಯವಸ್ಥೆಯು ಪ್ರಾರಂಭವಾಗಿ ಬಂಡವಾಳಶಾಹಿಗಳ ಉಗಮವಾಯಿತು.

ಮಾನವರ ಅಂತರಂಗದ ಸಮಾಧಾನ– ತೃಪ್ತಿಗಳ ಹುಡುಕಾಟಕ್ಕಾಗಿ ಹುಟ್ಟಿಕೊಂಡ ಧರ್ಮಗಳು ಜನರ ಮೇಲೆ ಮಾನಸಿಕ ಹಿಡಿತ ಸಾಧಿಸುತ್ತಾ ಹೊಸದೊಂದು ಅಧಿಕಾರ ಕೇಂದ್ರ ಹುಟ್ಟಿಕೊಂಡಿತು. ಪ್ರಜಾಪ್ರಭುತ್ವದ ರಾಷ್ಟ್ರಗಳು ಉದಯವಾದ ಮೇಲೆ ರಾಜಕೀಯ ಆಡಳಿತಕ್ಕೆ ಸಹಾಯಕವಾಗಿ ಅಧಿಕಾರಿ ವರ್ಗವೊಂದು ಸೃಷ್ಟಿಯಾಯಿತು. ನ್ಯಾಯಪಾಲನೆಗೆ ಅನುಕೂಲ ಆಗುವಂತೆ ಪೊಲೀಸ್ ವ್ಯವಸ್ಥೆ ಮತ್ತು ನ್ಯಾಯಾಲಯಗಳನ್ನು ರೂಪಿಸಲಾಯಿತು. ಹೀಗೆ ಜನಸಾಮಾನ್ಯರ ಮೇಲೆ ಅಧಿಕಾರ ಕೇಂದ್ರಗಳು ಹೆಚ್ಚುತ್ತಲೇ ಹೋದವು.

ಹೀಗೆ ಹಲವಾರು ಅಧಿಕಾರ ಕೇಂದ್ರಗಳು ಸೃಷ್ಟಿ ಆಗಿದ್ದು ಜನಸಾಮಾನ್ಯರ ಹಿತ ಕಾಪಾಡುವ ಉದ್ದೇಶದಿಂದ ಎನ್ನುವುದರಲ್ಲಿ ಅನುಮಾನವಿಲ್ಲ. ಎಲ್ಲಾ ದೇಶ–ಕಾಲಗಳಲ್ಲಿಯೂ ಸಂಪೂರ್ಣ ಜನಸಮುದಾಯ ಪ್ರಬುದ್ಧವಾಗಿರಬೇಕೆಂದು ನಿರೀಕ್ಷಿಸುವುದು ಅವಾಸ್ತವಿಕ. ಹಾಗಾಗಿ, ಈ ಎಲ್ಲಾ ಅಧಿಕಾರ ಕೇಂದ್ರಗಳನ್ನು ಒಂದು ವ್ಯವಸ್ಥೆಗೆ ಒಳಪಡಿಸಲು ರಾಷ್ಟ್ರಗಳು ಸಂವಿಧಾನವನ್ನು ರೂಪಿಸಿಕೊಂಡವು. ಅಧಿಕಾರ ಕೇಂದ್ರಗಳು ಸಂವಿಧಾನದ ಮೂಲ ಆಶಯಗಳನ್ನು ಮೀರಿಹೋಗುವುದಿಲ್ಲ ಎನ್ನುವುದು ಇದರ ಆಶಯವಾಗಿತ್ತು.



ಜವಾಬ್ದಾರಿಯುತ ಆಳುವ ವರ್ಗ ಮತ್ತು ಸಮಾಜದ ಮುಂಚೂಣಿಯಲ್ಲಿರುವ ಇತರರು ಸೇರಿ ಜನಸಾಮಾನ್ಯರು ದಾರಿತಪ್ಪದಂತಹ ಸೂಕ್ತವಾದ ಸಾಮಾಜಿಕ ವಾತಾವರಣವನ್ನು ನಿರ್ಮಿಸಬೇಕು. ಈ ವ್ಯವಸ್ಥೆಗೆ ಧರ್ಮಗಳು ನೈತಿಕ ತಳಹದಿಯನ್ನು ಒದಗಿಸಬೇಕು. ಉದ್ಯಮಿಗಳು ಜನಸಮುದಾಯಕ್ಕೆ ಉದ್ಯೋಗಾವಕಾಶಗಳನ್ನು ನೀಡುವ ಮಾರ್ಗದಲ್ಲಿ ನೈತಿಕ ಮತ್ತು ಕಾನೂನಿನ ಮಿತಿಗಳನ್ನು ಮೀರದಂತೆ ನೋಡಿಕೊಳ್ಳುವುದು ಸರ್ಕಾರಗಳ ಜವಾಬ್ದಾರಿಯಾಗಬೇಕು. ಸರ್ಕಾರಗಳ ಈ ಕೆಲಸಕ್ಕೆ ಪೊಲೀಸ್ ಮತ್ತು ನ್ಯಾಯದಾನದ ವ್ಯವಸ್ಥೆ ಕೈಗೂಡಿಸಬೇಕು. ಹೀಗೆ ಎಲ್ಲಾ ಅಧಿಕಾರ ಕೇಂದ್ರಗಳು ಪರಸ್ಪರರನ್ನು ನಿಯಂತ್ರಿಸುವ ಸಹಜ ವ್ಯವಸ್ಥೆ ರೂಪುಗೊಳ್ಳಬೇಕು. ಹಾಗಿದ್ದಾಗ ಮಾತ್ರ ಸಂವಿಧಾನದ ಆಶಯಗಳು ಜಾರಿಯಾಗುತ್ತವೆ.

ಆದರೆ ಇವತ್ತು, ಈ ಎಲ್ಲಾ ಅಧಿಕಾರ ಕೇಂದ್ರಗಳು ಒಟ್ಟಾಗಿ ಜನಸಾಮಾನ್ಯರನ್ನು ಶೋಷಿಸುತ್ತಿವೆ. ರಾಜಕೀಯ ಕ್ಷೇತ್ರಕ್ಕೆ ಕಾರ್ಪೊರೇಟ್‌ಗಳ ಕಳ್ಳಹಣ ಮತ್ತು ಧಾರ್ಮಿಕ ನಂಬಿಕೆಗಳಿಂದ ಸಿಗುವ ಓಟುಗಳು ಬೆಂಬಲವಾಗಿ ನಿಂತುಕೊಂಡಿವೆ. ಧರ್ಮಗಳು ಕಾರ್ಪೊರೇಟ್‌ಗಳಿಂದ ಹಣ ಪಡೆದು ಅವುಗಳಂತೆಯೇ ವ್ಯಾಪಾರೀ ಕೇಂದ್ರಗಳಾಗಿವೆ. ಕಾರ್ಪೊರೇಟ್‌ಗಳ ಹಣ ಮತ್ತು ಸರ್ಕಾರಗಳ ರಾಜಕೀಯ ಅಧಿಕಾರದ ಬೆಂಬಲದಿಂದ ಧರ್ಮದ ಹೆಸರಿನ ಅನಾಗರಿಕ, ಅನೈತಿಕ ಮತ್ತು ಕಾನೂನುಬಾಹಿರ ಕೃತ್ಯಗಳು ಮುಚ್ಚಿಹೋಗುತ್ತಿವೆ. ಕಾರ್ಪೊರೇಟ್‌ಗಳ ಹಣಬಲಕ್ಕೆ ತಲೆಬಾಗಿ ಅವುಗಳ ಕಳ್ಳದಂಧೆಗಳಿಗೆ ಸರ್ಕಾರಗಳು ಕಾನೂನು ಮಾನ್ಯತೆ ಮತ್ತು ಧರ್ಮಗಳು ನೈತಿಕತೆಯ ಮುಖವಾಡ ಒದಗಿಸುತ್ತಿವೆ. ಹೆಚ್ಚಿನ ವಿದ್ಯಾವಂತರು ಒಂದಲ್ಲಾ ಒಂದು ರೀತಿಯಲ್ಲಿ ಕಾರ್ಪೊರೇಟ್‌ಗಳ ಋಣ ತೀರಿಸಬೇಕಾಗಿದೆ. ಇಂತಹ ಗದ್ದಲದ ವಾತಾವರಣದಲ್ಲಿ ಅಲ್ಲಲ್ಲಿ ಕೇಳಿಬರುವ ವಿವೇಕದ ಧ್ವನಿಗಳು ಹೆಚ್ಚು ಪ್ರಭಾವಕಾರಿಯಾಗಿ ಉಳಿದಿಲ್ಲ.

ಎಲ್ಲಾ ಬಗೆಯ ಅಧಿಕಾರ ಕೇಂದ್ರಗಳಿಂದ ಕೆಲಮಟ್ಟಿನ ಅಂತರ ಉಳಿಸಿಕೊಂಡಿದ್ದ ನ್ಯಾಯಾಂಗ ವ್ಯವಸ್ಥೆ ಕೂಡ ಈಗ ಜನರ ದೃಷ್ಟಿಯಲ್ಲಿ ಎಂದಿನಂತೆ ಉಳಿದಿಲ್ಲ. ಆಪಾದನೆಗಳ ಸತ್ಯಾಸತ್ಯತೆ ಏನೇ ಇದ್ದರೂ, ಇದು ನ್ಯಾಯದಾನದ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಗ್ಗಿಸುತ್ತಿದೆ. ಜನಸಾಮಾನ್ಯರ ಕೊನೆಯ ಆಶಾಕಿರಣ ಆಗಬೇಕಾಗಿದ್ದ ನ್ಯಾಯದಾನದ ವ್ಯವಸ್ಥೆ ಅಪಾರದರ್ಶಕವಾಗಿ ಗೋಚರಿಸತೊಡಗಿದಾಗ ಸಿನಿಕತನ ಆವರಿಸಿಕೊಳ್ಳುತ್ತದೆ. ಬದುಕು ದುಸ್ತರವಾದಂತೆ ಇಂತಹ ಸಿನಿಕತನ ಹತಾಶೆ ಮತ್ತು ಕೋಪವಾಗಿ ಬದಲಾಗುತ್ತದೆ. ಅಧಿಕಾರ ಕೇಂದ್ರಗಳು ಜನಸಾಮಾನ್ಯರಿಂದ ದೂರ ಹೋದಷ್ಟೂ ಜನರ ಸಿಟ್ಟು ಹೆಚ್ಚುತ್ತಲೇ ಹೋಗುತ್ತದೆ.

ಅಧಿಕಾರದಲ್ಲಿ ಇರುವವರು ಜನಮಾನಸದಲ್ಲಿ ಹೆಪ್ಪುಗಟ್ಟುತ್ತಿರುವ ಹತಾಶೆ ಮತ್ತು ಕೋಪಗಳನ್ನು ಆದಷ್ಟು ಬೇಗ ಗುರುತಿಸಬೇಕು. ಭಿನ್ನ ಭಿನ್ನ ಅಧಿಕಾರ ಕೇಂದ್ರಗಳು ಸ್ವಯಂನಿಯಂತ್ರಣದ ಜೊತೆಗೆ, ಪರಸ್ಪರರನ್ನು ನಿಯಂತ್ರಿಸುವ ಸ್ವಾಯತ್ತ ವ್ಯವಸ್ಥೆ ಜಾರಿಯಾಗಬೇಕು. ನ್ಯಾಯದಾನದ ವ್ಯವಸ್ಥೆಯಲ್ಲಿ ಜನ ಭರವಸೆ ಉಳಿಸಿಕೊಳ್ಳುವಂತಾಗಬೇಕು. ಇದು ಸಾಧ್ಯವಾಗದೆ ಹೋದಲ್ಲಿ ಅಪಾಯ ತಪ್ಪಿದ್ದಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಜ್ಞಾತರಿಗೆ ಪದ್ಮಶ್ರೀ ಗೌರವ

ಇಲ್ಲಿರುವ ಯಾವ ಹೆಸರೂ ಜನಪ್ರಿಯವಲ್ಲ. ಹಲವರ ಹೆಸರು ಅವರಿರುವ ಗ್ರಾಮ/ಪಟ್ಟಣದಿಂದ ಹೊರಗೆ ತಿಳಿದೇ ಇರಲಿಲ್ಲ. ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿದ್ದವರು. ತಮ್ಮ ಬದುಕು ತಮಗಾಗಿ ಅಷ್ಟೇ ಅಲ್ಲ ಎಂದು ಭಾವಿಸಿದ್ದ ಇವರು ತಮ್ಮ ಸುತ್ತಲಿನ ಸಮಾಜ, ಊರು, ಜನರ ಒಳಿತಿಗೆ ಸದ್ದಿಲ್ಲದೇ ದುಡಿದವರು. ದೇಶದ ವಿವಿಧ ರಾಜ್ಯಗಳಲ್ಲಿನ ಇಂಥ ಹಲವರಿಗೆ ಈ ಬಾರಿ ಪದ್ಮಶ್ರೀ ಸಂದಿದೆ. ತೆರೆಮರೆಯ ಸಾಧಕರು ವಿಭಾಗದಲ್ಲಿ ಇಂತಹ 45 ಜನರನ್ನು ಗುರುತಿಸಿ ಪ್ರಶಸ್ತಿ ಘೋಷಿಸಲಾಗಿದೆ. 'ಪದ್ಮಶ್ರೀ'ಗೆ ಪಾತ್ರರಾದ ಕೆಲವರ ಸಾಧನೆಯ ಪುಟ್ಟ ಪರಿಚಯ ಇಲ್ಲಿದೆ

ಡಾ.ಅರ್ಮಿಡಾ ಫರ್ನಾಂಡಿಸ್

ಕ್ಷೇತ್ರ: ವೈದ್ಯಕೀಯ | **ರಾಜ್ಯ:** ಮಹಾರಾಷ್ಟ್ರ

ಗೋವಾದಲ್ಲಿ ಬೇರುಗಳಿದ್ದರೂ, ಅರ್ಮಿಡಾ ಅವರು ಧಾರವಾಡದಲ್ಲಿ ಹುಟ್ಟಿ, ಹುಬ್ಬಳ್ಳಿಯಲ್ಲಿ ವೈದ್ಯಕೀಯ ಪದವಿ ಮತ್ತು ಮುಂಬೈನ ಕೆಇಎಂ ವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ವೈದ್ಯಕೀಯ ವೃತ್ತಿಯನ್ನು ಜನರ ಸೇವೆ ಎಂದು ಭಾವಿಸಿದ ಇವರು, ಅಪೌಷ್ಟಿಕತೆ ನಿವಾರಣೆ, ಶಿಕ್ಷಣ, ಆರೋಗ್ಯ ಸೇವೆಗಳಿಗಾಗಿ ಕೆಲವು ಶಿಶುತಜ್ಞರ ಜತೆಗೂಡಿ 'ಸ್ನೇಹಾ' ಎನ್ನುವ ಸ್ವಯಂಸೇವಾ ಸಂಸ್ಥೆ ಆರಂಭಿಸಿದರು.

ಮುಂಬೈನ ಲೋಕಮಾನ್ಯ ತಿಲಕ್ ಸಾರ್ವಜನಿಕ ಆಸ್ಪತ್ರೆಯಲ್ಲಿ ನವಜಾತ ಶಿಶುರೋಗ ವಿಭಾಗದ ಮುಖ್ಯಸ್ಥರಾಗಿದ್ದಾಗ ತಾಯಂದಿರ ಎದೆಹಾಲಿನ ಬ್ಯಾಂಕ್ ಆರಂಭಿಸಿದರು. ಪ್ರತಿವರ್ಷ, ಹಲವು ರೀತಿಯ ಕಾಯಿಲೆ, ದೌರ್ಬಲ್ಯಕ್ಕೆ ಗುರಿಯಾಗಿ, ಹುಟ್ಟುತ್ತಲೇ ತೀವ್ರ ನಿಗಾ ಘಟಕದಲ್ಲಿ ಜೀವಕ್ಕಾಗಿ ಸೆಣಸಾಡುವ ಸಾವಿರಾರು ಮಕ್ಕಳ ಜೀವ ಉಳಿಸಲು ಈ ಎದೆಹಾಲಿನ ಬ್ಯಾಂಕ್ ನೆರವಾಗುತ್ತಿದೆ. ತಳಸಮುದಾಯಗಳಲ್ಲಿ ಶಿಶು ಪೌಷ್ಟಿಕತೆ ಮತ್ತು ತಾಯಿ ಆರೋಗ್ಯ ವೃದ್ಧಿಸಲು ಮೂರು ದಶಕಗಳಿಂದ ದುಡಿಯುತ್ತಿದ್ದಾರೆ.

ಭಿಕ್ಲ್ಯಾ ಲಡ್ಕ್ಯಾ ಧಿಂಡಾ

ಕ್ಷೇತ್ರ: ಕಲೆ | **ರಾಜ್ಯ:** ಮಹಾರಾಷ್ಟ್ರ

ಮಹಾರಾಷ್ಟ್ರದ ವರ್ಲಿ ಬುಡಕಟ್ಟಿನ ಕೊನೆಯ ಕುಡಿಗಳಲ್ಲಿ ಒಬ್ಬರಾಗಿರುವ, ಕೊಂಕಣ ಪ್ರದೇಶದ ವಾಲ್ವಂಡಾ ಗ್ರಾಮದ 90 ವರ್ಷದ ಭಿಕ್ಲ್ಯಾ ಲಡ್ಕ್ಯಾ ಧಿಂಡಾ ಅವರು ತಾರಪಾ ಎಂಬ ವಿಶಿಷ್ಟ ವಾದ್ಯ ನುಡಿಸುವ ಕಲಾವಿದ. ವರ್ಲಿ ಬುಡಕಟ್ಟು ಸಮುದಾಯದ ಈ ವಿಶೇಷ ಸಂಗೀತ ಪರಂಪರೆಯನ್ನು ಉಳಿಸಿ ಬೆಳೆಸಲು ನೀಡಿದ ಕೊಡುಗೆಗಾಗಿ ಕೇಂದ್ರ ಸರ್ಕಾರ ಇವರಿಗೆ 'ಪದ್ಮ' ಗೌರವ ನೀಡಿದೆ. ತಾರಪಾ ಎನ್ನುವುದು ಸ್ಥಳೀಯವಾಗಿ ಲಭ್ಯವಿರುವ ಸೋರೆಕಾಯಿ, ಬಿದಿರು, ತಾಳೆ ಮರದ ಎಲೆ ಮತ್ತು ಜೇನುಗೂಡಿನ ಮೇಣದಿಂದ ತಯಾರಿಸುವ ವಾದ್ಯ. ಹಾವಾಡಿಗರ ಪುಂಗಿಯಂತೆ, ಶಹನಾಯಿಯಂತೆ, ಬ್ಯಾಗ್‌ಪೈಪರ್‌ನಂತೆ ನಾದದ ಅಲೆ ಹೊಮ್ಮಿಸುವ ಈ ವಾದ್ಯವನ್ನು ಸ್ವತಃ ತಯಾರಿಸುತ್ತಾರೆ. ಅದನ್ನು ನುಡಿಸುತ್ತಾರೆ. ಅದರಿಂದ ಬರುವ ಸಂಗೀತಕ್ಕೆ ತಕ್ಕಂತೆ ಹೆಜ್ಜೆ ಹಾಕುವುದನ್ನೂ ಹೇಳಿಕೊಡುತ್ತಾರೆ.

ಕೊಲ್ಲಕ್ಕಯಿಲ್ ದೇವಕಿ ಅಮ್ಮ

ಕ್ಷೇತ್ರ: ಸಮಾಜ ಸೇವೆ | **ರಾಜ್ಯ:** ಕೇರಳ

ಆಳಪ್ಪುಳ ಜಿಲ್ಲೆಯ ಮುತ್ತುಕುಲಂನಲ್ಲಿ ಐದು ಎಕರೆ ವಿಸ್ತೀರ್ಣದ ಅರಣ್ಯವಿದೆ. ಅದು ಮನುಷ್ಯ ನಿರ್ಮಿತ ಕಾಡು. 92 ವರ್ಷ ವಯಸ್ಸಿನ ದೇವಕಿ ಅಮ್ಮ ಅವರ ಕನಸು, ಶ್ರಮ ಮತ್ತು ಬದ್ಧತೆಯ ಫಲ ಅದು. ಇವರಿಗೆ ಮರಗಳೇ ಸರ್ವಸ್ವ. 44 ವರ್ಷಗಳಿಂದ ಅರಣ್ಯ ಬೆಳೆಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಇವರ ಗಂಡ ಗೋಪಾಲಕೃಷ್ಣ ಪಿಳ್ಳೈ ಶಾಲಾ ಮಾಸ್ತರರಾಗಿದ್ದರು. ಪ್ರವಾಸದಿಂದ ಹಿಂದಿರುಗುವಾಗ ಒಂದು ಬೀಜವನ್ನೋ, ಗಿಡವನ್ನೋ ಮನೆಗೆ ತರುವುದು ಅವರ ರೂಢಿಯಾಗಿತ್ತು. ಅವರ ಆ ಅಭ್ಯಾಸವು 'ತಪೋವನಂ'ಗೆ ಬೀಜಾಂಕುರ ಹಾಕಿತ್ತು. ಪ್ರಸ್ತುತ 'ತಪೋವನಂ'ನಲ್ಲಿ ಮೂರು ಸಾವಿರ ಮರಗಳಿವೆ. ಇಳಿವಯಸ್ಸಿನಲ್ಲಿಯೂ ಮರಗಳ ಆರೈಕೆಯಲ್ಲಿಯೇ ಸಾರ್ಥಕ್ಯ ಕಾಣುತ್ತಿದ್ದಾರೆ.

ಭಗವಾನ್‌ದಾಸ್ ರಾಯಕ್‌ವಾರ್

ಕ್ಷೇತ್ರ: ಕ್ರೀಡೆ | **ರಾಜ್ಯ:** ಮಧ್ಯಪ್ರದೇಶ

ಛಾತ್ರಸಾಲ್ ಬುಂದೇಲ್‌ಖಂಡ್ ಅಖಾಡ ಸ್ಥಾಪಿಸಿ, ಅದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜನಪದ ಸಮರ ಕಲೆಯನ್ನು ಕಲಿಸುವುದಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಸಾವಿರಕ್ಕೂ ಹೆಚ್ಚು ಮಂದಿ ಇವರಿಂದ ಸಮರ ಕಲೆ ತರಬೇತಿ ಪಡೆದಿದ್ದಾರೆ. ಅಳಿವಿನ ಹಾದಿಯಲ್ಲಿದ್ದ ಜನಪದ ಕಲೆಗಳನ್ನು, ದೊಣ್ಣೆ, ಕತ್ತಿ ವರಸೆ ಮುಂತಾದ ದೇಸೀ ಸಮರ ಕಲೆಗಳನ್ನು ಉಳಿಸಿ, ಬೆಳೆಸಿ, ಅವುಗಳನ್ನು ಹಲವು ದೇಶಗಳಿಗೂ ಹರಡಿದ ಕೀರ್ತಿ ಭಗವಾನ್ ದಾಸ್ ರಾಯಕ್‌ವಾರ್ ಅವರಿಗೆ ಸಲ್ಲುತ್ತದೆ. ಸೀಮಿತ ಸಂಪನ್ಮೂಲಗಳಿಂದಲೇ ವ್ಯಾಯಾಮಶಾಲೆ ಸ್ಥಾಪಿಸಿ, ಜನಪದ ಕಲೆ, ಸಂಸ್ಕೃತಿ, ಆಚರಣೆಗಳ ಉಳಿವಿಗೆ ದಶಕಗಳಿಂದಲೂ ಶ್ರಮಿಸುತ್ತಿದ್ದಾರೆ.

ಬುಧರೀ ತಾತೀ

ಕ್ಷೇತ್ರ: ಸಮಾಜ ಸೇವೆ | **ರಾಜ್ಯ:** ಛತ್ತೀಸಗಢ

ಹಿರಾನರ್ ಗ್ರಾಮದ ಬುಧರೀ ತಾತೀ ದಿಟ್ಟತನಕ್ಕೆ ಹೆಸರಾದ ಮಹಿಳೆ. ನಕ್ಸಲ್‌ಪೀಡಿತ ಬಸ್ತಾರ್ ಜಿಲ್ಲೆಯಲ್ಲಿ ಬಡತನ, ಹಿಂಸಾಚಾರ, ಶೋಷಣೆಯಿಂದ ಅಂಚಿನ ಸಮುದಾಯಗಳ ಮತ್ತು ಬುಡಕಟ್ಟು ಮಹಿಳೆಯರನ್ನು ಪಾರು ಮಾಡಿ, ಅವರಿಗೆ ನೆಲೆ ಕಲ್ಪಿಸಿದ ಶ್ರೇಯ ಬುಧರೀ ತಾತೀ ಅವರದ್ದು. ತನ್ನ 15ನೇ ವಯಸ್ಸಿನಲ್ಲಿಯೇ ಸಮಾಜ ಸೇವೆಗೆ ಇಳಿದವರು ಇವರು. ಶಾಲೆಯ ಮುಖವನ್ನೇ ಕಾಣದ ಮಕ್ಕಳನ್ನು ಎಳೆದೊಯ್ದು ಶಾಲೆಗೆ ಸೇರಿಸುವುದು, ಅಸಹಾಯಕ ವೃದ್ಧರನ್ನು ಅನಾಥಾಶ್ರಮಗಳಿಗೆ ಸೇರಿಸುವುದು ಸೇರಿದಂತೆ ಇವರ ಸಮಾಜ ಸೇವೆಗೆ ಹಲವು ಮುಖಗಳು. ನೊಂದ ಹಿರಿಯ ಜೀವಗಳ ಸೇವೆಗಾಗಿ ಹಲವು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಬಸ್ತಾರ್‌ನ ಜನ ಇವರನ್ನು ಪ್ರೀತಿಯಿಂದ 'ಬಡೀ ದೀದಿ' ಎನ್ನುತ್ತಾರೆ.

ನೂರುದ್ದೀನ್ ಅಹ್ಮದ್

ಕ್ಷೇತ್ರ: ಕಲೆ | **ರಾಜ್ಯ:** ಅಸ್ಸಾಂ

ಅಸ್ಸಾಂನ ಶ್ರೇಷ್ಠ ಶಿಲ್ಪಿ ಹಾಗೂ ಕಲಾ ನಿರ್ದೇಶಕ. ಕಲಾ ಕ್ಷೇತ್ರಕ್ಕೆ ನೂರುದ್ದೀನ್ ಅಹ್ಮದ್ ಅವರು ನೀಡಿದ ಕೊಡುಗೆಗಾಗಿ ಪದ್ಮಶ್ರೀ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಲಾಗಿದೆ. ಅಸ್ಸಾಂನ ಆಧುನಿಕ ರಂಗಕೌಶಲದ ನಿರ್ಮಾತೃ ಎಂಬ ವಿಶೇಷಣವೂ ಇವರಿಗಿದೆ. ದೇವರ ಕಲಾಕೃತಿಗಳಲ್ಲದೆ, ತಾಜ್‌ಮಹಲ್‌ನಂತಹ ಸ್ಮಾರಕಗಳು, ಟೈಟಾನಿಕ್ ಹಡಗು ದುರಂತ ಇತ್ಯಾದಿ ಘಟನೆಗಳನ್ನು ಬೃಹತ್ ಕಲಾಕೃತಿಗಳ ಮೂಲಕ ಜನರ ಮುಂದೆ ಇಟ್ಟು ಗಮನಸೆಳೆದವರು. ಇವರು ಬಿದಿರಿನಿಂದ ಮಾಡಿದ 100 ಅಡಿ ಎತ್ತರದ ದುರ್ಗೆಯ ಕಲಾಕೃತಿ ಗಿನ್ನೆಸ್ ವಿಶ್ವದಾಖಲೆ ನಿರ್ಮಿಸಿದೆ. ತಮ್ಮದೇ ಆದ ತರಬೇತಿ ಶಾಲೆಯನ್ನು ನಡೆಸುತ್ತಿರುವ ಅವರು ವಿದ್ಯಾರ್ಥಿಗಳಿಗೆ ತಮ್ಮ ಕಲಾ ಕೌಶಲವನ್ನು ಧಾರೆ ಎರೆಯುತ್ತಿದ್ದಾರೆ.

ಪೋಖಿಲಾ ಲೇಕ್‌ತೇಪೀ

ಕ್ಷೇತ್ರ: ಕಲೆ | **ರಾಜ್ಯ:** ಅಸ್ಸಾಂ

ಅಸ್ಸಾಂನ ಕರ್ಬಿ ಆಂಗ್ಲಾಂಗ್ ಜಿಲ್ಲೆಯ ಕರ್ಬಿ ಬುಡಕಟ್ಟು ಸಾಂಪ್ರದಾಯಿಕ ಸಂಗೀತದ ಸಾಧಕಿ ಪೋಖಿಲಾ ಲೇಕ್‌ತೇಪೀ. ಜನಪದೀಯ ಅಂಶಗಳನ್ನು ಒಳಗೊಂಡ ಹಾಡುಗಳನ್ನು ಅತ್ಯಂತ ಸುಮಧುರವಾಗಿ ಹಾಡುವುದಕ್ಕೆ ಇವರು ಹೆಸರುವಾಸಿ. 'ಕ್ವೀನ್ ಆಫ್ ಮೆಲೋಡಿ' ಎಂದೇ ಬಿರುದು ಪಡೆದಿರುವ ಇವರು 300ಕ್ಕೂ ಹೆಚ್ಚು ಹಾಡು ಹಾಡಿದ್ದಾರೆ.

ಪೋಖಿಲಾ ಅವರಿಗೆ ಗಾಯನ ಪೋಷಕರ ಬಳುವಳಿ. ಹಳ್ಳಿಯ ನಾಟಕಗಳಲ್ಲಿ ವಾದ್ಯ ನುಡಿಸುತ್ತಿದ್ದ ತಂದೆಯೇ ಇವರ ಮೊದಲ ಗುರು. ಶಾಲೆಯ ಸ್ಪರ್ಧೆಗಳಲ್ಲಿ ಹಾಡುತ್ತಲೇ ತಮ್ಮ ಶಾರೀರದಿಂದ ಜನಪ್ರಿಯತೆ ಗಳಿಸಿದರು. ದಿಫು ಕರ್ಬಿ ಕ್ಲಬ್‌ನಲ್ಲಿ ಗಾಯನ ಸ್ಪರ್ಧೆಯಲ್ಲಿ ಮೊದಲ ಪ್ರಶಸ್ತಿ ಗೆದ್ದಿದ್ದು ಇವರ ಆತ್ಮವಿಶ್ವಾಸವನ್ನು ವೃದ್ಧಿಸಿತು. ನಂತರ ತಾವೇ ಹಾಡುಗಳನ್ನೂ ಬರೆಯತೊಡಗಿದರು. ಕರ್ಬಿ ಸಂಗೀತಕ್ಕೆ ಆಧುನಿಕತೆಯ ಸ್ಪರ್ಶ ನೀಡಿ, ಹೊಸ ಪ್ರಕಾರವನ್ನೇ ಹುಟ್ಟುಹಾಕಿದರು. ಇವರ ಹಾಡುಗಳ ಹಲವು ಧ್ವನಿಸುರುಳಿಗಳು ಬಿಡುಗಡೆಯಾಗಿವೆ. ಜುಬಿನ್ ಗರ್ಗ್ ಅವರಂಥ ಹಲವರೊಂದಿಗೆ ಇವರು ಹಾಡಿದ್ದಾರೆ.

ಇಂದರ್‌ಜಿತ್ ಸಿಂಗ್ ಸಿಧು

ಕ್ಷೇತ್ರ: ಸಮಾಜ ಸೇವೆ | **ರಾಜ್ಯ:** ಚಂಡೀಗಢ

88 ವರ್ಷದ ಇಂದರ್‌ಜಿತ್ ಸಿಂಗ್ ಸಿಧು ಅವರು ಪಂಜಾಬ್‌ನ ನಿವೃತ್ತ ಐಪಿಎಸ್ ಅಧಿಕಾರಿ. 10 ವರ್ಷಗಳಿಂದ ತಮ್ಮ ನೆರೆಹೊರೆಯ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿದ್ದಾರೆ. ಚಂಡೀಗಢದ ಸೆಕ್ಟರ್ 49ರಲ್ಲಿರುವ ತಮ್ಮ ಮನೆಯ ಬಳಿಯ ರಸ್ತೆಯಲ್ಲಿ ಬಿದ್ದಿದ್ದ ಕಸವನ್ನು ಹೆಕ್ಕಿ, ರಸ್ತೆಯನ್ನು ಅವರು ಸ್ವಚ್ಛಗೊಳಿಸುತ್ತಿರುವ ವಿಡಿಯೊ ಕಳೆದ ವರ್ಷ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಆ ಬಳಿಕ ಇವರು ಮಾಡುತ್ತಿರುವ ಕೆಲಸ ಹೊರಜಗತ್ತಿಗೆ ತಿಳಿಯಿತು. ಮೆಚ್ಚುಗೆಯೂ ವ್ಯಕ್ತವಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಬಗ್ಗೆ ಆದ ಸುದ್ದಿಯನ್ನು ನೋಡಿ ಸಿಧು ಅವರು ಕೊಂಚ ಮುಜುಗರ ಪಟ್ಟುಕೊಂಡರೂ ತಮ್ಮ ಸ್ವಚ್ಛತಾ ಅಭಿಯಾನವನ್ನು ಮುಂದುವರಿಸಿದ್ದಾರೆ.

ಹೈಲಿ ವಾರ್

ಕ್ಷೇತ್ರ: ಸಮಾಜ ಸೇವೆ | **ರಾಜ್ಯ:** ಮೇಘಾಲಯ

ಮೇಘಾಲಯದ ಪ್ರಸಿದ್ಧ ಬೇರುಗಳ ಸೇತುವೆಗಳನ್ನು ಸಂರಕ್ಷಿಸಲು ಶ್ರಮಿಸುತ್ತಿರುವ ಹೈಲಿ ವಾರ್ ಅವರ ನಿಸ್ವಾರ್ಥ ಸೇವೆಗಾಗಿ ಪದ್ಮಶ್ರೀ ಪ್ರಶಸ್ತಿ ಒಲಿದಿದೆ. ಸೊಹ್ರಾ ಸಮೀಪದ ಸಿಯೆಜ್ ಗ್ರಾಮದವರಾದ ಹೈಲಿ ವಾರ್ ಅವರು ಮೇಘಾಲಯದಲ್ಲಿರುವ ನೈಸರ್ಗಿಕ ಬೇರುಗಳ ಸೇತುವೆಗಳನ್ನು ನಿರ್ಮಿಸುವ ಮತ್ತು ಅವುಗಳನ್ನು ಸಂರಕ್ಷಿಸುವ ಕೆಲಸವನ್ನು ದಶಕಗಳಿಂದ ಮಾಡುತ್ತಿದ್ದಾರೆ. 10 ವರ್ಷದ ಬಾಲಕನಾಗಿದ್ದಾಗಿನಿಂದ ಹೈಲಿ ಅವರು ಬೇರುಗಳನ್ನು ನೇಯ್ದು, ಅವುಗಳಿಂದ ಸೇತುವೆಯನ್ನು ನಿರ್ಮಿಸುವ ಕೆಲಸ ಮಾಡುತ್ತಿದ್ದಾರೆ. ಈ ಸೇತುವೆಗಳಿರುವ ಸ್ಥಳಗಳು ಪ್ರಸಿದ್ಧವಾಗಿದ್ದು, ಪ್ರವಾಸಿಗರನ್ನು ಭಾರಿ ಸಂಖ್ಯೆಯಲ್ಲಿ ಸೆಳೆಯುತ್ತಿವೆ. ಮೇಘಾಲಯದ ಪರಿಸರ, ಸಂಪ್ರದಾಯ, ಪರಂಪರೆಯ ಬಗ್ಗೆ ಅಪಾರ ಜ್ಞಾನವನ್ನೂ ಹೊಂದಿದ್ದಾರೆ.

ಬ್ರಿಜ್ ಲಾಲ್ ಭಟ್

ಕ್ಷೇತ್ರ: ಸಮಾಜ ಸೇವೆ
ರಾಜ್ಯ: ಜಮ್ಮು ಮತ್ತು ಕಾಶ್ಮೀರ

ಕಾಶ್ಮೀರಿ ಪಂಡಿತ ಸಮುದಾಯಕ್ಕೆ ಸೇರಿದವರಾದ ಬ್ರಿಜ್ ಲಾಲ್ ಭಟ್ ನಿವೃತ್ತ ಸರ್ಕಾರಿ ಅಧಿಕಾರಿ. ನಿವೃತ್ತಿಯ ಬಳಿಕ ಸಮಾಜಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಅನಂತನಾಗ್ ಜಿಲ್ಲೆಯಲ್ಲಿರುವ ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಮತ್ತು ವಿವೇಕಾನಂದ ಕೇಂದ್ರದ ಮೂಲಕ ಅವರು ಸಾಮಾಜಿಕ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ಕಾಶ್ಮೀರದಿಂದ ವಲಸೆ ಹೋಗಿರುವ ಪಂಡಿತ ಸಮುದಾಯದವರನ್ನು ವಾಪಸ್ ರಾಜ್ಯಕ್ಕೆ ಕರೆತರುವ ನಿಟ್ಟಿನಲ್ಲೂ ಇವರು ಕೆಲಸ ಮಾಡುತ್ತಿದ್ದಾರೆ.

ಜೋಗೇಶ್ ದೇವುರಿ

ಕ್ಷೇತ್ರ: ಕೃಷಿ | **ರಾಜ್ಯ:** ಅಸ್ಸಾಂ

ಕೃಷಿ ಕ್ಷೇತ್ರ ಅದರಲ್ಲೂ ವಿಶೇಷವಾಗಿ ರೇಷ್ಮೆ ಕೃಷಿಯಲ್ಲಿ ಹಲವು ವಿನೂತನ ಪ್ರಯೋಗಗಳನ್ನು ಮಾಡಿ ಗಮನ ಸೆಳೆದವರು ಜೋಗೇಶ್ ದೇವುರಿ. ಎರಿ ಎಂಬ ಸ್ವದೇಶಿ ರೇಷ್ಮೆ ತಳಿ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದವರು. ಬೊಡೋಲ್ಯಾಂಡ್ ಟೆರಿಟೋರಿಯಲ್ ಕೌನ್ಸಿಲ್‌ನ ರೇಷ್ಮೆ ಘಟಕದ ನಿರ್ದೇಶಕರಾಗಿರುವ ಜೋಗೇಶ್ ಅವರು ಸಾಂಪ್ರದಾಯಿಕ ರೇಷ್ಮೆ ಹುಳು ಸಾಕಣೆಯನ್ನು ಆಧುನೀಕರಣಗೊಳಿಸಿದ್ದಾರೆ. ರೇಷ್ಮೆ ಪಾರ್ಕ್‌ಗಳನ್ನು ನಿರ್ಮಿಸಿ ಅಸ್ಸಾಂನ ಗ್ರಾಮಗಳ ಸಾವಿರಾರು ರೈತರ ಮತ್ತು ಬುಡಕಟ್ಟು ಸಮುದಾಯದವರ ಬದುಕಿಗೆ ದಾರಿ ಮಾಡಿಕೊಟ್ಟವರು.

ಸಿಮಾಂಚಲ ಪಾತ್ರೊ

ಕ್ಷೇತ್ರ: ಕಲೆ | **ರಾಜ್ಯ:** ಒಡಿಶಾ

99 ವರ್ಷದ ಸಿಮಾಂಚಲ ಪಾತ್ರೊ ಒಡಿಶಾದ ಹಿರಿಯ ಜನಪದ ಕಲಾವಿದ. ಅವರು ತಮ್ಮ ಇಡೀ ಜೀವನವನ್ನು 'ಪ್ರಹ್ಲಾದ ನಾಟಕ'ಕ್ಕಾಗಿ ಮುಡಿಪಾಗಿಟ್ಟವರು. ವಿಷ್ಣುವಿನ ನರಸಿಂಹ ಅವತಾರವನ್ನು ಆಧಾರವಾಗಿಟ್ಟುಕೊಂಡಿರುವ ಈ ನಾಟಕವು 200 ಹಾಡುಗಳನ್ನು ಹೊಂದಿದೆ. ಇವುಗಳು ಒಡಿಶಾ ಸಂಗೀತದಲ್ಲಿರುವ 35 ರಾಗಗಳನ್ನು ಆಧಾರಿತವಾಗಿವೆ. ತುಂಬಾ ನಾಟಕೀಯವಾದ ಮತ್ತು ಸಂಗೀತ, ನೃತ್ಯಗಳು, ಹಾಡುಗಳು, ಭಾವುಕ ಸಂಭಾಷಣೆ ಮತ್ತು ಸಾಹಸಗಳನ್ನೊಳಗೊಂಡ ಈ ನಾಟಕ ನೋಡುಗರ ಕಣ್ಮನ ಸೆಳೆಯುತ್ತದೆ. ಸಿಮಾಂಚಲ ಅವರು ತಮ್ಮ 12ನೇ ವಯಸ್ಸಿನಿಂದಲೇ ಜನಪದ ಕಲೆಯಲ್ಲಿ ತೊಡಗಿಕೊಂಡಿದ್ದು, ಪ್ರಹ್ಲಾದ ನಾಟಕಕ್ಕಾಗಿ ತಮ್ಮ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನೇ ಮಾರಾಟ ಮಾಡಿದ್ದರು.

ಕೋಟ ಹಂದಟ್ಟಿನ ಹಂದೆಗೆ ಒಲಿದ ಗೌರವ

ಬ್ರಹ್ಮಾವರ (ಉಡುಪಿ): ಕೋಟ ಹಂದಟ್ಟಿನ ಹಂದೆ ಮನೆತನದ 99 ವರ್ಷ ವಯಸ್ಸಿನ ವೈದ್ಯ ಡಾ.ಎಚ್.ವಿ.ಹಂದೆ ಅವರಿಗೆ ವೈದ್ಯಕೀಯ ಕ್ಷೇತ್ರದ ಸಾಧನೆಗಾಗಿ 2026ರ ಪದ್ಮಶ್ರೀ ಪುರಸ್ಕಾರ ಲಭಿಸಿದೆ. ಇವರು ತಮಿಳುನಾಡಿನಲ್ಲಿ ಎಂ.ಜಿ.ಆರ್ ಅವರು ಮುಖ್ಯಮಂತ್ರಿ ಆಗಿದ್ದಾಗ ಆರೋಗ್ಯ ಸಚಿವರಾಗಿದ್ದರು. ಮಂಗಳೂರು, ಚೆನ್ನೈ, ಕೊಯಮತ್ತೂರಿನಲ್ಲಿ ಉನ್ನತ ವ್ಯಾಸಂಗ ಮುಗಿಸಿದ ಅವರು ಚೆನ್ನೈಯಲ್ಲಿ ಹಂದೆ ಆಸ್ಪತ್ರೆ ಸ್ಥಾಪಿಸಿದರು. ರಾಜಕೀಯದಲ್ಲಿ ಕುಶಲತೆ ಸಾಧಿಸಿದ ಅವರು ಮುಖ್ಯಮಂತ್ರಿ ಎಂ.ಜಿ.ಆರ್. ಅವರಿಗೆ ಅನಾರೋಗ್ಯ ಆದ ಸಂದರ್ಭದಲ್ಲಿ ಸರ್ಕಾರ ಮುನ್ನಡೆಸಿದವರು. 'ಕಂಬ ರಾಮಾಯಣ'ವನ್ನು ಇಂಗ್ಲಿಷ್, ತಮಿಳಿಗೆ ಭಾಷಾಂತರಿಸಿದ ಹಂದೆ ಅವರು ಸಾಹಿತ್ಯ ವಲಯದಲ್ಲಿಯೂ ಗುರುತಿಸಿಕೊಂಡವರು.

ಪದಬಂಧ 6297

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರು ಧುಮುಕುವ ಸ್ಥಳ (4)
3.ಸಂದರ್ಭ ಅಥವಾ ಘಟನೆ (3)
5.ಅದೇ ತಾನೆ ಮದುವೆಯಾದ ಗಂಡ ಹೆಂಡಿರು (5)
7.ಈ ರೀತಿ ರೇಗು (3)
9.ಕತ್ತು ಕೊನೆಗಿಟ್ಟು ತೋರಿದ ಬಲ (3)
11.ಗುರುವಿನ ನಖ (3)
13.ಕಳೆಯುವ ಲೆಕ್ಕವಿದು (5)
15.ಹೆಂಗಸು ಇಲ್ಲಿದ್ದಾಳೆ (3)
16.ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ

1.ವನಿತೆ ಎಳೆದ ತೆರೆ (4)
2.ಒಂದೇ ವಿಷಯದಲ್ಲಿ ಮಗ್ನನಾಗಿರುವವನು (3)
4. ಮನುಷ್ಯನ ದೇಹದ ಮೇಲಿರುವ ಮಚ್ಚೆ (3)
6.ಸೈನ್ಯ ಸಮೇತ ಯುದ್ಧಕ್ಕೆ ಹೋಗು (3)
8.ನೆತ್ತರು ಇಲ್ಲಿದೆ (2)
9.ಉಚ್ಚ ದನಿಯನ್ನು ಹೀಗೂ ಹೇಳುವರು (3)
10.ಋಣ ಅಥವಾ ದಾಕ್ಷಿಣ್ಯ (2)
12.ಆಸ್ಪತ್ರೆಯನ್ನು ಹೀಗೂ ಹೇಳುವರು (4)
13.ಈತ ಕೆಟ್ಟ ಚಟವುಳ್ಳವನು (3)
14.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)



6296ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾಪೂರ 3.ಅನುಭವಿ
5.ಸದರ 6.ಜರಾಯು
8.ಸುಸಂಗ 10.ಆಸಕ್ತಿ
11.ವಾಯಸ 13.ಅಳುಕು
15.ಯಥಾಸ್ಥಿತಿ 16.ರಣಭೇರಿ

ಮೇಲಿಂದ ಕೆಳಕ್ಕೆ:
1.ಮಹಾರಾಜ 2.ರಭಸ
3.ಅಸುರ 4.ವಿನಿಯೋಗ
7.ರಾಜಸ 9.ಸಂದಾಯ
10.ಆಯವ್ಯಯ 12.ಸದಾಚಾರಿ
13.ಅದಿತಿ 14.ಕುಟೀರ

ಸುಡೊಕು 6681

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		3	9	6	
		8						5
4		3	5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

6680 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಮನುಷ್ಯ ಪ್ರೀತಿಯ ವಿಜ್ಞಾನಿ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಮರಿಯಾ ಸಾಲೋಮಿಯಾ ಸ್ಕ್ಲೋಡೊವಸ್ಕಾ ಕ್ಯೂರಿ ಎಂದರೆ ಗೊತ್ತಾಗದಿರಬಹುದು. ಆದರೆ ಮೇರಿ ಕ್ಯೂರಿ ಎಂಬ ಹೆಸರು ಜಗತ್ತಿಗೆ ಚಿರಪರಿಚಿತ. ಮನುಕುಲದ ಏಳಿಗೆಗೆ ತಮ್ಮನ್ನೇ ತಾವು ಸಮರ್ಪಿಸಿಕೊಂಡ ಮಹಾನ್ ವಿಜ್ಞಾನಿ ಇವರು. ಅವರ ವೈಜ್ಞಾನಿಕ ಸಂಶೋಧನೆಯ ಆರಂಭ ಬಹಳ ಆರಾಮದಾಯಕವೇನೂ ಆಗಿರಲಿಲ್ಲ. ಪೋಲೆಂಡ್‌ನ ಬಡ ಕುಟುಂಬದಲ್ಲಿ ಹುಟ್ಟಿದ ಮೇರಿ ಕೈಲಿ ಪುಡಿಗಾಸಿಟ್ಟುಕೊಂಡು ಪ್ಯಾರಿಸ್ಸಿಗೆ ಓದಲೆಂದು ಬಂದವರು. ತಣ್ಣಗಿನ ಕೊರೆವ ಚಳಿಯಲ್ಲಿ, ಅರ್ಧಂಬರ್ಧ ಹೊಟ್ಟೆಗೆ ತಿಂದು ಹಣ ಉಳಿಸಲು ಹೆಣಗಾಡುತ್ತ ಸಂಶೋಧನೆ ನಡೆಸಿದವರು. ಆದರೆ ಅರೆಹೊಟ್ಟೆಯನ್ನು ಮೇರಿ ದೊಡ್ಡ ವಿಷಯವೆಂದು ಅಂದುಕೊಳ್ಳಲೇ ಇಲ್ಲ. ತಮ್ಮ ಜ್ಞಾನದ ಹಸಿವನ್ನು ತಣಿಸಿಕೊಳ್ಳುವತ್ತಲೇ ಅವರ ಗಮನ. ವಿಜ್ಞಾನವು ಜನಪ್ರಿಯತೆ ಗಳಿಸಲು ಇರುವ ಮಾಧ್ಯಮವಲ್ಲ, ಬದಲಿಗೆ ಮನುಕುಲಕ್ಕೆ ಸೇವೆ ಸಲ್ಲಿಸಲು ಇರುವ ಅವಕಾಶ ಎಂದು ಅಂದುಕೊಂಡಿದ್ದರು ಮೇರಿ.

ಗಂಡ ಪಿಯರಿ ಕ್ಯೂರಿಯೊಂದಿಗೆ ಪೊಲೋನಿಯಂ ಮತ್ತು ರೇಡಿಯಂ ಎಂಬ ಎರಡು ಧಾತುಗಳನ್ನು ಕಂಡುಹಿಡಿದರು ಮೇರಿ. 1903ರಲ್ಲಿ ಭೌತವಿಜ್ಞಾನದಲ್ಲಿ ಮೇರಿ, ಪಿಯರಿ ಮತ್ತು ಹೆನ್ರಿ ಬೆಕೆರೆಲ್‌ಗೆ ನೊಬೆಲ್ ಬಹುಮಾನ ಬಂದಿತು. 1906ರಲ್ಲಿ ರಸ್ತೆ ಅಪಘಾತದಲ್ಲಿ ಪಿಯರಿ ಕ್ಯೂರಿ ಮೃತಪಟ್ಟರು. ಮೇರಿಯ ಜಗತ್ತು ತಲೆಕೆಳಗಾಯಿತು. ಜತೆಯಾಗಿ ಸದಾ ಸಂಶೋಧನೆಯಲ್ಲಿ ತೊಡಗಿದ್ದ ಮೇರಿ ಮತ್ತು ಪಿಯರಿ ಹೊರಗಿನ ಜಗತ್ತನ್ನೇ ಮರೆತಿದ್ದರು. ಆದರೆ ಒಡೆದು ಚೂರಾಗುತ್ತಿದ್ದ ಹೃದಯವನ್ನು ಜೋಡಿಸಿಕೊಂಡು ಮತ್ತೆ ಪ್ರಯೋಗಾಲಯಕ್ಕೆ ಬಂದರು ಮೇರಿ. ಹಗಲೂ ರಾತ್ರಿ ಸಂಶೋಧನೆ ಮಾಡಿದರು. ಪ್ಯಾರಿಸ್‌ನ ಸೊರ್ಬೋನ್ ವಿಶ್ವವಿದ್ಯಾಲಯದಲ್ಲಿ ಪಾಠ ಮಾಡಿದ ಮೊದಲ ಮಹಿಳೆ ಎನಿಸಿಕೊಂಡರು. ಸಂಶೋಧನೆ ಮುಂದುವರಿಸಿ 1911ರಲ್ಲಿ ರಸಾಯನವಿಜ್ಞಾನದಲ್ಲಿ ನೊಬೆಲ್ ಪಡೆದರು ಭೌತವಿಜ್ಞಾನ ಮತ್ತು ರಸಾಯನವಿಜ್ಞಾನ ಎರಡೂ ವಿಭಾಗಗಳಲ್ಲಿ ನೊಬೆಲ್ ಪಡೆದ ಮೊದಲ ಹಾಗೂ ಏಕೈಕ ವಿಜ್ಞಾನಿಯಾದರು.

ವಿಜ್ಞಾನವಿರುವುದು ಜನರಿಗಾಗಿ ಎಂಬುದನ್ನು ಬಲವಾಗಿ ನಂಬಿದ್ದ ಮೇರಿ ಕ್ಯೂರಿ ಆ ನಿಟ್ಟಿನಲ್ಲಿ ಸದಾ ಯೋಚಿಸುತ್ತಿದ್ದರು. ಮೊದಲನೇ ವಿಶ್ವಯುದ್ಧದ ಸಂದರ್ಭದಲ್ಲಿ ಯುದ್ಧರಂಗಕ್ಕೆ ಎಕ್ಸ್‌ರೇ ವ್ಯವಸ್ಥೆಯೊಂದಿಗೆ ತೆರಳಿ ಗಾಯಗೊಂಡ ಸೈನಿಕರ ಶುಶ್ರೂಷೆಗೆ ವೈದ್ಯರೊಂದಿಗೆ ಕೈಜೋಡಿಸಿದರು. ಪುಟ್ಟ ಕ್ಯೂರೀಸ್ ಎಂದು ಕರೆಯಲ್ಪಡುವ ಈ ಮೊಬೈಲ್ ಎಕ್ಸ್‌ರೇ ಯೂನಿಟ್, ಒಂದು ಎಕ್ಸ್ ರೇ ಯಂತ್ರ, ಸಣ್ಣ ಡಾರ್ಕ್ ರೂಮ್ ಮತ್ತು ಡೈನಮೋ ಹೊಂದಿತ್ತು. ಈ ಯೂನಿಟ್ ಸಹಾಯದಿಂದ ಆಸ್ಪತ್ರೆಗೆ ಹೋಗಲಾಗದ ಗಾಯಗೊಂಡ ಸೈನಿಕರು ಇದ್ದಲ್ಲೇ ಹೋಗಿ ಅವರ ಗಾಯಗಳ ಬಗ್ಗೆ ಸ್ಪಷ್ಟ ಚಿತ್ರಣ ದೊರಕಿಸಿಕೊಟ್ಟು ಅವರ ಚಿಕಿತ್ಸೆಗೆ ಸಹಾಯ ಮಾಡಬಹುದಿತ್ತು.

ಯಾವುದೇ ಸಂಶೋಧನೆಗೂ ಪೇಟೆಂಟ್ ಮಾಡದ ಮೇರಿ ಕೋಟಿಗಟ್ಟಲೆ ಹಣ ಮಾಡುವ ಅವಕಾಶವನ್ನು ನಿರ್ಲಿಪ್ತರಾಗಿ ತ್ಯಜಿಸಿದ ಮಹಾನ್ ವ್ಯಕ್ತಿ. ವಿಕಿರಣಗಳ ನಡುವೆಯೇ ದೀರ್ಘಕಾಲ ಕೆಲಸ ಮಾಡಿದ್ದರಿಂದ ಆರೋಗ್ಯ ಹದಗೆಟ್ಟಿತ್ತು. ಆ ಬಗ್ಗೆ ಯಾವತ್ತೂ ಪಶ್ಚಾತ್ತಾಪ ಪಡದ ಮೇರಿ 1934ರಲ್ಲಿ ಮೃತಪಟ್ಟರು. ತಮ್ಮ ಕೆಲಸದಿಂದ ಜಗತ್ತಿಗೆ ಉಪಯೋಗವಾಯಿತೆನ್ನುವುದೊಂದೇ ಅವರಿಗೆ ಮುಖ್ಯವಾಗಿತ್ತು. ಜನಪ್ರಿಯತೆ, ಶ್ರೀಮಂತಿಕೆಗಿಂತ ಅಪ್ಪಟ ಮನುಷ್ಯ ಪ್ರೀತಿಯ ಕೆಲಸ ಜಗತ್ತಿನಲ್ಲಿ ಶಾಶ್ವತವಾಗಿ ಇರುತ್ತದೆಂದು ತೋರಿಸಿದರು. ಸಂಕಟ, ನೋವು ಏನೇ ಇದ್ದರೂ ಒಂದು ಉದಾತ್ತ ಗುರಿಯತ್ತ ಸಾಗುವ ಛಲದಿಂದ ಯಾವ ಸಾಧನೆ ಬೇಕಾದರೂ ಸಾಧ್ಯವೆಂಬ ಸಂದೇಶವನ್ನೂ ಕೊಟ್ಟರು. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಜನವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ನವಮಿ ಗಂ. 19-06 ನಕ್ಷತ್ರ: ಭರಣಿ ಗಂ. 11-09 ಯೋಗ: ಶುಕ್ಲ (ಶುಕ್ರ) ಗಂ. 27-13 ಕರಣ: ಬಾಲವ ಗಂ. 8-15 ಮಕರ ಮಾಸದ 13 ನೇ ದಿನ. ಮಳೆ ನಕ್ಷತ್ರ : ಶ್ರವಣ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 , ಸೂರ್ಯೋದಯ : 07-01 ಸೂರ್ಯಾಸ್ತ : 06-25, ಮುಸ್ಲಿಂ ದಿನಾಂಕ : 7 ಶಬನ್ ,ಅದೃಷ್ಟ ಸಂಖ್ಯೆ : 8, 12

ಮೇಷ: ಸುಗಂಧ ದ್ರವ್ಯಗಳ ಉತ್ಪಾದಕ ಕೈಗಾರಿಕೆ ಮತ್ತು ಮಾರಾಟದವರಿಗೆ ಉತ್ತಮ ವ್ಯವಹಾರಗಳು ಕಂಡುಬರುತ್ತವೆ. ಭವಿಷ್ಯದ ಯೋಜನೆಯಲ್ಲಿ ಪಾಲುದಾರಿಕೆಯು ಹಂತ ಹಂತವಾಗಿ ಲಾಭ ತರಲಿದೆ.

ವೃಷಭ: ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆಯನ್ನು ನಡೆಸಿ ನಂತರದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ಷೇರು ಅದೃಷ್ಟದಾಯಕವಾಗಿರುತ್ತದೆ.

ಮಿಥುನ: ಸಂಘ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಸ್ವಯಂ ಪ್ರೇರಿತರಾಗಿ ಅಧಿಕ ಕೆಲಸ ಅಥವಾ ಹಣಕಾಸಿನ ಜವಾಬ್ದಾರಿ ತೆಗೆದುಕೊಳ್ಳುವುದು ಸಮಸ್ಯೆಯನ್ನು ಎಳೆದುಕೊಂಡಂತಾಗುತ್ತದೆ. ದಿನಸಿ ವರ್ತಕರಿಗೆ ಲಾಭದಾಯಕ ದಿನ.

ಕರ್ಕಾಟಕ: ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟರಿಗೆ ಲಾಭದ ನಿರೀಕ್ಷೆಯಲ್ಲಿ ಅಲ್ಪಮಟ್ಟದ ವ್ಯತ್ಯಾಸಗಳಾಗುವುದು. ಸಂತಾನ ಅಪೇಕ್ಷಿಗಳಿಗೆ ದೇವತಾನುಗ್ರಹದಿಂದ ಫಲದಾಯಕವಾಗಲಿದೆ.

ಸಿಂಹ: ಜೀವನದಲ್ಲಿ ಮಹತ್ತರ ಬದಲಾವಣೆಯಾಗುವ ಸೂಚನೆಗಳು ಗಮನಕ್ಕೆ ಬರಲಿವೆ. ಬಹಳ ದಿನಗಳ ನಂತರ ವ್ಯವಹಾರ ತೃಪ್ತಿಕರವಾಗಿರುವುದು. ಅವಿವಾಹಿತರಿಗೆ ವಿವಾಹ ಯೋಗವಿದೆ.

ಕನ್ಯಾ: ವಾಣಿಜ್ಯೋದ್ಯಮಿಗಳಿಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಬಿಕ್ಕಟ್ಟಿನ ಪರಿಸ್ಥಿತಿ ಎದುರಾಗಿ ವಿಶೇಷ ಜೀವನಾನುಭವ ಉಂಟಾಗುವುದು. ಮನೆಯಲ್ಲಿ ಸಂತೋಷದಿಂದಿರಲು ಹೊಂದಾಣಿಕೆಯೇ ಮೂಲ ಮಂತ್ರವಾಗಿರಬೇಕು.

ತುಲಾ: ನಾಜೂಕಿನ ಮಾತುಗಳು ಅಥವಾ ಹಿತವಚನಗಳು ಸಹೋದ್ಯೋಗಿಯನ್ನು ಧೈರ್ಯದಿಂದ ಇರುವಂತೆ ಮಾಡಲಿವೆ. ಬರಲಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ವಿಚಾರದಲ್ಲಿ ವಿಫಲರಾಗುವಿರಿ.

ವೃಶ್ಚಿಕ: ಬ್ಯಾಂಕ್ ನೌಕರರಿಗೆ ಕೆಲಸಗಳಲ್ಲಿ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನೆಮ್ಮದಿ ಸಿಗುವುದು. ಸಣ್ಣ ವಿಚಾರಗಳನ್ನು ದೊಡ್ಡದಾಗಿ ಪರಿಗಣಿಸಿ ಗಂಭೀರ ನಿರ್ಧಾರ ತೆಗೆದುಕೊಳ್ಳಬೇಡಿ. ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ ಹೆಚ್ಚುವುದು.

ಧನು: ಬಂಧು ಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳುವ ಅವಕಾಶ ಸಿಗಲಿದೆ. ಪಾತ್ರೆ ಮಾರಾಟ ಮಾಡುವವರಿಗೆ, ತಾಮ್ರ, ಹಿತ್ತಾಳೆಯ ದೇವರ ಪೂಜಾ ಪಾತ್ರೆಯ ಮಾರಾಟಗಾರರಿಗೆ ಅಧಿಕ ಲಾಭವಿರುವುದು.

ಮಕರ: ಹಾರ್ಡ್‌ವೇರ್ ಅಂಗಡಿಯವರಿಗೆ ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ಸತ್ಫಲಗಳನ್ನು ಅನುಭವಿಸಲು ಶ್ರೀಲಕ್ಷ್ಮಿನರಸಿಂಹ ಸ್ವಾಮಿಯ ಸೇವೆಯು ಅನುಕೂಲವಾಗಲಿದೆ.

ಕುಂಭ: ಶ್ರಮದ ದುಡಿಮೆಯೇ ಮಂತ್ರವಾಗಿರಲಿ. ಕಾನೂನಿಗೆ ವಿರುದ್ಧವಾದ ಅಥವಾ ನಿಯಮ ಉಲ್ಲಂಘನೆಯ ಕೆಲವು ಸಂಗತಿಗಳು ನಡೆಯಬಹುದು. ದುರ್ಗಾಪರಮೇಶ್ವರಿಯ ದರ್ಶನದಿಂದ ಎಲ್ಲಾ ಒಳ್ಳೆಯದಾಗುವುದು.

ಮೀನ: ಇಂದಿನ ಜೀವನದಲ್ಲಿ ನಿಮಗೆದುರಾಗಿ ಬರುತ್ತಿರುವ ಅದೃಷ್ಟದ ಲಾಭವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಾಳಜಿ ವಹಿಸಿ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹570
12 ಕ್ಕೆ	₹75
ಮೈಸೂರು: 100 ಕ್ಕೆ	₹572

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹26350
ಎಸಿ	₹14425
ಆರ್‌ಪಿ	₹17750
ಆರ್‌ಸಿ	₹10425

ಎನ್‌.ಆರ್‌.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹195
ಆರ್‌ಎಸ್‌ಎಸ್‌-5	₹190
ಗುಡ್‌ ಲಾಟ್‌	₹178

ಕೆ.ಜಿ ಬೆಳ್ಳಿ ದರ ₹3.64 ಲಕ್ಷ

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು: ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆ ಆಗಿದೆ.

24 ಕ್ಯಾರಟ್ ಪರಿಶುದ್ಧ ಚಿನ್ನದ ಬೆಲೆ 10 ಗ್ರಾಂಗೆ ₹1,67,590 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹3,64,105ಕ್ಕೆ ತಲುಪಿದೆ. ಶನಿವಾರದ ವಹಿವಾಟಿಗೆ ಹೋಲಿಸಿದರೆ ಚಿನ್ನದ ದರದಲ್ಲಿ ₹2,590 ಮತ್ತು ಬೆಳ್ಳಿ ದರದಲ್ಲಿ ₹9,805 ಏರಿಕೆಯಾಗಿದೆ.

ಶನಿವಾರದ ವಹಿವಾಟಿನಲ್ಲಿ ಚಿನ್ನ, ಬೆಳ್ಳಿ ದರವು ಕ್ರಮವಾಗಿ ₹1.65 ಲಕ್ಷ ಮತ್ತು ₹3,54,300 ಇತ್ತು.

ಲಂಡನ್ ಮಾರುಕಟ್ಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಚಿನ್ನದ ದರವು ಒಂದು ಔನ್ಸ್‌ಗೆ (28.34 ಗ್ರಾಂ) 5,111 ಡಾಲರ್‌ಗೆ ಏರಿಕೆಯಾಗಿದೆ. ಬೆಳ್ಳಿ ದರವು ಒಂದು ಔನ್ಸ್‌ಗೆ 110 ಡಾಲರ್ ಆಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ.

ಇ.ಯು ಸುಂಕ ಇಳಿಕೆ?

ಒಂದನೇ ಪುಟದಿಂದ...

ಈಗ ಶೇ 10ರಷ್ಟು ಸುಂಕ: ಭಾರತದ ಸರಕುಗಳಿಗೆ ಐರೋಪ್ಯ ಒಕ್ಕೂಟವು ವಿಧಿಸುತ್ತಿರುವ ಸುಂಕದ ಪ್ರಮಾಣವು ಸರಿಸುಮಾರು ಶೇ 3.8ರಷ್ಟಿದೆ. ಆದರೆ ಕಾರ್ಮಿಕರ ಅಗತ್ಯವು ಹೆಚ್ಚಿನ ಮಟ್ಟದಲ್ಲಿ ಇರುವ ವಲಯಗಳ ಸರಕುಗಳಿಗೆ ಶೇ 10ರಷ್ಟು ಆಮದು ಸುಂಕವನ್ನು ಒಕ್ಕೂಟವು ವಿಧಿಸುತ್ತಿದೆ.

ಈಗ ಭಾರತವು ಯುರೋಪಿನ ಉತ್ಪನ್ನಗಳಿಗೆ ಸರಾಸರಿ ಶೇ 9.3ರಷ್ಟು ಸುಂಕ ವಿಧಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ವಾಹನ ಹಾಗೂ ಅವುಗಳ ಬಿಡಿಭಾಗಗಳು (ಶೇ 35.5ರಷ್ಟು), ಪ್ಲಾಸ್ಟಿಕ್ (ಶೇ 10.4ರಷ್ಟು), ರಾಸಾಯನಿಕಗಳು ಹಾಗೂ ಔಷಧಗಳಿಗೆ (ಶೇ 9.9ರಷ್ಟು) ಹೆಚ್ಚಿನ ಪ್ರಮಾಣದಲ್ಲಿ ಸುಂಕ ವಿಧಿಸಲಾಗುತ್ತಿದೆ. ಭಾರತವು ಐರೋಪ್ಯ ಒಕ್ಕೂಟದಿಂದ ಆಮದಾಗುವ ಮದ್ಯದ ಪೇಯಗಳಿಗೆ ಶೇ 100ರಿಂದ ಶೇ 125ರಷ್ಟು ಸುಂಕ ವಿಧಿಸುತ್ತಿದೆ.

ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ವಲಯಗಳನ್ನು ಒಪ್ಪಂದದ ವ್ಯಾಪ್ತಿಯಿಂದ ಹೊರಗಿರಿಸಲಾಗಿದೆ. ಒಕ್ಕೂಟವು ತನ್ನಲ್ಲಿನ ದನದ ಮಾಂಸ, ಸಕ್ಕರೆ ಮತ್ತು ಅಕ್ಕಿ ಮಾರುಕಟ್ಟೆಯನ್ನು ಒಪ್ಪಂದದ ವ್ಯಾಪ್ತಿಗೆ ತಂದಿಲ್ಲ. ಭಾರತವು ತನ್ನ ಕೃಷಿ ವಲಯ, ಹೈನುಗಾರಿಕೆ ವಲಯವನ್ನು ವಿದೇಶಿ ಪೈಪೋಟಿಗೆ ಒಡ್ಡಲು ಒಪ್ಪಿಲ್ಲ.

ಭಾರತದ ಉದ್ಯಮಕ್ಕೆ ಧಕ್ಕೆ ಇಲ್ಲ: ಜಿಟಿಆರ್‌ಐ

ನವದೆಹಲಿ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಘೋಷಣೆ ಆಗಲಿರುವ ಮುಕ್ತ ವ್ಯಾಪಾರ ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ವ್ಯಾಪಾರ ವಹಿವಾಟುಗಳು ಹೆಚ್ಚಬಹುದೇ ವಿನಾ ದೇಶಿ ಉದ್ಯಮಕ್ಕೆ ಅದರಿಂದ ಧಕ್ಕೆ ಆಗುವುದಿಲ್ಲ ಎಂದು ಜಿಟಿಆರ್‌ಐ ಹೇಳಿದೆ.

ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಸಂಸ್ಥೆಯು ವ್ಯಾಪಾರ, ವಹಿವಾಟುಗಳಿಗೆ ಸಂಬಂಧಿಸಿದ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದೆ. ಒಪ್ಪಂದದ ಪರಿಣಾಮವಾಗಿ ವೆಚ್ಚ ತಗ್ಗಲಿದೆ, ವ್ಯಾಪಾರ ಹೆಚ್ಚಾಗಲಿದೆ ಎಂದು ಅದು ಅಂದಾಜಿಸಿದೆ.

ಭಾರತದಿಂದ ಯುರೋಪಿಗೆ ರಫ್ತು: ಸ್ಮಾರ್ಟ್‌ಫೋನ್, ಜವಳಿ, ಪಾದರಕ್ಷೆ, ಔಷಧ, ವಾಹನಗಳ ಬಿಡಿಭಾಗಗಳು, ಸಂಸ್ಕರಿತ ಇಂಧನ, ಕತ್ತರಿಸಿದ ವಜ್ರ

ಯುರೋಪಿನಿಂದ ಭಾರತಕ್ಕೆ ಆಮದು: ಉನ್ನತ ತಂತ್ರಜ್ಞಾನದ ಯಂತ್ರಗಳು, ವಿಮಾನಗಳು, ಪ್ರಮುಖ ಎಲೆಕ್ಟ್ರಾನಿಕ್ ಬಿಡಿಭಾಗಗಳು, ರಾಸಾಯನಿಕಗಳು, ಗುಣಮಟ್ಟದ ವೈದ್ಯಕೀಯ ಉಪಕರಣಗಳು.

ಶೇಂಗಾ ಬೆಳೆಗೆ ದಾಖಲೆ ಬೆಲೆ

ಬಳ್ಳಾರಿ ಎಪಿಎಂಸಿ ಇತಿಹಾಸದಲ್ಲೇ ಅತಿ ಹೆಚ್ಚು ದರಕ್ಕೆ ಮಾರಾಟ

• ಹರಿಶಂಕರ್ ಆರ್.

ಬಳ್ಳಾರಿ: ಹಿಂಗಾರು ಹಂಗಾಮಿನಲ್ಲಿ ಬೆಳೆದ ಶೇಂಗಾಕ್ಕೆ ಬಂಪರ್ ಬೆಲೆ ಸಿಗುತ್ತಿದೆ. ಬಳ್ಳಾರಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ಜ. 23ರಂದು ದಾಖಲೆ ಬೆಲೆಗೆ ಶೇಂಗಾ ಮಾರಾಟವಾಗಿದೆ.

ಆಂಧ್ರಪ್ರದೇಶದ ರೈತ ರಾಮಪ್ಪ, ಎಪಿಎಂಸಿಗೆ ತಂದಿದ್ದ ಉತ್ಕೃಷ್ಟ ಗುಣಮಟ್ಟದ ಶೇಂಗಾ ಕ್ವಿಂಟಲ್‌ಗೆ ₹10,259 ದರಕ್ಕೆ ಮಾರಾಟವಾಗಿದೆ. ಬಳ್ಳಾರಿಯ ಎಪಿಎಂಸಿಯ ಇತಿಹಾಸದಲ್ಲೇ ಇದು ದಾಖಲೆ. ತಿಂಗಳ ಹಿಂದೆ ಕ್ವಿಂಟಲ್ ಶೇಂಗಾ ₹7,000 ರಿಂದ ₹7,500 ದರದಲ್ಲಿ ಮಾರಾಟವಾಗಿತ್ತು.

ಪ್ರತಿ 100 ಗ್ರಾಂ ಶೇಂಗಾದಲ್ಲಿ (ಸಿಪ್ಪೆ ಸಹಿತ), ಬೀಜದ ಪ್ರಮಾಣ 75 ಗ್ರಾಂನಷ್ಟು ಇರಬೇಕು. ಇಂಥ ಉತ್ಪನ್ನಕ್ಕೆ ಉತ್ತಮ ಬೆಲೆ ಸಿಗುತ್ತಿದೆ. ಬೀಜದ ಪ್ರಮಾಣಕ್ಕೆ ಅನುಗುಣವಾಗಿ ಎಪಿಎಂಸಿಯಲ್ಲಿ ಬೆಲೆ ಸಿಗುತ್ತಿದೆ.

'ಮಾರುಕಟ್ಟೆಗೆ ಬರುತ್ತಿರುವ ಶೇಂಗಾ ಪ್ರಮಾಣವೂ ಕಡಿಮೆ. ಹೀಗಾಗಿ ಉತ್ತಮ ಬೆಲೆ ಸಿಗುತ್ತಿದೆ. ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಏರಿಕೆ ಆಗುವ ಸಾಧ್ಯತೆಗಳಿವೆ. ₹11 ಸಾವಿರದ ಗಡಿ ದಾಟಿದರೂ ಅಚ್ಚರಿ ಇಲ್ಲ' ಎಂದು ಎಪಿಎಂಸಿ ಮಧ್ಯವರ್ತಿಗಳ ಸಂಘದ ಮುಖಂಡ ಗುರುಸ್ವಾಮಿ ತಿಳಿಸಿದರು.

'ಬಳ್ಳಾರಿ ಎಪಿಎಂಸಿಗೆ ನಿತ್ಯ ತಲಾ 30 ಕೆಜಿ ತೂಕದ 400ರಿಂದ 1000 ಚೀಲ ಶೇಂಗಾ ಬರುತ್ತಿದೆ' ಎಂದು ವರ್ತಕರು ಮಾಹಿತಿ ನೀಡಿದ್ದಾರೆ. ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್‌ಎಕ್ಯೂ ಗುಣಮಟ್ಟದ ಶೇಂಗಾಕ್ಕೆ ಕ್ವಿಂಟಲ್‌ಗೆ ₹7,263 ನಿಗದಿ ಆಗಿದೆ. ಮಾರುಕಟ್ಟೆ ದರ ಬೆಂಬಲ ಬೆಲೆಗಿಂತಲೂ ಅಧಿಕವಾಗಿದೆ.

ಆಂಧ್ರದ ರೈತರಿಗೆ ಲಾಭ

ಬಳ್ಳಾರಿ ಜಿಲ್ಲೆಯು ಭಾಗಶಃ ನೀರಾವರಿ ಪ್ರದೇಶವಾಗಿದ್ದು ಶೇಂಗಾ ಕೃಷಿ ಕಡಿಮೆಯಿದೆ. ಬೆಲೆ ಏರಿಕೆಯ ಲಾಭ ಆಂಧ್ರ ಪ್ರದೇಶದ ಅನಂತಪುರ, ಕರ್ನೂಲು ಜಿಲ್ಲೆಗಳ ರೈತರಿಗೆ ಸಿಗಲಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ರೈತರು ಬಳ್ಳಾರಿ ಎಪಿಎಂಸಿಗೆ ಶೇಂಗಾ ಮಾರಲು ಬರುತ್ತಾರೆ.

ಬಳ್ಳಾರಿ ಎಪಿಎಂಸಿಯಲ್ಲಿ ಕ್ವಿಂಟಲ್ ಶೇಂಗಾ ದರ ₹10 ಸಾವಿರ ತಲುಪಿದ್ದ ಉದಾಹರಣೆ ಇರಲಿಲ್ಲ. ಇದೇ ಮೊದಲ ಬಾರಿಗೆ ಈ ಗಡಿ ದಾಟಿದೆ. ಶೇಂಗಾ ಅವಕ ಕಡಿಮೆಯಾಗಿದ್ದು ಬೆಲೆ ಏರಿಕೆಗೆ ಕಾರಣ

ವಿಜಯಕುಮಾರ್, ಎಪಿಎಂಸಿ ಕಾರ್ಯದರ್ಶಿ, ಬಳ್ಳಾರಿ

ವರ್ಷಗಳ ನಂತರ ಮರಳಿದ ಡಸ್ಟರ್

ಕಾಂಪ್ಯಾಕ್ಟ್ ಎಸ್‌ಯುವಿಗಳಿಗೆ ಪ್ರೇರಣೆಯಾಗಿದ್ದ ರೆನೊ ಕಂಪನಿಯ ವಾಹನ

• ಇ.ಎಸ್. ಸುಧೀಂದ್ರಪ್ರಸಾದ್

ಚೆನ್ನೈ: 'ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್' (ಎಸ್‌ಯುವಿ) ಹೊಂದಬೇಕು ಎಂದು ಭಾರತದ ಗ್ರಾಹಕರಲ್ಲಿ ಇದ್ದ ಬಯಕೆಗೆ 'ಡಸ್ಟರ್' ಮೂಲಕ ಸ್ಪಂದಿಸಿದ್ದ ಫ್ರಾನ್ಸ್‌ನ ರೆನೊ ಕಂಪನಿಯು ಈಗ ಅದೇ ಹಳೆಯ 'ಡಸ್ಟರ್' ಕಾರನ್ನು ಹೊಸ ರೂಪದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಭಾರತದ ಕಾರು ಪ್ರಪಂಚಕ್ಕೆ 'ಡಸ್ಟರ್' ಎಸ್‌ಯುವಿ ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದ ಮೂಲಕ ಮರುಪ್ರವೇಶ ಪಡೆದಿದೆ. ಈ ಬಾರಿ ಅದು ಹೊಸ ರೂಪವನ್ನು ಹೊತ್ತು ಬಂದಿದೆ.

2012ರ ಜುಲೈನಲ್ಲಿ ರೆನೊ ಕಂಪನಿಯು 'ಡಸ್ಟರ್' ಕಾರನ್ನು ಭಾರತದಲ್ಲಿ ಮೊದಲ ಬಾರಿಗೆ ಪರಿಚಯಿಸಿತು. ಹ್ಯಾಚ್‌ಬ್ಯಾಕ್ ಎಂಬ ಪುಟ್ಟ ಕಾರುಗಳು, ಸೆಡಾನ್ ಎಂಬ ಉದ್ದನೆಯ ಕಾರುಗಳ ನಡುವೆ, ಎಸ್‌ಯುವಿ ಎಂಬುದು 'ಶ್ರೀಮಂತರಿಗೆ ಮಾತ್ರ' ಎಂಬ ಕಲ್ಪನೆಯು ಮಧ್ಯಮ ವರ್ಗದಲ್ಲಿ ಇತ್ತು. ಆದರೆ ಡಸ್ಟರ್ ಪ್ರವೇಶವು ಕಾರು ಲೋಕದಲ್ಲಿ ಸಂಚಲನ ಸೃಷ್ಟಿಸಿತು. ಕಾಂಪ್ಯಾಕ್ಟ್ ಎಸ್‌ಯುವಿ ಅಥವಾ ಕ್ರಾಸ್ ಓವರ್ ವಿಭಾಗ ಎಂಬ ಹೊಸ ವರ್ಗವನ್ನು ಕಾರುಗಳ ಲೋಕದಲ್ಲಿ ಹುಟ್ಟುಹಾಕಿತು.

ಕಟ್ಟುಮಸ್ತಾದ ಬಾಡಿ ಶೆಲ್, ಭಾರತದ ರಸ್ತೆಗಳಿಗೆ ತೀರಾ ಅಗತ್ಯವಿದ್ದ ಹೆಚ್ಚಿನ ಗ್ರೌಂಡ್ ಕ್ಲಿಯರೆನ್ಸ್, ಸೆಡಾನ್ ಕಾರುಗಳಿಗೆ ನಿಗದಿ ಮಾಡುವಂತಹ ಬೆಲೆಯು ಕಾರು ಪ್ರಿಯರನ್ನು ತನ್ನತ್ತ ನೋಡುವಂತೆ ಇದು ಮಾಡಿತು. ಉತ್ತಮ ಟಾರ್ಕ್ ಹೊಂದಿದ್ದ ಡೀಸೆಲ್ ಎಂಜಿನ್‌ನ ಇಂಧನ ಕ್ಷಮತೆ ಹುಬ್ಬೇರಿಸಿತ್ತು. ಹೊರ ಕವಚಕ್ಕೆ ಪೂರಕವಾದ ಮೊನೊಕಾಕ್ ಚಾಸೀಸ್ ಅನ್ನು ಪರಿಚಯಿಸಿದ ರೆನೊ, ಪ್ರಯಾಣಿಕರಿಗೆ ಹೆಚ್ಚಿನ ಆರಾಮ ಮತ್ತು ಸುರಕ್ಷತೆಯನ್ನು ಖಾತರಿಪಡಿಸಿತ್ತು.

ರೆನೊ ಡಸ್ಟರ್

ಸ್ಪರ್ಧಿಗಳೇ ಇಲ್ಲದ ಕ್ಷೇತ್ರಕ್ಕೆ ಕಾಲಿಟ್ಟ ರೆನೊ ಮಾಸಿಕ 5 ಸಾವಿರದಿಂದ 6 ಸಾವಿರ ಡಸ್ಟರ್ ಮಾರುವಷ್ಟು ಬೇಡಿಕೆ ಸೃಷ್ಟಿಸಿಕೊಂಡಿತು.

ಬದಲಾದ ಕಾಲಕ್ಕೆ ಮತ್ತು ಗ್ರಾಹಕರ ಬೇಡಿಕೆಗೆ ತಕ್ಕಂತೆ ಡಸ್ಟರ್‌ನಲ್ಲಿ ಬದಲಾವಣೆ ಮಾಡುವಲ್ಲಿ ರೆನೊ ಅಷ್ಟಾಗಿ ಆಸಕ್ತಿ ತೋರದಿದ್ದದ್ದು ದುಬಾರಿಯಾಯಿತು. ಭಾರತದಲ್ಲಿನ ಕಾಂಪ್ಯಾಕ್ಟ್ ಎಸ್‌ಯುವಿ ವಿಭಾಗದ ಬೆಳವಣಿಗೆಯನ್ನು ಗಮನಿಸಿದ ರೆನೊ, ಇದೀಗ ಡಸ್ಟರ್ ಹೆಸರಿನಲ್ಲಿಯೇ ಎಸ್‌ಯುವಿ ಬಿಡುಗಡೆ ಮಾಡಿದೆ. ಹೊರ ಭಾಗದಲ್ಲಿ ಬದಲಾವಣೆ ತಂದಿದೆ, ಒಳಾಂಗಣದಲ್ಲೂ ಆಧುನಿಕ ಸೌಲಭ್ಯಗಳನ್ನು ನೀಡಿದೆ.

ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಚೆನ್ನೈಗೆ ತೆರಳಿದ್ದರು

ಹೀಗಿದೆ ಡಸ್ಟರ್

ಮರು ಪ್ರವೇಶ ಪಡೆದಿರುವ ಡಸ್ಟರ್ ಅನ್ನು ಮೂರು ಎಂಜಿನ್ ಮಾದರಿಯಲ್ಲಿ ರೆನೊ ಪರಿಚಯಿಸಿದೆ. 1 ಲೀ., 1.3ಲೀ. ಹಾಗೂ 1.8ಲೀ ಹೈಬ್ರಿಡ್ ಟಿಸಿಇ 160 ಎಂಬ ಎಂಜಿನ್ ಇದರಲ್ಲಿದೆ. ಎಲ್ಲವೂ ಪೆಟ್ರೋಲ್ ಮಾದರಿಯವು.

ಹೈಬ್ರಿಡ್ ಮಾದರಿಯಲ್ಲಿ ಎರಡು ಮೋಟಾರ್‌ಗಳನ್ನು ನೀಡಲಾಗಿದ್ದು, ನಗರ ಪ್ರದೇಶದಲ್ಲಿ ಶೇ 80ರಷ್ಟು ಬ್ಯಾಟರಿಯಿಂದಲೇ ಚಾಲಿಸುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ. 360 ಡಿಗ್ರಿ ಕ್ಯಾಮೆರಾದೊಂದಿಗೆ ಎಡಾಸ್, ಏರ್‌ಬ್ಯಾಗ್ ಜತೆಗೆ 35 ಸುರಕ್ಷತಾ ಸಾಧನಗಳನ್ನು ಕಂಪನಿ ಅಳವಡಿಸಿದೆ. ಇದಕ್ಕಾಗಿ ಡಸ್ಟರ್‌ಗೆ ಪಂಚತಾರಾ ಸುರಕ್ಷತಾ ಮಾನ್ಯತೆ ದೊರೆತಿದೆ ಎಂದು ಕಂಪನಿಯ ಅಧಿಕಾರಿಗಳು ತಿಳಿಸಿದ್ದಾರೆ.

ಒಳಾಂಗಣದಲ್ಲಿ ಗೂಗಲ್ ಅಸಿಸ್ಟೆನ್ಸ್ ಇರುವ ಇನ್ಫೊಟೈನ್ಮೆಂಟ್ ಸಿಸ್ಟಂ, ವೆಂಟಿಲೇಟೆಡ್ ಸೀಟ್, ಬೃಹತ್ ಪ್ಯಾನಾರೊಮಿಕ್ ಸನ್‌ರೂಫ್ ನೀಡಲಾಗಿದೆ. 780 ಲೀಟರ್ ಬೂಟ್ ಸ್ಪೇಸ್ ಕೂಡಾ ಹೊಸ ಡಸ್ಟರ್ ಹೊಂದಿದೆ. ಕಂಪನಿಯು ವಾಹನದ ಬೆಲೆಯನ್ನು ಇನ್ನೂ ಪ್ರಕಟಿಸಿಲ್ಲ.

ಜೀವಿತಾವಧಿತನಕ ಜೈಲು ಶಿಕ್ಷೆ ವಿಧಿಸುವ ತೀರ್ಪು

ಸುಪ್ರೀಂ–ಹೈಕೋರ್ಟ್‌ಗೆ ಮಾತ್ರ ಅಧಿಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರಾಧಿಯೊಬ್ಬರಿಗೆ ಸಾಯುವವರೆಗೂ ಜೈಲು ಶಿಕ್ಷೆ ವಿಧಿಸುವ ಅಧಿಕಾರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಿಗೆ ಮಾತ್ರವೇ ಇದೆ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಮೂರೂವರೆ ವರ್ಷದ ಮಗುವನ್ನು ಕೊಲೆ ಮಾಡಿದ್ದ ಪ್ರಕರಣದ ಅಪರಾಧಿ ರುದ್ರೇಶ್ ಅಲಿಯಾಸ್ ರುದ್ರಯ್ಯ (28), 'ನನಗೆ ಸಾಯುವವರೆಗಿನ ಜೀವಿತಾವಧಿ ಜೈಲು ಶಿಕ್ಷೆ ವಿಧಿಸಿರುವ ಶಿವಮೊಗ್ಗದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್ ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು.

ಈ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಪೀಠ, ರುದ್ರೇಶ್‌ಗೆ ಸಾಯುವವರೆಗೆ ಜೀವಿತಾವಧಿ ಶಿಕ್ಷೆ ವಿಧಿಸಿರುವ ಸೆಷನ್ಸ್ ಕೋರ್ಟ್ ಆದೇಶದಲ್ಲಿ ಮಾರ್ಪಾಡು ಮಾಡಿದೆ. ಸಾಯುವವರೆಗಿನ ಜೈಲು ಶಿಕ್ಷೆ ಬದಲಾಗಿ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.

'ಸಾಯುವವರೆಗೆ ಜೈಲು ಶಿಕ್ಷೆ ವಿಧಿಸುವ ಅಧಿಕಾರವನ್ನು ಸಾಂವಿಧಾನಿಕ ನ್ಯಾಯಾಲಯಗಳಾದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ಮಾತ್ರವೇ ಹೊಂದಿವೆ. ಈ ಅಧಿಕಾರ ಸೆಷನ್ಸ್ ಕೋರ್ಟ್‌ಗೆ ಇಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಮೇಲ್ಮನವಿದಾರರ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ವಾದ ಮಂಡಿಸಿದ್ದರು.

ಜೀವಾವಧಿ ಶಿಕ್ಷೆಯಾದರೆ 14 ವರ್ಷ ಜೈಲು ಶಿಕ್ಷೆ ಪೂರೈಸಿದ ನಂತರ ಸನ್ನಡತೆ ಆಧಾರದಲ್ಲಿ ಸರ್ಕಾರಕ್ಕೆ, ಕೈದಿಯನ್ನು ಬಿಡುಗಡೆ ಮಾಡುವ ಅಧಿಕಾರ ಮತ್ತು ಅವಕಾಶವಿರುತ್ತದೆ.

ಪ್ರಕರಣವೇನು?: ಶಿವಮೊಗ್ಗ ಜಿಲ್ಲೆಯ ಹೊಸಮನೆ ಗ್ರಾಮದ ನಿವಾಸಿ ರುದ್ರೇಶ್, ಹೊಸನಗರದ ಮಠವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೊಲೆಗೀಡಾದ ಮಗುವಿನ ತಾಯಿ (ಪ್ರಕರಣದ ದೂರುದಾರೆ) ಆ ಮಠದ ಭಕ್ತೆಯಾಗಿದ್ದರು. ನಿಯಮಿತವಾಗಿ ಮಠಕ್ಕೆ ಭೇಟಿ ನೀಡುತ್ತಿದ್ದರು. ಮಠದ ವ್ಯವಹಾರಗಳಲ್ಲಿ ರುದ್ರೇಶ್‌ಗೆ ದೂರುದಾರೆ ಮತ್ತು ಆಕೆಯ ತಾಯಿ ಸಲಹೆ ನೀಡುತ್ತಿದ್ದರು. ಇದೇ ವಿಚಾರವಾಗಿ ದೂರುದಾರೆಯ ಬಗ್ಗೆ ರುದ್ರೇಶ್ ದ್ವೇಷ ಬೆಳೆಸಿಕೊಂಡಿದ್ದರು.

2017ರ ಏಪ್ರಿಲ್ 10ರಂದು ಮಠದ ಕಾರ್ಯಕ್ರಮವೊಂದರಲ್ಲಿ ದೂರುದಾರೆ ತನ್ನ ಮೂರೂವರೆ ವರ್ಷದ ಗಂಡು ಮಗು ಮತ್ತು ಕುಟುಂಬದ ಸದಸ್ಯರೊಂದಿಗೆ ಭಾಗಿಯಾಗಿದ್ದರು. ಅಂದು ರಾತ್ರಿ ಮಠದಲ್ಲೇ ಊಟ ಮಾಡಿ ಮಲಗಿದ್ದರು. ಬೆಳಿಗ್ಗೆ 5.30ಕ್ಕೆ ಎಚ್ಚರಗೊಂಡಾಗ ಮಗು ಪಕ್ಕದಲ್ಲಿ ಇರಲಿಲ್ಲ. ನಂತರ ಆ ಮಗು ಶವವಾಗಿ ಪತ್ತೆಯಾಗಿತ್ತು.

ಈ ಕುರಿತು ಹೊಸನಗರ ಠಾಣಾ ಪೊಲೀಸರು ತನಿಖೆ ನಡೆಸಿದಾಗ, ಮಗುವನ್ನು ರುದ್ರೇಶ್ ಅಪಹರಿಸಿ ಕೊಲೆ ಮಾಡಿದ್ದ ಕೃತ್ಯ ಬಯಲಾಗಿತ್ತು.

ಕೊಲೆ ಮತ್ತು ಅಪಹರಣ ಆರೋಪದಡಿ ರುದ್ರೇಶ್ ಅವರನ್ನು 2017ರ ನವೆಂಬರ್ 27ರಂದು ದೋಷಿ ಎಂದು ತೀರ್ಮಾನಿಸಿದ್ದ ಸೆಷನ್ಸ್ ನ್ಯಾಯಾಲಯ ಸಾಯುವವರೆಗೂ ಅಂದರೆ ಜೀವಿತಾವಧಿ ಶಿಕ್ಷೆ ವಿಧಿಸಿ ಆದೇಶಿಸಿತ್ತು.

ಎಕ್ಸಿಸ್ ಬ್ಯಾಂಕ್ ಲಾಭ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಸೆಂಬರ್ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 4ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹6,742 ಕೋಟಿ ಲಾಭ ಗಳಿಸಿತ್ತು. ಅದು ಈ ಬಾರಿ ₹7,010 ಕೋಟಿಗೆ ಹೆಚ್ಚಳವಾಗಿದೆ ಎಂದು ಬ್ಯಾಂಕ್ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ.

ನಿವ್ವಳ ಬಡ್ಡಿ ವರಮಾನದಲ್ಲಿ ಶೇ 5ರಷ್ಟು ಏರಿಕೆಯಾಗಿದ್ದು, ₹14,287 ಕೋಟಿಯಷ್ಟಾಗಿದೆ. ಬ್ಯಾಂಕ್‌ನ ಒಟ್ಟು ಠೇವಣಿ ₹12.60 ಲಕ್ಷ ಕೋಟಿಯಾಗಿದೆ.

ಒಟ್ಟು ವಸೂಲಾಗದ ಸಾಲದ ಪ್ರಮಾಣ (ಜಿಎನ್‌ಪಿಎ) ಶೇ 1.46ರಿಂದ ಶೇ 1.40ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.44ರಿಂದ ಶೇ 0.42ಕ್ಕೆ ಇಳಿದಿದೆ ಎಂದು ತಿಳಿಸಿದೆ.

ಬ್ಯಾಂಕ್‌ನ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 16.55ರಷ್ಟಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಮಿನಿಯಾಪೊಲಿಸ್: ಪರಿಶೀಲನೆಗೆ ಅಧಿಕಾರಿ

ಮಿನಿಯಾಪೊಲಿಸ್ (ಎಎಫ್‌ಪಿ): ವಲಸಿಗರ ವಿರುದ್ಧದ ಕಾರ್ಯಾಚರಣೆ ವೇಳೆ ಅಧಿಕಾರಿಗಳು ಇಲ್ಲಿ ವ್ಯಕ್ತಿಯೊಬ್ಬರನ್ನು ಗುಂಡಿಟ್ಟು ಕೊಂದಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗಿರುವ ಬೆನ್ನಲ್ಲೇ ಮಿನಿಯಾಸೊಟಾದಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಲು ಹಿರಿಯ ಅಧಿಕಾರಿಯೊಬ್ಬರನ್ನು ಕಳುಹಿಸುತ್ತಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದಾರೆ.

'ಗಡಿ ಭದ್ರತೆಯ ಪ್ರಮುಖ ಅಧಿಕಾರಿ ಟಾಮ್ ಹೋಮನ್ ಅವರನ್ನು ಮಿನಿಯಾಪೊಲಿಸ್‌ಗೆ ಕಳುಹಿಸಲಾಗುತ್ತಿದ್ದು, ಪರಿಸ್ಥಿತಿಯನ್ನು ಪರಿಶೀಲಿಸಿದ ಬಳಿಕ ಅವರೇ ನನಗೆ ನೇರವಾಗಿ ಮಾಹಿತಿ ನೀಡಲಿದ್ದಾರೆ' ಎಂದೂ ಟ್ರಂಪ್ ತಿಳಿಸಿದ್ದಾರೆ. ಮಿನಿಯಾಪೊಲಿಸ್‌ನಲ್ಲಿ ರಾಜಕೀಯ ಹಾಗೂ ಭದ್ರತಾ ಪರಿಸ್ಥಿತಿಗಳು ಕೈ ಮೀರದಂತೆ ತಡೆಯಲು ಟಾಮ್ ಅವರನ್ನು ನಿಯೋಜಿಸಲಾಗುತ್ತಿದೆ ಎಂದೂ ತಿಳಿದುಬಂದಿದೆ.

ಮಾರ್ಚ್‌ನಲ್ಲಿ ಭಾರತಕ್ಕೆ ಕೆನಡಾ ಪ್ರಧಾನಿ?

ಒಂದನೇ ಪುಟದಿಂದ...

ಈ ಬಗ್ಗೆ ಪ್ರತಿಕ್ರಿಯೆ ನೀಡಲು ಕೆನಡಾ ಪ್ರಧಾನಿಗಳ ಕಾರ್ಯಾಲಯವು ನಿರಾಕರಿಸಿದೆ.

ಅಮೆರಿಕದಿಂದ ಆಚೆಗೂ ಕೆನಡಾದ ಮೈತ್ರಿಯನ್ನು ವಿಸ್ತರಿಸಲು ಕಾರ್ನಿ ಅವರು ಎಲ್ಲಾ ರೀತಿಯ ಪ್ರಯತ್ನ ನಡೆಸುತ್ತಿದ್ದಾರೆ.

ಕೆನಡಾದ ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಸಿಖ್ ಪ್ರತ್ಯೇಕತಾವಾದಿ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಆರೋಪಿಸಿದ್ದರು. ಭಾರತ ಈ ಆರೋಪವನ್ನು ಅಲ್ಲಗಳೆದಿತ್ತು. ಇಲ್ಲಿಂದ ಹದಗೆಟ್ಟಿದ್ದ ಭಾರತ–ಕೆನಡಾ ಸಂಬಂಧವನ್ನು ಸುಧಾರಿಸಲು ಕಾರ್ನಿ ಯತ್ನಿಸುತ್ತಿದ್ದಾರೆ.

ಕಾರ್ನಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಅವರು ಕಳೆದ ವರ್ಷ ಏಳು ದೇಶಗಳ ಶೃಂಗಸಭೆಯಲ್ಲಿ ಭಾಗಿಯಾಗಿದ್ದರು. ಅದೇ ರೀತಿ ಕಾರ್ನಿ ಸಂಪುಟದ ಹಲವು ಸಚಿವರೂ ಭಾರತಕ್ಕೆ ಬಂದಿದ್ದರು.

ಚುನಾವಣೆ ನಡೆಯುವ ರಾಜ್ಯಗಳಿಗೆ ಪದ್ಮ ಪ್ರಶಸ್ತಿಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು ಸರಿಯೇ?

• ಸರಿ • ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ,ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

ಭವಿಷ್ಯ

Astrology

ಶಿವಶಕ್ತಿ ಜ್ಯೋತಿಷ್ಯಂ (ಪ್ರೇಮಭವಿಷ್ಯ) ಪ್ರೀತಿಸಿದವರನ್ನು ಮರಳಿ ಸ್ತ್ರೀಪುರುಷ ವಶೀಕರಣ ಮಾಡಿಕೊಡುತ್ತಾರೆ. ಶತ್ರುನಾಶ ಗಂಡಹೆಂಡತಿ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಪ್ರವಾಸ

Travel

1ದಿನ ಕದ್ರಿ, ನರಸಿಂಹಸ್ವಾಮಿ, ಲೇಪಾಕ್ಷಿ, ಪುಟ್ಟಪರ್ತಿ 1ದಿನ ತಿರುವಣ್ಣಾಮಲೈ, ಗೋಲ್ಡನ್ ಟೆಂಪಲ್ ಜಲಕಂಠೇಶ್ವರ 2 ದಿನಗಳು ಅಹೋಬಿಲಂ ನವನರಸಿಂಹ,ಲೇಪಾಕ್ಷಿ ಬೆಲುಂಗುಹೆಗಳು ಪ್ರತಿ ಬುಧವಾರ 6 ದಿನಗಳು ಪಂಚರಾಮ ವಿಜಯವಾಡ ವಿಶಾಖಪಟ್ಟಣಂ, ರಾಜಮಹೇಂದ್ರವರಂ ಅಣ್ಣವರಂ, ಸಿಂಹಾಚಲಂ ಪೆಣುಗೊಂಡ ಪ್ರತಿತಿಂಗಳು ವಿಮಾನ ಪ್ರಯಾಣ 9403890729 ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ.

ಅಸಲು ದಾವೆ ನಂ.: 439/2024

ವಾದಿ: ರಫೀಕ್ ಖಾನ್ ಬಿನ್ ಬುಡೇನ್ ಸಾಬ್, ಸುಮಾರು 64 ವರ್ಷ, ವ್ಯವಸಾಯ. ವಾಸ: 1ನೇ ಮೈನ್, 3ನೇ ಕ್ರಾಸ್, ಇಂದಿರಾನಗರ ಎಕ್ಸ್‌ಟೆನ್ಷನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ.

–ವಿರುದ್ಧ–

ಪ್ರತಿವಾದಿಗಳು: ಶ್ರೀಮತಿ ನೇತ್ರಾವತಿ ಮತ್ತು ಇತರರು. 2ನೇ ಪ್ರತಿವಾದಿ: ಶ್ರೀಮತಿ ಜ್ಯೋತಿ ಬಿನ್ ಗಣೇಶ್ ರಾವ್, ಸುಮಾರು 49 ವರ್ಷ. 3ನೇ ಪ್ರತಿವಾದಿ: ಶ್ರೀಮತಿ ರೇಖಾ ಹಿಟ್ಟಿನಮಠ್ ಬಿನ್ ಗಣೇಶ್ ರಾವ್, ಸುಮಾರು 49 ವರ್ಷ. 4ನೇ ಪ್ರತಿವಾದಿ: ಕಿರಣ್ ಕುಮಾರ್ @ ಕಿರಣ್ ಜಿ. ರಾವ್ ಬಿನ್ ಗಣೇಶ್ ರಾವ್, ಸುಮಾರು 45 ವರ್ಷ. ಎಲ್ಲರು ವ್ಯವಸಾಯಗಾರರು. ಎಲ್ಲರ ವಾಸ: #1916, 36ನೇ ಮೈನ್ ರಸ್ತೆ, ಡಿ–ಗ್ರೂಪ್ ಲೇಔಟ್, ಸುಂಕದಟ್ಟೆ, ಬೆಂಗಳೂರು–560091.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ದಾವೆಯನ್ನು ವಾದಿಯವರು ಪ್ರತಿವಾದಿಗಳ ವಿರುದ್ಧ ನಿರ್ದಿಷ್ಟ ಪರಿಹಾರ ಕೋರಿ ದಾವೆಯನ್ನು ಮಾನ್ಯ ಮೇಲಿನ ಘನ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮೇಲ್ಕಂಡ ಪ್ರಕರಣದಲ್ಲಿ ನಿಮಗೆ ಸಾಕಷ್ಟು ಬಾರಿ ಮಾನ್ಯ ನ್ಯಾಯಾಲಯದಿಂದ ಸಮನ್ಸ್ ನೋಟಿಸ್‌ಗಳನ್ನು ಕಳುಹಿಸಿದ್ದರೂ ಸಹ ಇದುವರೆವಿಗೂ 2 ರಿಂದ 4ನೇ ಪ್ರತಿವಾದಿಯಾದ ನೀವು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ತಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ದಿನಾಂಕ: 02.03.2026 ರಂದು ಮೇಲೆ ತಿಳಿಸಿದ ನ್ಯಾಯಾಲಯದಲ್ಲಿ ಬೆಳಿಗ್ಗೆ 11:00 ಗಂಟೆಗೆ ಸದರಿ ಪ್ರಕರಣವನ್ನು ಕರೆಸಲಾಗುವುದು, ಸದರಿ ಪ್ರಕರಣದಲ್ಲಿ ತಾವಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಖುದ್ದಾಗಿ ಹಾಜರಾಗತಕ್ಕದ್ದು ಮತ್ತು ತಮ್ಮ ತಕರಾರು ಸಲ್ಲಿಸತಕ್ಕದ್ದು. ಒಂದೊಮ್ಮೆ ತಪ್ಪಿದ್ದಲ್ಲಿ ತಮ್ಮ ವಿರುದ್ಧ ನ್ಯಾಯಾಲಯವು ಏಕಪಕ್ಷೀಯ ಆದೇಶ ಮಾಡಲಾಗುತ್ತದೆ ಎಂದು ಈ ಮೂಲಕ ತಿಳಿಯಿರಿ.

ನ್ಯಾಯಾಲಯದ ಅಪ್ಪಣೆ ಮೇರೆಗೆ

ಸಹಿ/– ಶಿರಸ್ತೇದಾರರು, ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಭದ್ರಾವತಿ.

ವಾದಿ ಪರ ವಕೀಲರು: ಶ್ರೀಯುತ ಎಂ. ಅನಂತರಾಮು

ಸ್ಥಳ: ಭದ್ರಾವತಿ, ದಿನಾಂಕ: 22.01.2026

ಭದ್ರತಾ ಖಾತರಿ ದಾಖಲೆ ಸಿದ್ಧ: ಝೆಲೆನ್‌ಸ್ಕಿ

ವೊಲೊಡಿಮಿರ್ ಝೆಲೆನ್‌ಸ್ಕಿ

ವಿಲ್ನಿಯಸ್ (ಎಪಿ): ಉಕ್ರೇನ್, ಅಮೆರಿಕ ಮತ್ತು ರಷ್ಯಾ ಪ್ರತಿನಿಧಿಗಳ ನಡುವೆ ಎರಡು ದಿನ ನಡೆದ ಮಾತುಕತೆ ಬಳಿಕ, ಉಕ್ರೇನ್‌ಗಾಗಿ ಅಮೆರಿಕ ಸಿದ್ಧಪಡಿಸಿರುವ ಭದ್ರತಾ ಖಾತರಿ ದಾಖಲೆ ಶೇ 100ರಷ್ಟು ಸಿದ್ಧವಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಾಲುದಾರ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕುವ ದಿನಾಂಕ ನಿಗದಿ ಮಾಡಲು ಉಕ್ರೇನ್ ಕಾಯುತ್ತಿದೆ. ಬಳಿಕ ದಾಖಲೆಯನ್ನು ಅಮೆರಿಕ ಸಂಸತ್ತು ಮತ್ತು ಉಕ್ರೇನ್ ಸಂಸತ್ತಿನಲ್ಲಿ ಮಂಡಿಸಲಾಗುವುದು' ಎಂದು ತಿಳಿಸಿದ್ದಾರೆ.

'ಅಬುಧಾಬಿಯಲ್ಲಿ ನಡೆದ ಮಾತುಕತೆಯಲ್ಲಿ ಮೂರು ದೇಶಗಳ ರಾಜತಾಂತ್ರಿಕ ಅಧಿಕಾರಿಗಳು ಮಾತ್ರವಲ್ಲದೆ ಸೇನಾ ಪ್ರತಿನಿಧಿಗಳು ಸಹ ಭಾಗಿಯಾಗಿದ್ದರು. ರಷ್ಯಾ–ಉಕ್ರೇನ್ ಸಂಘರ್ಷ ಅಂತ್ಯದ ಉದ್ದೇಶದಿಂದ ಶುಕ್ರವಾರ ಆರಂಭವಾದ ಮಾತುಕತೆಯು ಶನಿವಾರ ಮುಕ್ತಾಯವಾಯಿತು' ಎಂದು ಅವರು ಹೇಳಿದ್ದಾರೆ. ಮುಂದಿನ ಹಂತದ ಮಾತುಕತೆಗಾಗಿ ನಿಯೋಗವು ಫೆಬ್ರುವರಿ 1ರಂದು ಮತ್ತೆ ಭೇಟಿಯಾಗಲಿದೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಭಾರತದಲ್ಲಿ ಡ್ರೀಮ್‌ಲೈನರ್‌ಗೆ ಉಜ್ವಲ ಭವಿಷ್ಯ: ಸಲೀಲ್ ಗುಪ್ತೆ

ನವದೆಹಲಿ (ಪಿಟಿಐ): 'ಭಾರತದ ಮಾರುಕಟ್ಟೆಯಲ್ಲಿ ಅಮೆರಿಕದ ವಿಮಾನ ತಯಾರಕ ಕಂಪನಿ ಬೋಯಿಂಗ್‌ನ ಡ್ರೀಮ್‌ಲೈನರ್ ಮಾದರಿಗೆ ಉಜ್ವಲ ಭವಿಷ್ಯವಿದೆ' ಎಂದು ಬೋಯಿಂಗ್ ಇಂಡಿಯಾ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷ ಸಲೀಲ್ ಗುಪ್ತೆ ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಕಂಪನಿಯ ಡ್ರೀಮ್‌ಲೈನರ್ ಮಾದರಿಗೆ ಹೆಚ್ಚಿನ ಬೇಡಿಕೆ ಬರುವ ನಿರೀಕ್ಷೆ ಇದೆ. ಅಲ್ಲದೆ, ಕಂಪನಿಯು ಸುಸ್ಥಿರ ಬೆಳವಣಿಗೆ ಕಾಣಲಿದೆ ಎಂದು ಸಂದರ್ಶನದಲ್ಲಿ ತಿಳಿಸಿದ್ದಾರೆ.

ಡ್ರೀಮ್‌ಲೈನರ್ ಎಂದು ಕರೆಯಲಾಗುವ 'ಬೋಯಿಂಗ್ 787' ವಿಮಾನಗಳನ್ನು ಭಾರತದಲ್ಲಿ ಏರ್ ಇಂಡಿಯಾ ವಿಮಾನಯಾನ ಕಂಪನಿಯು ಬಳಕೆ ಮಾಡುತ್ತಿದೆ. ಏರ್ ಇಂಡಿಯಾ 33 ಡ್ರೀಮ್‌ಲೈನರ್ ವಿಮಾನಗಳನ್ನು ಹೊಂದಿದೆ. ಇಂಡಿಗೊ ಕೂಡ ಈ ಮಾದರಿಯ ಕೆಲವು ವಿಮಾನಗಳನ್ನು ಬಳಸುತ್ತಿದೆ.

ಕಳೆದ ವರ್ಷದ ಜೂನ್ 12ರಂದು ಅಹಮದಾಬಾದ್‌ನಿಂದ ಲಂಡನ್‌ಗೆ ಪ್ರಯಾಣಿಸುತ್ತಿದ್ದ ಏರ್‌ಇಂಡಿಯಾದ ಡ್ರೀಮ್‌ಲೈನರ್ ಅಪಘಾತಕ್ಕೆ ಒಳಗಾಗಿತ್ತು. 260 ಜನರು ಮೃತಪಟ್ಟಿದ್ದರು.

ಈ ವಿಮಾನ ಅಪಘಾತದ ಕುರಿತು ತನಿಖೆ ನಡೆಯುತ್ತಿದೆ. ಈ ಕಾರಣದಿಂದ ಬೋಯಿಂಗ್‌ಗೆ 2025 ಸವಾಲಿನ ವರ್ಷ ಎಂದು ಗುಪ್ತೆ ಹೇಳಿದ್ದಾರೆ.

ಅಮೆರಿಕದಲ್ಲಿ 10,000 ವಿಮಾನ ಹಾರಾಟ ರದ್ದು

ನ್ಯಾಶ್‌ವಿಲ್ಲೆ (ಎಪಿ): ಅಮೆರಿಕದಲ್ಲಿ ಭಾರಿ ಹಿಮಪಾತ ಹಾಗೂ ಶೀತಗಾಳಿಯಿಂದಾಗಿ ಹಲವಾರು ವಿಮಾನಗಳ ಹಾರಾಟವನ್ನು ಭಾನುವಾರ ರದ್ದುಗೊಳಿಸಲಾಯಿತು. ಅನೇಕ ವಿಮಾನಗಳ ಹಾರಾಟದ ಸಮಯದಲ್ಲಿ ವ್ಯತ್ಯಯ ಉಂಟಾಯಿತು.

ಸುಮಾರು 10,800 ವಿಮಾನಗಳ ಹಾರಾಟವನ್ನು ಭಾನುವಾರ ರದ್ದುಗೊಳಿಸಲಾಯಿತು ಎಂದು 'ಫ್ಲೈಟ್‌ಅವೇರ್' ಸಂಸ್ಥೆ ಹೇಳಿದೆ. ಅಂದು ನಿಗದಿಯಾಗಿದ್ದ ತಮ್ಮ ನೂರಾರು ವಿಮಾನಗಳನ್ನು ವಿಮಾನಯಾನ ಸಂಸ್ಥೆಗಳು ರದ್ದುಗೊಳಿಸಿದವು. ಇದರಿಂದ ಪ್ರಯಾಣಿಕರಿಗೆ ತೊಂದರೆಯುಂಟಾಯಿತು.

ಪ್ರಮುಖ ನಗರಗಳಲ್ಲಿರುವ ಹೆಚ್ಚಿನ ಜನನಿಬಿಡ ವಿಮಾನ ನಿಲ್ದಾಣಗಳಲ್ಲಿ ಅಧಿಕ ಸಂಖ್ಯೆಯ ವಿಮಾನಗಳ ಸಂಚಾರ ರದ್ದುಗೊಳಿಸಲಾಯಿತು. ನ್ಯೂಯಾರ್ಕ್‌ನ ಲಾಗಾರ್ಡಿಯಾ ವಿಮಾನ ನಿಲ್ದಾಣವನ್ನು ಮಧ್ಯಾಹ್ನದ ಬಳಿಕ ಬಂದ್ ಮಾಡಲಾಗಿತ್ತು ಎಂದು ವಿಮಾನಯಾನ ಆಡಳಿತವು ತಿಳಿಸಿತು.

ಲಾಗಾರ್ಡಿಯ ವಿಮಾನ ನಿಲ್ದಾಣದಲ್ಲಿ 433, ಜಾನ್. ಎಫ್. ಕೆನಡಿಯಲ್ಲಿ 460 ಹಾಗೂ ಫಿಲಾಡೆಲ್ಫಿಯಾ ನಿಲ್ದಾಣದಲ್ಲಿ 326 ವಿಮಾನಗಳನ್ನು ರದ್ದುಗೊಳಿಸಲಾಯಿತು.

ಬ್ಯಾಂಕ್ ನೌಕರರ ಮುಷ್ಕರ ಇಂದು

ಒಂದನೇ ಪುಟದಿಂದ...

ಯುಪಿಐ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಸೇರಿದಂತೆ ಡಿಜಿಟಲ್ ಮಾಧ್ಯಮದ ಮೂಲಕ ಲಭ್ಯವಾಗುವ ಬ್ಯಾಂಕಿಂಗ್ ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ಆದರೆ, ಎಟಿಎಂಗಳಲ್ಲಿ ನಗದು ಲಭ್ಯತೆ ಕೆಲವೆಡೆ ಇಲ್ಲವಾಗಬಹುದು.

ಎಸ್‌ಬಿಐ ಸೇರಿದಂತೆ ಸರ್ಕಾರಿ ಸ್ವಾಮ್ಯದ ಹಲವು ಬ್ಯಾಂಕ್‌ಗಳು ಮುಷ್ಕರದ ಕುರಿತು ಷೇರು ವಿನಿಮಯ ಕೇಂದ್ರಗಳಿಗೆ ಮಾಹಿತಿ ನೀಡಿವೆ.

'ಎಲ್ಲ ಶನಿವಾರಗಳನ್ನು ರಜಾದಿನಗಳನ್ನಾಗಿ ಘೋಷಿಸಬೇಕು ಎಂಬ ನಿರ್ಧಾರಕ್ಕೆ ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್ (ಐಬಿಎ) ಮತ್ತು ಯುಎಫ್‌ಬಿಯು ನಡುವೆ 2024ರ ಮಾರ್ಚ್‌ನಲ್ಲಿ ನಡೆದ ವೇತನ ಪರಿಷ್ಕರಣೆ ಸಂದರ್ಭದಲ್ಲಿ ಒಪ್ಪಿಗೆ ನೀಡಲಾಗಿತ್ತು. ಆದರೆ, ಸರ್ಕಾರವು ನಮ್ಮ ಈ ಬೇಡಿಕೆಗೆ ಸ್ಪಂದಿಸುತ್ತಿಲ್ಲ' ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ (ಎಐಬಿಒಸಿ) ಪ್ರಧಾನ ಕಾರ್ಯದರ್ಶಿ ರೂಪಮ್ ರಾಯ್ ಹೇಳಿದ್ದಾರೆ.

'ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ 40 ನಿಮಿಷ ಹೆಚ್ಚುವರಿ ಕೆಲಸ ಮಾಡಲು ಒಪ್ಪಿಕೊಂಡಿದ್ದೇವೆ. ಪ್ರತಿ ಶನಿವಾರ ರಜೆ ನೀಡುವುದರಿಂದ ಕೆಲಸದ ದಿನಗಳು ನಷ್ಟವಾಗುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಮುಖ್ಯ ಕಾರ್ಮಿಕ ಆಯುಕ್ತರ ಜೊತೆ ನಡೆದ ಸಭೆಯಲ್ಲಿ ನಮ್ಮ ಬೇಡಿಕೆ ವಿಚಾರವಾಗಿ ಯಾವುದೇ ಭರವಸೆ ಸಿಗಲಿಲ್ಲ. ಹೀಗಾಗಿ ಮುಷ್ಕರಕ್ಕೆ ಮುಂದಾಗುತ್ತಿದ್ದೇವೆ' ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ (ಎಐಬಿಇಎ) ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ಹೇಳಿದ್ದಾರೆ.

ಈಗಿರುವ ನಿಯಮಗಳ ಪ್ರಕಾರ ಪ್ರತಿ ತಿಂಗಳ ಎರಡನೆಯ ಹಾಗೂ ನಾಲ್ಕನೆಯ ಶನಿವಾರ ಬ್ಯಾಂಕ್‌ಗಳಿಗೆ ರಜೆ ಇದೆ.

- **ಈ ಬ್ಯಾಂಕ್‌ಗಳಲ್ಲಿ ಅಡಚಣೆ ಉಂಟಾಗಬಹುದು:** ಭಾರತೀಯ ಸ್ಟೇಟ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಕೆನರಾ ಬ್ಯಾಂಕ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕ್‌ಗಳು
- **ಈ ಬ್ಯಾಂಕ್‌ಗಳಲ್ಲಿ ಸೇವೆಗೆ ಧಕ್ಕೆ ಇಲ್ಲ:** ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಕರ್ಣಾಟಕ ಬ್ಯಾಂಕ್ ಸೇರಿದಂತೆ ಖಾಸಗಿ ವಲಯದ ಬ್ಯಾಂಕ್‌ಗಳು
- **ಈ ಸೇವೆಗಳಿಗೆ ತೊಂದರೆ ಆಗಬಹುದು:** ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ನ ಶಾಖೆಗಳಿಗೆ ಭೇಟಿ ನೀಡಿ ಪಡೆಯುವ ಸೇವೆಗಳಿಗೆ ಅಡ್ಡಿ ಆಗಬಹುದು. ಠೇವಣಿ, ಹಣ ಹಿಂಪಡೆಯುವಿಕೆ, ಚೆಕ್ ಕ್ಲಿಯರೆನ್ಸ್‌ನಂತ ಸೇವೆಗಳಿಗೆ ಸಮಸ್ಯೆ ಉಂಟಾಗಬಹುದು. ಎಟಿಎಂನಲ್ಲಿ ನಗದು ಲಭ್ಯತೆಗೆ ಕೆಲವೆಡೆ ಸಮಸ್ಯೆ ಆಗಬಹುದು.
- **ಈ ಸೇವೆಗಳು ಎಂದಿನಂತೆ:** ಯುಪಿಐ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಸೇರಿದಂತೆ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ

ಗಾಜಾ ಸ್ಮಶಾನದಲ್ಲಿ ಕೊನೆಯ ಒತ್ತೆಯಾಳಿನ ಅವಶೇಷಗಳು ಪತ್ತೆ

ಇಸ್ರೇಲ್‌ನಿಂದ ಬೃಹತ್ ಕಾರ್ಯಾಚರಣೆ

ನಹಾರಿಯಾ, ಇಸ್ರೇಲ್ (ಎಪಿ): ಗಾಜಾದಲ್ಲಿ ಸಿಲುಕಿಕೊಂಡಿರುವ ಕೊನೆಯ ಒತ್ತೆಯಾಳಿನ ಕುರುಹು ಪತ್ತೆಹಚ್ಚುವ ನಿಟ್ಟಿನಲ್ಲಿ ಇಸ್ರೇಲ್ ಸೇನೆಯು ಭಾನುವಾರ ರಾತ್ರಿಯಿಂದಲೇ ದೊಡ್ಡ ಮಟ್ಟದ ಕಾರ್ಯಾಚರಣೆ ನಡೆಸಿದ್ದು, ಇದರಲ್ಲಿ ಯಶಸ್ವಿಯಾಗಿದೆ. ಮತ್ತೊಂದೆಡೆ, ಹಮಾಸ್ ಜೊತೆಗೆ ಮುಂದಿನ ಹಂತದ ಕದನ ವಿರಾಮ ಮಾರ್ಗ ಸುಗಮವಾಗಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೊತೆಗೆ ಅಮೆರಿಕದ ಉನ್ನತ ಮಟ್ಟದ ಅಧಿಕಾರಿಗಳು ಸಭೆ ನಡೆಸಿದ ಬೆನ್ನಲ್ಲೇ, ಈಜಿಪ್ಟ್‌ನೊಂದಿಗೆ ಸಂಪರ್ಕ ಕಲ್ಪಿಸುವ ಗಾಜಾ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಫಾ ಗಡಿ ತೆರೆಯುವ ಸಾಧ್ಯತೆ ಕುರಿತಂತೆ ಇಸ್ರೇಲ್‌ನ ಸಚಿವ ಸಂಪುಟವು ಚರ್ಚೆ ನಡೆಸಿದೆ.

ಗಾಜಾದ ಪಾದಯಾತ್ರಿಗಳಿಗೆ ಮಾತ್ರ ರಫಾ ಗಡಿ ಭಾಗ ತೆರೆಯಲು ಇಸ್ರೇಲ್ ಒಪ್ಪಿಗೆ ಸೂಚಿಸಿದೆ.

ಮೊದಲ ಹಂತದ ಕದನ ವಿರಾಮದ ಪ್ರಕಾರ, ಅಕ್ಟೋಬರ್ 10ರ ಒಳಗಾಗಿ ಇಸ್ರೇಲ್‌ನ ಎಲ್ಲ ಒತ್ತೆಯಾಳುಗಳನ್ನು ಜೀವಂತ ಅಥವಾ ಶವವಾಗಿ ಹಸ್ತಾಂತರಿಸಬೇಕು ಎಂದು ಹಮಾಸ್ ಜೊತೆಗೆ ಒಪ್ಪಂದವಾಗಿತ್ತು. ಆದರೆ, ಬಾಕಿ ಉಳಿದ ಒತ್ತೆಯಾಳು ರಣ್ ಗ್ವಿಲಿ ಕುರಿತಂತೆ ಯಾವುದೇ ಮಾಹಿತಿ ಸಿಕ್ಕಿರಲಿಲ್ಲ. ಅವರ ಪತ್ತೆಗಾಗಿ ಇಸ್ರೇಲ್ ಸೇನೆಯೂ ಕಾರ್ಯಾಚರಣೆ ನಡೆಸಿದ್ದು, ತನ್ನ ಹಿಡಿತದಲ್ಲಿರುವ ಉತ್ತರ ಗಾಜಾದ ಸ್ಮಶಾನದಲ್ಲಿ ಹುಡುಕಾಟ ಮುಂದುವರಿಸಿತ್ತು.

ದಕ್ಷಿಣ ಗಾಜಾ ಪಟ್ಟಿಯಲ್ಲಿರುವ ರಫಾ ಗಡಿ ಪ್ರದೇಶ

ರಣ್ ಗ್ವಿಲಿಯನ್ನು ಶುಜಯ್ಯಾ–ದರಾಜ್–ತುಫಾ ಪ್ರದೇಶದಲ್ಲಿರುವ ಸ್ಮಶಾನದಲ್ಲಿ ಹೂತುಹಾಕಲಾಗಿದೆ ಎಂದು ಹಮಾಸ್ ತಿಳಿಸಿತ್ತು. ಇದರಂತೆ, ದಂತ ತಜ್ಞರನ್ನು ಒಳಗೊಂಡ ವಿಶೇಷ ತಂಡವು ಸ್ಥಳದಲ್ಲಿ ಶೋಧಕಾರ್ಯ ನಡೆಸಿದ್ದು, ಅವಶೇಷಗಳು ದೊರೆತಿವೆ. ಹೀಗಾಗಿ, ಹಮಾಸ್ ವಶದಲ್ಲಿದ್ದ ಎಲ್ಲ ಒತ್ತೆಯಾಳುಗಳ ಮಾಹಿತಿ ಇಸ್ರೇಲ್‌ಗೆ ಸಿಕ್ಕಿದ್ದು, ಎರಡನೇ ಹಂತದ ಕದನ ವಿರಾಮ ಮಾತುಕತೆ ನಡೆಯಲಿದೆ.

ಇದರ ಹೊರತಾಗಿಯೂ ಇಸ್ರೇಲ್ ಮೇಲೆ ಅಮೆರಿಕವು ಹೆಚ್ಚಿನ ಒತ್ತಡ ಹೇರುವುದನ್ನು ಮುಂದುವರಿಸಿದ್ದು, ಎರಡನೇ ಹಂತದ ಕದನ ವಿರಾಮವು ಈಗಾಗಲೇ ಜಾರಿಯಲ್ಲಿದೆ ಎಂದು ತಿಳಿಸಿದೆ.

ವಿಶ್ವಸಂಸ್ಥೆ ಕಚೇರಿಗೆ ಬೆಂಕಿ: ಪೂರ್ವ ಜೆರುಸಲೇಂನ ವಿಶ್ವಸಂಸ್ಥೆಯ ಪ್ಯಾಲೆಸ್ಟೀನ್‌ನ ನಿರಾಶ್ರಿತ ಕೇಂದ್ರದ ಆವರಣ ಗೋಡೆಯನ್ನು ಇಸ್ರೇಲ್ ಸೇನೆಯು ಹೊಡೆದುರುಳಿಸಿದ ಮರುದಿನವೇ ಕಚೇರಿಗೆ ಬೆಂಕಿ ಹಚ್ಚಲಾಗಿದೆ. ಯಾವ ಕಾರಣದಿಂದ ಬೆಂಕಿ ಹಚ್ಚಲಾಯಿತು ಎಂದು ತಿಳಿದುಬಂದಿಲ್ಲ. ಬೆಂಕಿ ಹರಡುವುದನ್ನು ತಡೆಯುವ ನಿಟ್ಟಿನಲ್ಲಿ ಅಗ್ನಿಶಾಮಕ ಪಡೆಯನ್ನು ಕಳುಹಿಸಿಕೊಡಲಾಗಿತ್ತು ಎಂದು ಇಸ್ರೇಲ್‌ನ ಅಗ್ನಿಶಾಮಕ ಪಡೆಯು ತಿಳಿಸಿದೆ.

ಮುಖ್ಯಾಂಶಗಳು

- ಒತ್ತೆಯಾಳು ರಣ್ ಗ್ವಿಲಿ ಹುಡುಕಾಟ ಪೂರ್ಣ
- ಪಾದಯಾತ್ರಿಗಳಿಗೆ ರಫಾ ಗಡಿ ತೆರೆಯಲು ಇಸ್ರೇಲ್ ಸಮ್ಮತಿ

ವಿಮಾನ ಹಾರಾಟ ಸ್ಥಗಿತ

ಜೆರುಸಲೇಂ (ರಾಯಿಟರ್ಸ್): ದೇಶದಲ್ಲಿ ಅನಿಶ್ಚಿತತೆ ಮುಂದುವರಿದಿರುವ ಬೆನ್ನಲ್ಲೇ, ಇಸ್ರೇಲ್‌ನ ವಿಮಾನಯಾನ ಸಂಸ್ಥೆಗಳಾದ ಎಲ್–ಅಲ್, ಇಸ್ರ್ ಏರ್ ಹಾಗೂ ಅರ್ಕಿಯಾ ವಿಮಾನಯಾನ ಸಂಸ್ಥೆಯು ಸೋಮವಾರ ತನ್ನ ವಿಮಾನ ಹಾರಾಟವನ್ನು ರದ್ದುಗೊಳಿಸಿವೆ.

ಇರಾನ್ ಮೇಲೆ ಯಾವುದೇ ಸೇನಾ ಕಾರ್ಯಾಚರಣೆ ನಡೆದರೆ, ಇಸ್ರೇಲ್ ಮೇಲೆ ಪ್ರತೀಕಾರದ ದಾಳಿ ನಡೆಸುವ ಸಾಧ್ಯತೆ ಇರುವುದರಿಂದ ಏರ್‌ಲೈನ್ಸ್‌ಗಳು ಈ ಕ್ರಮ ತೆಗೆದುಕೊಂಡಿದೆ.

ಟಿಕೆಟ್ ರದ್ದುಗೊಳಿಸಿದ ಗ್ರಾಹಕರಿಗೆ ಮರು ಪಾವತಿ ಹಾಗೂ ಇತರೆ ದಿನಗಳಲ್ಲಿ ಟಿಕೆಟ್ ಖರೀದಿಗೂ ಅವಕಾಶ ನೀಡಿದೆ.

ಕಳೆದ ವರ್ಷ ಜೂನ್ ತಿಂಗಳಲ್ಲಿ ಇಸ್ರೇಲ್ ಹಾಗೂ ಇರಾನ್ ನಡುವೆ ನಡೆದ ಸಂಘರ್ಷದ ವೇಳೆ 12 ದಿನಗಳ ಕಾಲ ಇಸ್ರೇಲ್ ವಾಯುಪ್ರದೇಶವನ್ನು ಬಂದ್ ಮಾಡಲಾಗಿತ್ತು.

ಚಿತ್ರ: ಡಿ.ಪ್ರಸನ್ನ

ಚೌಕಿದಾರ್ ಜೊತೆಯಾದ ಶಿವರಾಜ್‌ಕುಮಾರ್

‘ರಥಾವರ’ ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶಿಸಿರುವ, ಪೃಥ್ವಿ ಅಂಬಾರ್ ಹಾಗೂ ಸಾಯಿಕುಮಾರ್ ಮುಖ್ಯ-ಭೂಮಿಕೆಯಲ್ಲಿ ನಟಿಸಿರುವ ‘ಚೌಕಿದಾರ್’ ಚಿತ್ರ ಜ.30ರಂದು ತೆರೆಕಾಣುತ್ತಿದೆ.

ಇತ್ತೀಚೆಗೆ ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮ ನಡೆದಿದ್ದು, ನಟ ಶಿವರಾಜ್‌ಕುಮಾರ್ ಚಿತ್ರತಂಡದ ಜೊತೆಯಾದರು. ಒಬ್ಬನೇ ಮಗನನ್ನು ಮುದ್ದಾಗಿ ಬೆಳೆಸುವ ಅಪ್ಪನ ಕಥೆ ಸಿನಿಮಾದ-ಲ್ಲಿದ್ದು, ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ–ಮಗನಾಗಿ ನಟಿಸಿದ್ದಾರೆ. ಪೃಥ್ವಿಗೆ ಧನ್ಯಾ ರಾಮ್ ಕುಮಾರ್ ಜೋಡಿಯಾಗಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, ‘ಶಿಕ್ಷಣ ಕ್ಷೇತ್ರದಲ್ಲಿರುವವರು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸಿನಿಮಾವೂ ಒಂದು ಶಿಕ್ಷಣ ಇದ್ದಂತೆ. ನಾನು ಚಂದ್ರಶೇಖರ್ ಬಂಡಿಯಪ್ಪ ಜೊತೆ ಎರಡು ಸಿನಿಮಾ ಮಾಡಬೇಕಿತ್ತು. ಆದರೆ ಅದು ಟೇಕ್‌ಆಫ್ ಆಗಲಿಲ್ಲ. ಭಾವನಾತ್ಮಕ ಕಥೆಯಲ್ಲಿ ಅವರದ್ದು ಎತ್ತಿದ ಕೈ. ಖಂಡಿತಾ ಅವರ ಜೊತೆ ಸಿನಿಮಾ ಮಾಡುತ್ತೇನೆ. ಸಾಯಿಕುಮಾರ್ ಅವರು ಸ್ನೇಹಿತ ಎನ್ನುವುದಕ್ಕಿಂತ ನಮ್ಮ ಕುಟುಂಬದ ಸದಸ್ಯ. ಚಿತ್ರರಂಗದಲ್ಲಿ ಹೊಸಬರು ಬೆಳೆಯಬೇಕು. ನಾನು ಚಿತ್ರರಂಗಕ್ಕೆ ಬಂದು ನಲವತ್ತು ವರ್ಷವಾಯಿತು. ಹೊಸಬರಿಗೆ ಸ್ಫೂರ್ತಿಯಾಗಲಿ ಎಂದು ನಾವಿನ್ನಿದ್ದೇವಷ್ಟೆ. ಹೊಸಬರೇ ಇನ್ನು ಚಿತ್ರರಂಗವನ್ನು ಮುನ್ನಡೆಸಬೇಕು. ಧನ್ಯಾಳನ್ನು ಚಿಕ್ಕವಳಾಗಿದ್ದಾಗಲಿಂದ ನೋಡಿಕೊಂಡು ಬಂದಿದ್ದೇನೆ. ಈಗಿನ ಜೆನ್‌ಜಿ ಪೀಳಿಗೆ ಗ್ಲ್ಯಾಮರ್ ರೋಲ್‌ಗಳತ್ತ ವಾಲುತ್ತಿರುವಾಗ ಧನ್ಯಾ ಭಿನ್ನವಾದ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾಳೆ. ಎಲ್ಲವೂ ತಾತನ ಆಶೀರ್ವಾದದಂತೆ ಕಾಣುತ್ತದೆ’ ಎಂದರು.

ಸಾಯಿಕುಮಾರ್

‘ನಾನು ಅಮ್ಮನ ಗರ್ಭದಲ್ಲಿರುವಾಗಲೇ ಚಿತ್ರರಂಗದ ನಂಟು ಬೆಳೆಯಿತು ಎನ್ನಬಹುದು. ಅಮ್ಮ–ಅಪ್ಪ ಇಬ್ಬರೂ ಕಲಾವಿದರು. ಅಮ್ಮ ರಾಜ್‌ಕುಮಾರ್ ಅವರ ಜೊತೆಯೂ ನಟಿಸಿದ್ದರು. ಅಪ್ಪ ರಾಜ್‌ಕುಮಾರ್ ಅವರಿಗೆ ತೆಲುಗಿನಲ್ಲಿ ಡಬ್ಬಿಂಗ್ ಮಾಡಿದ್ದರು. ನಾನು ಇಲ್ಲಿಯವರೆಗೂ ಸಾವಿರಕ್ಕೂ ಅಧಿಕ ಸಿನಿಮಾಗಳಿಗೆ ಡಬ್ ಮಾಡಿದ್ದೇನೆ. ಇದಕ್ಕೆ ‘ಬಬ್ರುವಾಹನ’ ಸಿನಿಮಾವೇ ಸ್ಫೂರ್ತಿ. ನಾನು, ರವಿಶಂಕರ್ ಹಾಗೂ ಅಯ್ಯಪ್ಪ ಇರುವುದಕ್ಕೆ ಕರ್ನಾಟಕವೇ ಕಾರಣ. ನಾನು ಶಿವರಾಜ್‌ಕುಮಾರ್ ಅವರು ‘ಮುದ್ದಿನ ಕಣ್ಮಣಿ’, ‘ಎಕೆ 47’ನಲ್ಲಿ ನಟಿಸಿದ್ದೆವು. ‘ಎಕೆ 47’ನಲ್ಲಿ ಒಂದು ಸಾಹಸ ದೃಶ್ಯಕ್ಕೆ ಶಿವರಾಜ್‌ಕುಮಾರ್ ಅವರು ನನಗೆ ಡ್ಯೂಪ್ ಆಗಿದ್ದರು. ಇದೀಗ ‘ಬೇಲ್’ ಎನ್ನುವ ಸಿನಿಮಾದಲ್ಲಿ ಅವರ ಜೊತೆ ನಟಿಸುತ್ತಿದ್ದೇನೆ. ಶಿವಣ್ಣ ಅವರ ಎನರ್ಜಿಗೆ ಸಾಟಿ ಇಲ್ಲ. ಎಲ್ಲರ ಯಶಸ್ಸನ್ನು ಬಯಸುವವರು ಶಿವರಾಜ್‌ಕುಮಾರ್. ನನಗೆ ರಾಜ್‌ಕುಮಾರ್ ಅವರ ಜೊತೆ ನಟಿಸುವ ಅವಕಾಶ ಸಿಗಲಿಲ್ಲ. ಆದರೆ ಅವರ ಮಕ್ಕಳು, ಮೊಮ್ಮಕ್ಕಳ ಜೊತೆ ನಟಿಸುತ್ತಿದ್ದೇನೆ’ ಎಂದರು ಸಾಯಿಕುಮಾರ್.

‘ಚೈತ್ರದ ಪ್ರೇಮಾಂಜಲಿ’ ಚಿತ್ರದ ನಾಯಕಿ ಶ್ವೇತಾ, ಸುಧಾರಾಣಿ ಪ್ರಮುಖ ಪಾತ್ರದಲ್ಲಿದ್ದಾರೆ. ‘ಬಿಗ್‌ಬಾಸ್’ ಖ್ಯಾತಿಯ ಗಿಲ್ಲಿ ನಟ, ಧರ್ಮ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ವಿಎಸ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಲ್ಲಹಳ್ಳಿ ಚಂದ್ರಶೇಖರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ❖

ಶಿವರಾಜ್‌ಕುಮಾರ್

ಸರ್ವೈವರ್ ಟೀಸರ್ ಬಿಡುಗಡೆ

ನಟ ಶಿವರಾಜ್‌ಕುಮಾರ್ ಅವರು ಕ್ಯಾನ್ಸರ್ ಗೆದ್ದುಬಂದ ಕಥೆ ಸಾಕ್ಷ್ಯಚಿತ್ರವಾಗಿ ಬರಲಿದ್ದು, ಅದರ ಟೀಸರ್ ಸೋಮವಾರ(ಜ.26) ಬಿಡುಗಡೆಯಾಗಿದೆ.

2024ರ ಡಿಸೆಂಬರ್‌ನಲ್ಲಿ ಅಮೆರಿಕದ ಮಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಶಿವರಾಜ್‌ಕುಮಾರ್, 2025ರ ಜ.26ರಂದು ಮನೆಗೆ ಮರಳಿದ್ದರು. ಇದಾಗಿ ಒಂದು ವರ್ಷ ಉರುಳಿದೆ. ಈ ಸಂದರ್ಭದಲ್ಲಿ ಈ ಟೀಸರ್ ಬಿಡುಗಡೆಯಾಗಿದೆ. ‘ಗುಣಮುಖನಾಗಿ ನಿಮ್ಮೆಲ್ಲರ ಬಳಿ ಮರಳಿ ಬಂದ ದಿನಕ್ಕೆ ಒಂದು ವರುಷ. ನಿಮ್ಮ ಪ್ರೀತಿ ಹಾರೈಕೆಗೆ ನಾನು ಸದಾ ಋಣಿ. ಹೋಗುವಾಗ ನಿಮ್ಮ ಹಾರೈಕೆಗಳನ್ನು ಹೊತ್ತು, ಅಲ್ಲಿದ್ದಾಗ ನಿಮ್ಮ ಪ್ರಾರ್ಥನೆಗಳನ್ನು ನೆನೆದು, ಮರಳಿ ಬಂದಾಗ ನಿಮ್ಮ ನಗುವಿನಲ್ಲಿ ಮೆರೆದು, ನಿಮ್ಮೆಲ್ಲರೊಂದಿಗೆ ನಾನು ಕೂಡ ಗೆದ್ದು ಬಂದು ಹೇಳಲು ಮುಂದಾಗಿರುವ ಕಥೆ ಇದು’ ಎಂದು ಶಿವರಾಜ್‌ಕುಮಾರ್ ‘ಎಕ್ಸ್’ನಲ್ಲಿ ಸಾಕ್ಷ್ಯಚಿತ್ರದ ಬಗ್ಗೆ ಹೇಳಿದ್ದಾರೆ.

ಸಾಕ್ಷ್ಯಚಿತ್ರವನ್ನು ಪ್ರದೀಪ್ ಕೆ.ಶಾಸ್ತ್ರಿ ನಿರ್ದೇಶಿಸಿದ್ದು, ಗೀತಾ ಶಿವರಾಜ್‌ಕುಮಾರ್ ಅವರು ನಿರ್ಮಾಣ ಮಾಡಿದ್ದಾರೆ. 1986ರಲ್ಲಿ ‘ಆನಂದ್’ ಸಿನಿಮಾ ಮೂಲಕ ಚಂದನವನದ ಪಯಣ ಆರಂಭಿಸಿದ್ದ ನಟ ಶಿವರಾಜ್‌ಕುಮಾರ್ ಅವರು ಸಿನಿಪಯಣದಲ್ಲಿ ಇದೀಗ 40 ವರ್ಷ ಪೂರೈಸಿದ್ದಾರೆ. ❖



ವಿಜಯ ರಾಘವೇಂದ್ರ

ಸೀತಾರಾಮ್‌ಗೆ ಪವನ್ ಒಡೆಯರ್ ಸಾಥ್

ವಿಜಯ ರಾಘವೇಂದ್ರ ನಟನೆಯ ಹೊಸ ಸಿನಿಮಾ ‘ಸೆಕೆಂಡ್ ಕೇಸ್ ಆಫ್ ಸೀತಾರಾಮ್’ ಅನ್ನು ನಿರ್ದೇಶಕ ಪವನ್ ಒಡೆಯರ್ ಪ್ರಸ್ತುತಪಡಿಸಲಿದ್ದಾರೆ.

2021ರಲ್ಲಿ ತೆರೆಕಂಡ ವಿಜಯ ರಾಘವೇಂದ್ರ ನಟನೆಯ ‘ಸೀತಾರಾಮ್ ಬಿನೋಯ್’ ಸಿನಿಮಾದ ಸೀಕ್ವೆಲ್ ಇದಾಗಿದೆ. ಇದರಲ್ಲಿ ಪೊಲೀಸ್ ಅಧಿಕಾರಿಯಾಗಿ ಮಿಂಚಿದ್ದ ವಿಜಯ ರಾಘವೇಂದ್ರ ಬಳಿಕ ‘ಕೇಸ್ ಆಫ್ ಕೊಂಡಾಣ’ದಲ್ಲಿ ನಟಿಸಿದ್ದರು. ಇದನ್ನೂ ದೇವಿಪ್ರಸಾದ್ ಶೆಟ್ಟಿ ನಿರ್ದೇಶಿಸಿದ್ದರು. ಇದೀಗ ಮತ್ತೊಮ್ಮೆ ದೇವಿ ಪ್ರಸಾದ್ ಶೆಟ್ಟಿ ಜೊತೆ ಸಿನಿಮಾ ಮಾಡಿರುವ ವಿಜಯ್, ಪೊಲೀಸ್ ಅಧಿಕಾರಿಯಾಗಿ ಮತ್ತೊಂದು ಪ್ರಕರಣ ಕೈಗೆತ್ತಿಕೊಂಡಿದ್ದಾರೆ. ದೇವಿಪ್ರಸಾದ್ ಅವರೇ ಈ ಸಿನಿಮಾದ ಕಥೆ ಬರೆದಿದ್ದು, ಸಾತ್ವಿಕ್ ಹೆಬ್ಬಾರ್ ಜೊತೆ ನಿರ್ಮಾಣದಲ್ಲೂ ಕೈಜೋಡಿಸಿದ್ದಾರೆ. ಅರವಿಂದ್ ಶೆಟ್ಟಿ ಸಹ ನಿರ್ಮಾಪಕರಾಗಿದ್ದಾರೆ.

ಸೀಕ್ವೆಲ್ ಸಿನಿಮಾ ನೋಡಿ ಇಷ್ಟಪಟ್ಟಿರುವ ಪವನ್, ಈ ಸಿನಿಮಾ ಪ್ರೇಕ್ಷಕರಿಗೆ ಥ್ರಿಲ್ ನೀಡಲಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಿನಿಮಾಗೆ ಹೇಮಂತ್ ಆಚಾರ್ ಛಾಯಾಚಿತ್ರಗ್ರಹಣ, ನವನೀತ್ ಶ್ಯಾಮ್ ಸಂಗೀತ ನಿರ್ದೇಶನ, ಶಶಾಂಕ್ ನಾರಾಯಣ್ ಸಂಕಲನ, ಭವಾನಿ ಶಂಕರ್ ಕಲಾ ನಿರ್ದೇಶನವಿದೆ. ❖

ಮನಸ್ಸಿನ ಪಯಣ ‘ಸೀತಾ ಪಯಣ’

ಐಶ್ವರ್ಯ, ನಿರಂಜನ್

ನಟ ಅರ್ಜುನ್ ಸರ್ಜಾ ನಿರ್ದೇಶನದ ‘ಸೀತಾ ಪಯಣ’ ಫೆ.14ರಂದು ಬಿಡುಗಡೆಯಾಗುತ್ತಿದೆ. ‘ಸೀತಾ ಪಯಣ ಒಂದು ವ್ಯಕ್ತಿಯ ಪಯಣವಲ್ಲ, ಇದೊಂದು ಮನಸ್ಸಿನ ಪಯಣ’ ಎಂದಿದ್ದಾರೆ ಅರ್ಜುನ್ ಸರ್ಜಾ.

ಶ್ರೀ ರಾಮ್ ಫಿಲಂಸ್ ಇಂಟರ್‌ನ್ಯಾಷನಲ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಸಿನಿಮಾದಲ್ಲಿ ನಿರಂಜನ್ ಹಾಗೂ ಐಶ್ವರ್ಯ ಅರ್ಜುನ್ ಜೋಡಿಯಾಗಿ ನಟಿಸಿದ್ದಾರೆ. ಸಿನಿಮಾಗೆ ಅರ್ಜುನ್ ಸರ್ಜಾ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ.

‘ಇದು ನಾನು ಕನ್ನಡದಲ್ಲಿ ನಿರ್ದೇಶಿಸಿರುವ ಎರಡನೇ ಸಿನಿಮಾ. ಈವರೆಗೂ ಸುಮಾರು ಹದಿನೈದು ಚಿತ್ರಗಳ ನಿರ್ದೇಶನ ಮಾಡಿದ್ದೇನೆ. ‘ಸೀತಾ ಪಯಣ’ದ ಕಥೆಯನ್ನು ಹದಿಮೂರು ವರ್ಷಗಳ ಹಿಂದೆಯೇ ಸಿದ್ಧಮಾಡಿಕೊಂಡಿದ್ದೆ. ಯಾವಾಗ ಇದನ್ನು ತೆರೆಗೆ ತರುವುದು ಎಂದು ಕಾಯುತ್ತಿದ್ದೆ. ಈಗ ಆ ಕಾಲ ಬಂದಿದೆ. ನನ್ನ ಮಗಳು ಐಶ್ವರ್ಯ ನಾಯಕಿಯಾಗಿ ನಟಿಸಿದ್ದಾಳೆ. ಪ್ರಕಾಶ್ ರಾಜ್, ಸತ್ಯರಾಜ್, ಕೋವೈ ಸರಳ ಅವರಂತಹ ಅನುಭವಿ ಕಲಾವಿದರಿದ್ದಾರೆ. ನಾನು ಕೂಡ ಪಾತ್ರವೊಂದಕ್ಕೆ ಬಣ್ಣಹಚ್ಚಿದ್ದು, ಧ್ರುವ ಸರ್ಜಾ ಅವರೂ ವಿಶೇಷ ಪಾತ್ರವೊಂದರಲ್ಲಿದ್ದಾರೆ. ಧ್ರುವ ಅವರ ಅಭಿಮಾನಿಗಳಿಗೆ ಈ ಪಾತ್ರ ಮೆಚ್ಚುಗೆಯಾಗಲಿದೆ. ‘ಸೀತಾ ಪಯಣ’ ಇದು ಬರೀ ವ್ಯಕ್ತಿಯ ಪಯಣವಲ್ಲ. ಮನಸ್ಸಿನ ಪಯಣ, ನಾವು ತಿಳಿದುಕೊಳ್ಳಬೇಕಿರುವ ಮೌಲ್ಯಗಳ ಪಯಣ ಹಾಗೂ ಭಾವನೆಗಳ ಜೊತೆಗಿನ ಸುಂದರ ಪಯಣ. ಈ ಚಿತ್ರ ನೋಡಿದವರು ಚಿತ್ರಮಂದಿರದಿಂದ ಹೋಗುವಾಗ ಒಂದು ನಗುವಿನ ಜೊತೆ ಹೋಗುವುದು ಖಂಡಿತ. ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಚಿತ್ರವಾಗಿ ಬಿಡುಗಡೆಯಾಗಲಿದೆ’ ಎಂದರು ಅರ್ಜುನ್ ಸರ್ಜಾ.

ಚಿತ್ರಕ್ಕೆ ಅನೂಪ್ ರುಬೆನ್ಸ್ ಸಂಗೀತ ಸಂಯೋಜಿಸಿದ್ದು, ಬಾಲಮುರುಗನ್ ಛಾಯಾಚಿತ್ರಗ್ರಹಣ ಹಾಗೂ ಆಯೂಬ್ ಸಂಕಲನವಿದೆ. ❖

> ಅಪ್ಪ ಒಂದೊಳ್ಳೆಯ ಚಿತ್ರ ನಿರ್ದೇಶನ ಮಾಡಿದ್ದಾರೆ. ಎಲ್ಲರೂ ಕುಟುಂಬ ಸಮೇತ ನೋಡಬಹುದಾದ ಚಿತ್ರವಿದು. ಹಿರಿಯ ಕಲಾವಿದರ ಜೊತೆಗೆ ಅಭಿನಯಿಸಿದ ಖುಷಿಯಿದೆ. ಸಿನಿಮಾದ ಎರಡು ಹಾಡುಗಳು ಸದ್ಯದಲ್ಲೇ ಅನಾವರಣವಾಗಲಿದೆ.
>
> **ಐಶ್ವರ್ಯ ಅರ್ಜುನ್**, ನಟಿ

ಚುಟುಕೆ ಸುದ್ದಿ

‘ಜಿ ರಾಮ್ ಜಿ ಯಿಂದ ಬಡತನ ನಿರ್ಮೂಲನೆ ಸಾಧ್ಯವಿಲ್ಲ’

ಹೈದರಾಬಾದ್ (ಪಿಟಿಐ): ‘ನರೇಗಾದ ಬದಲಿಗೆ ಜಾರಿ ತಂದಿರುವ ವಿಬಿ ಜಿ ರಾಮ್ ಜಿ ಯೋಜನೆಗೆ ಕೇಂದ್ರ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಕಡಿತ ಮಾಡಿರುವುದರಿಂದ ಬಡ ರಾಜ್ಯಗಳು ಇನ್ನಷ್ಟು ಕಡಿಮೆ ಹಣ ಖರ್ಚು ಮಾಡುತ್ತವೆ. ಬಡತನ ನಿರ್ಮೂಲನೆಗೆ ಇದೇನು ಸಹಕಾರಿಯಾಗಿಲ್ಲ’ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅಭಿಜಿತ್ ಬ್ಯಾನರ್ಜಿ ಅಭಿಪ್ರಾಯಪಟ್ಟರು.

ಹೈದರಾಬಾದ್ ಸಾಹಿತ್ಯ ಉತ್ಸವದಲ್ಲಿ ಸೋಮವಾರ ಮಾತನಾಡಿದ ಅವರು, ‘ಕೇಂದ್ರವು ಕಡಿಮೆ ಅನುದಾನ ನೀಡುವುದು ನನ್ನ ಪಾಲಿಗೆ ಚಿಂತೆಗೀಡು ಮಾಡುವ ವಿಚಾರ. ಕೇಂದ್ರವೇ ಕಡಿಮೆ ಹಣ ನೀಡಿದರೆ, ಬಡ ರಾಜ್ಯಗಳು ಕಡಿಮೆ ಹಣವನ್ನೇ ಖರ್ಚು ಮಾಡುತ್ತವೆ ಎನ್ನುವುದು ಎಲ್ಲರಿಗೂ ತಿಳಿದ ಸತ್ಯ. ನರೇಗಾ ವಿಚಾರದಲ್ಲಿಯೂ ಇದೇ ಸಮಸ್ಯೆ ಇತ್ತು’ ಎಂದರು.

ಅತ್ಯಾಚಾರ: ನಟ ನದೀಮ್ ಖಾನ್ ಬಂಧನ

ಮುಂಬೈ (ಪಿಟಿಐ): ಮದುವೆಯಾಗುವುದಾಗಿ ನಂಬಿಸಿ, 10 ವರ್ಷಗಳಿಂದ ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ವೆಸಗಿದ ಆರೋಪದ ಮೇಲೆ ನಟ ನದೀಮ್ ಖಾನ್ ಅವರನ್ನು ಮುಂಬೈನಲ್ಲಿ ಬಂಧಿಸಲಾಗಿದೆ.

ನದೀಮ್ ಖಾನ್

‘41 ವರ್ಷದ ಮಹಿಳೆ ನೀಡಿದ ದೂರು ಆಧರಿಸಿ ‘ದುರಂಧರ್’ ಚಿತ್ರದ ನಟ ನದೀಮ್ ಅವರನ್ನು ಜನವರಿ 22ರಂದು ಬಂಧಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ‘ಮಾಲ್ವಾನಿಯಲ್ಲಿದ್ದ ಸಂತ್ರಸ್ತೆಯ ಮನೆ ಹಾಗೂ ವರ್ಸೋವಾದಲ್ಲಿರುವ ನಟನ ಮನೆಯಲ್ಲಿ ಹಲವು ಬಾರಿ ಅತ್ಯಾಚಾರ ವೆಸಗಲಾಗಿದೆ’ ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

ಮಣಿಪುರ: ಮನೆಗೆ ಬೆಂಕಿ ಹಚ್ಚಿದ ಶಂಕಿತ ಉಗ್ರರು

ಇಂಫಾಲ್ (ಪಿಟಿಐ): ಶಂಕಿತ ಉಗ್ರರು ಸೋಮವಾರ ಮಧ್ಯಾಹ್ನ ಇಲ್ಲಿನ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಹಲವು ಮನೆ ಹಾಗೂ ಫಾರ್ಮ್‌ಹೌಸ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. ಇದರಿಂದ ರಾಜ್ಯದಲ್ಲಿ ಮತ್ತೆ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಕುಕಿ ಸಮುದಾಯವು ಬಹುಸಂಖ್ಯಾತರಾಗಿರುವ ಕೆ.ಸೊಂಗುಲುಂಗ್ ಗ್ರಾಮದಲ್ಲಿ ಘಟನೆ ನಡೆದಿದೆ. ನಷ್ಟದ ಅಂದಾಜು ಇನ್ನಷ್ಟೇ ತಿಳಿಯಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಳಿಗೆ ಸಂಬಂಧಿಸಿದಂತೆ ಝೆಲಿಯಾಗ್ರೊಂಗ್ ಯುನೈಟೆಡ್ ಫ್ರಂಟ್ ಹೊಣೆ ಹೊತ್ತುಕೊಂಡಿದೆ.

‘ಅದಾನಿ ವಿರುದ್ಧ ತನಿಖೆಗೆ ವಿಳಂಬವೇಕೆ’

ಕೇಂದ್ರ ಇಂಧನ ಸಚಿವಾಲಯದ ಮಾಜಿ ಕಾರ್ಯದರ್ಶಿ ಶರ್ಮಾ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೇಂದ್ರ ಸಂಪುಟ ಕಾರ್ಯದರ್ಶಿಗೆ ಪತ್ರ
- ತನಿಖೆ ನಡೆಸದಿರುವ ಕುರಿತು ಸಂಶಯ
- ವಿದ್ಯುತ್ ಗ್ರಾಹಕರ ಮೇಲೆ ಹೊರೆಯ ಆತಂಕ

ಗೌತಮ್ ಅದಾನಿ

ಹೈದರಾಬಾದ್: ಸೌರ ವಿದ್ಯುತ್ ಗುತ್ತಿಗೆ ಪಡೆಯಲು ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣ-ದಲ್ಲಿ ಅದಾನಿ ಸಮೂಹದ ಗೌತಮ್ ಅದಾನಿ ವಿರುದ್ಧ ಸಮಗ್ರ ನ್ಯಾಯಾಂಗ ತನಿಖೆ ನಡೆಸಲು ಕೇಂದ್ರ ಸರ್ಕಾರ ಏಕೆ ವಿಳಂಬ ಮಾಡುತ್ತಿದೆ ಎಂದು ಕೇಂದ್ರ ಇಂಧನ ಸಚಿವಾಲಯದ ಮಾಜಿ ಕಾರ್ಯದರ್ಶಿಯೂ ಆದ ನಿವೃತ್ತ ಐಎಎಸ್ ಅಧಿಕಾರಿ ಇಎಎಸ್ ಶರ್ಮಾ ಪ್ರಶ್ನಿಸಿದ್ದಾರೆ.

ಲಂಚ ಪ್ರಕರಣದಲ್ಲಿ ಗೌತಮ್ ಅದಾನಿ ವಿರುದ್ಧ ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಜಾರಿಗೊಳಿಸಿರುವ ಸಮನ್ಸ್ ಅನ್ನು ಅದಾನಿ ಅವರಿಗೆ ತಲುಪಿಸಲು ಭಾರತದ ಕಾನೂನು ಸಚಿವಾಲಯ ನಿರಾಕರಿಸಿದೆ ಎಂಬ ವರದಿಗಳ ಬೆನ್ನಲ್ಲೆ ಅವರು ಈ ಕುರಿತು ಪ್ರತಿಕ್ರಿಯಿಸಿದ್ದಾರೆ.

ಈ ಸಂಬಂಧ ಕೇಂದ್ರ ಸಂಪುಟ ಕಾರ್ಯದರ್ಶಿ ಟಿ.ವಿ.ಸೋಮನಾಥನ್ ಅವರಿಗೆ ಪತ್ರ ಬರೆದಿರುವ ಅವರು, ಸರ್ಕಾರದ ಮೌನ ನಡೆಯನ್ನು ಪ್ರಶ್ನಿಸಿದ್ದಾರೆ. ‘ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನಿಖೆಗೆ ಅಗತ್ಯವಿರುವ ಪುರಾವೆಗಳನ್ನು ಪಡೆಯಲು ಅಮೆರಿಕದ ‘ಎಸ್‌ಇಸಿ’ ಅನ್ನು ಸಂಪರ್ಕಿಸಬಹುದಿತ್ತು. ಆದರೆ, ಅದು ಹಾಗೆ ಮಾಡಿಲ್ಲ. ಸಿಬಿಐ ಸಹ ವಿವರಗಳಿಗಾಗಿ ಅಮೆರಿಕದ ಎಫ್‌ಬಿಐ ಅನ್ನು ಸಂಪರ್ಕಿಸಬಹುದಿತ್ತು ಮತ್ತು ತನ್ನದೇ ಆದ ತನಿಖೆಯನ್ನೂ ಪ್ರಾರಂಭಿಸಬಹುದಿತ್ತು. ಆದರೆ ಅದೂ ಸಹ ಈ ಕಾರ್ಯ ಮಾಡಿಲ್ಲ’ ಎಂದು ಅವರು ದೂರಿದ್ದಾರೆ.

‘ಎನ್‌ಡಿಎ ಸರ್ಕಾರದ ಜತೆ ಸಂಬಂಧ ಹೊಂದಿರುವ ಯಾವುದೋ ಬಾಹ್ಯ ಸಂಸ್ಥೆಯು, ಈ ಕುರಿತು ತನಿಖೆಗಳು ನಡೆಯದಂತೆ ತಡೆಯುತ್ತಿದೆಯೇ?’ ಎಂದು ಅವರು ಪ್ರಶ್ನೆ ಮಾಡಿದ್ದಾರೆ.

‘ಅಮೆರಿಕದ ಎಸ್‌ಇಸಿ ಅಲ್ಲಿನ ನ್ಯಾಯಾಲಯದಲ್ಲಿ ಅದಾನಿ ಸಮೂಹದ ವಿರುದ್ಧ ದೋಷಾರೋಪಣೆ ಮಾಡಿದೆ. ಅದು ಯಾವ ಆಧಾರದ ಮೇಲೆ ಈ ಆರೋಪಗಳನ್ನು ಮಾಡಿದೆ ಎಂಬುದನ್ನು ತಿಳಿದುಕೊಳ್ಳುವುದು ಕೇಂದ್ರ ಸರ್ಕಾರಕ್ಕೆ ಮಹತ್ವ ಎನಿಸಿಲ್ಲವೇ? ಭಾರತದ ನೆಲದಲ್ಲಿ ನಡೆದಿರುವ ಈ ಭ್ರಷ್ಟಾಚಾರದ ಬಗ್ಗೆ ಎನ್‌ಡಿಎ ಸರ್ಕಾರ ಮತ್ತು ಅದರ ಅಧಿಕಾರಿ ವರ್ಗ ಚಿಂತಿತವಾಗಿಲ್ಲವೇ? ಆ ಸಮೂಹದ ಭ್ರಷ್ಟಾಚಾರದಿಂದ ಆಂಧ್ರ ಪ್ರದೇಶದ ಲಕ್ಷಾಂತರ ವಿದ್ಯುತ್ ಗ್ರಾಹಕರ ಮೇಲೇನಾದರೂ ಅಧಿಕ ಹೊರೆ ಬೀಳುತ್ತದೆಯೇ?’ ಎಂದೂ ಅವರು ಪತ್ರದಲ್ಲಿ ಕೇಳಿದ್ದಾರೆ.

ಗಣತಿ ಪ್ರಶ್ನೆ: ಕಾಂಗ್ರೆಸ್ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: 2027ರ ಜನಗಣತಿಯಲ್ಲಿ ಕೇಳಲಾಗುವ ಪ್ರಶ್ನೆಗಳಲ್ಲಿ ದೋಷಗಳಿವೆ ಎಂದು ಕಾಂಗ್ರೆಸ್ ಭಾನುವಾರ ದೂರಿದೆ.

ಜೈರಾಮ್ ರಮೇಶ್

ಇದೇ ವೇಳೆ, ಜಾತಿ ಗಣತಿ ನಡೆಸುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನಿಜವಾದ ಉದ್ದೇಶ ಮತ್ತು ಬದ್ಧತೆಯ ಕುರಿತೂ ಪ್ರಶ್ನಿಸಿದೆ.

ಗಣತಿ ಪ್ರಕ್ರಿಯೆಯ ವಿವರಗಳನ್ನು ಅಂತಿಮಗೊಳಿಸುವ ಮುನ್ನ ರಾಜಕೀಯ ಪಕ್ಷಗಳು, ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸಬೇಕು ಎಂದು ಅದು ಆಗ್ರಹಿಸಿದೆ.

ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಸಂದರ್ಭದಲ್ಲಿ ಕೇಳುವ ಪ್ರಶ್ನೆ ಸಂಖ್ಯೆ 12ರ ಬಗ್ಗೆ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ. ಮನೆಯ ಮುಖ್ಯಸ್ಥರು ಇತರೆ ಹಿಂದುಳಿದ ವರ್ಗ (ಒಬಿಸಿ) ಅಥವಾ ಸಾಮಾನ್ಯ ವರ್ಗಕ್ಕೆ ಸೇರಿದ್ದಾರೆಯೇ ಎಂದು ಕೇಳುವ ಬದಲಾಗಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ‘ಇತರೆ’ ವರ್ಗಗಳಿಗೆ ಸೇರಿದ್ದಾರೆಯೇ ಎಂದು ಕೇಳಲಾಗುತ್ತದೆ ಎಂದು ಅದು ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ‘ಜಾತಿ ಗಣತಿಯು 2027ರ ಗಣತಿಯ ಭಾಗ. ಆದರೆ ಪ್ರಶ್ನೆ ಸಂಖ್ಯೆ 12, ಮೋದಿ ಸರ್ಕಾರದ ನೈಜ ಉದ್ದೇಶ ಮತ್ತು ಬದ್ಧತೆಯ ಬಗ್ಗೆ ಗಂಭೀರ ಪ್ರಶ್ನೆ ಎತ್ತುತ್ತದೆ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಪಿಎಸಿಎಲ್‌ನ ₹1,986 ಕೋಟಿ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಚಂಡೀಗಢದ ಪರ್ಲ್ಸ್ ಆಗ್ರೋಟೆಕ್ ಕಾರ್ಪೊರೇಷನ್ ಲಿಮಿಟೆಡ್ (ಪಿಎಸಿಎಲ್) ಸಂಸ್ಥೆ ವಿರುದ್ಧದ ₹48,000 ಕೋಟಿ ವಂಚನೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಹಣ ಅಕ್ರಮ ವರ್ಗಾವಣೆ ವರ್ಗಾವಣೆ ತಡೆ ಕಾಯ್ದೆಯಡಿ ದಾಖಲಿಸಿದ್ದ ಪ್ರಕರಣದಡಿ ₹1,986 ಕೋಟಿಗೂ ಅಧಿಕ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಇದರೊಂದಿಗೆ ಪ್ರಕರಣ-ದಲ್ಲಿ ಈವರೆಗೆ ಮುಟ್ಟುಗೋಲು ಹಾಕಿಕೊಳ್ಳಲಾದ ಆಸ್ತಿಯ ಮೌಲ್ಯವು ₹7,589 ಕೋಟಿಗೆ ಏರಿಕೆಯಾಗಿದೆ ಎಂದು ಇ.ಡಿ ಸೋಮವಾರ ತಿಳಿಸಿದೆ.

ಪಿಎಸಿಎಲ್ ಸಾಮೂಹಿಕ ಹೂಡಿಕೆ ಯೋಜನೆಗಳ ಮೂಲಕ ವಂಚನೆ ಎಸಗಿದೆ. ಕಂಪನಿ ಮತ್ತು ಅದರ ಸಹವರ್ತಿಗಳು, ಕೃಷಿ ಜಮೀನು ಮಾರಾಟ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಹೂಡಿಕೆದಾರರಿಂದ ₹60,000 ಕೋಟಿ ಸಂಗ್ರಹಿಸಿ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಬಹುತೇಕ ಜನರಿಗೆ ಹೂಡಿಕೆಗೆ ಪ್ರತಿಯಾಗಿ ಜಮೀನು ನೀಡದೇ ವಂಚಿಸಲಾಗಿದೆ. ಹೂಡಿಕೆದಾರರಿಗೆ ನೀಡಬೇಕಿದ್ದ ₹48,000 ಕೋಟಿಯನ್ನು ಪಾವತಿಸದೇ ವಂಚಿಸಲಾಗಿದೆ.

ಪಂಜಾಬ್‌ನ ಲೂಧಿಯಾನ ಹಾಗೂ ರಾಜಸ್ಥಾನದ ಜೈಪುರ-ದಲ್ಲಿರುವ 37 ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇವುಗಳ ಒಟ್ಟು ಮೌಲ್ಯ ₹1,986.48 ಕೋಟಿ. ವಂಚನೆಯಿಂದ ಬಂದ ಹಣದ ಒಂದು ಭಾಗವನ್ನು ಈ ಆಸ್ತಿಗಳನ್ನು ಗಳಿಸಲು ಬಳಸಲಾಗಿದೆ ಎಂದು ಇ.ಡಿ ಹೇಳಿದೆ.

ಪಿಎಸಿಎಲ್‌ನ ಪ್ರವರ್ತಕ ದಿವಂಗತ ನಿರ್ಮಲ್ ಸಿಂಗ್ ಭಂಗೂ ಮತ್ತು ಇತರರ ವಿರುದ್ಧ ಸಿಬಿಐ ದಾಖಲಿಸಿದ್ದ ಪ್ರಕರಣದ ಆಧಾರದ ಮೇಲೆ ಇ.ಡಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ಭಂಗೂ ಕಳೆದ ವರ್ಷ ಆಗಸ್ಟ್‌ನಲ್ಲಿ ನಿಧನರಾದರು.

‘ಸಹಜೀವನ: ಪಾಶ್ಚಿಮಾತ್ಯ ವಿಚಾರ ಪ್ರೇರಣೆ’

ಪ್ರಯಾಗರಾಜ್ (ಪಿಟಿಐ): ‘ಪಾಶ್ಚಿಮಾತ್ಯ ವಿಚಾರಗಳಿಂದ ಪ್ರೇರಣೆಗೊಂಡು ಯುವಕರು ಸಹಜೀವನ ನಡೆಸಲು ಮುಂದಾಗುತ್ತಿದ್ದಾರೆ. ಇಂಥ ಯುವಕರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಕೊನೆಯಲ್ಲಿ ಸಂಬಂಧ ಸರಿಬರಲಿಲ್ಲ ಎಂದಾದರೆ, ಅತ್ಯಾಚಾರದ ಪ್ರಕರಣ ದಾಖಲಿಸುವುದು ಸರ್ವೇಸಾಮಾನ್ಯವಾಗಿದೆ’ ಎಂದು ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ವ್ಯಕ್ತಿಯೊಬ್ಬರು ಯುವತಿಯನ್ನು ಅಪಹರಿಸಿ, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪ ಕುರಿತ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಿದ್ಧಾರ್ಥ್ ಮತ್ತು ಪ್ರಶಾಂತ್ ಮಿಶ್ರಾ ಅವರ ಪೀಠವು ತನ್ನ ತೀರ್ಪಿನಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿತು.

‘ಎಲ್ಲ ಕಾನೂನುಗಳೂ ಮಹಿಳೆಯರ ಪರವಾಗಿಯೇ ಇವೆ. ಸಹಜೀವನ ಎಂಬ ಪರಿಕಲ್ಪನೆಯೇ ಇರದಿದ್ದ ಕಾಲದಲ್ಲಿ ರೂಪಿಸಿದ ಕಾನೂನಿನ ಆಧಾರದಲ್ಲಿ ಪುರುಷರಿಗೆ ಶಿಕ್ಷೆ ನೀಡಲಾಗುತ್ತಿದೆ’ ಎಂದು ಪೀಠ ಹೇಳಿತು.

ಪ್ರಕರಣವೇನು?: ಚಂದ್ರಶೇಖರ್ ಎಂಬುವರು ಪೋಷಕರಿಗೆ ಮಾಹಿತಿಯೇ ಇಲ್ಲದಂತೆ ಮದುವೆಯಾಗುವುದಾಗಿ ಬಾಲಕಿಯನ್ನು ಅಪಹರಿಸಿ ಉತ್ತರ ಪ್ರದೇಶದ ಗೋರಖಪುರದಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ. ಇಲ್ಲಿ ಬಾಲಕಿಯ ಜೊತೆ ಲೈಂಗಿಕ ಸಂಪರ್ಕ ಬೆಳೆಸಿದ್ದಾರೆ ಎಂದು ದೂರು ನೀಡಲಾಗಿತ್ತು. ಇದು 2021ರ ಪ್ರಕರಣ.

ಅಪಹರಣ, ಮದುವೆ ಆಗಲು ಅಪಹರಣ, ಪೋಕ್ಸೊ ಕಾಯ್ದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆಗಳ ವಿವಿಧ ಸೆಕ್ಷನ್‌ಗಳ ಅನ್ವಯ ಚಂದ್ರಶೇಖರ್ ಅವರಿಗೆ ವಿಚಾರಣಾ ನ್ಯಾಯಾಲಯವೊಂದು ಶಿಕ್ಷೆ ವಿಧಿಸಿತ್ತು. ಇದರ ವಿರುದ್ಧ ಚಂದ್ರಶೇಖರ್ ಅವರು ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಿದ್ದರು.

ಎಲ್ಲ ಆರೋಪಗಳೂ ಸುಳ್ಳು: ನ್ಯಾಯಪೀಠ

‘ನನ್ನ ಮಗಳಿಗೆ 18 ವರ್ಷ 6 ತಿಂಗಳು ಎಂದು ಯುವತಿಯ ತಾಯಿ ಹೇಳಿದ್ದರು. ನ್ಯಾಯಾಲಯ-ದಲ್ಲಿ ವಿಚಾರಣೆ ವೇಳೆ ನನ್ನ ಮಗಳಿಗೆ 17 ವರ್ಷ ಎಂದಿದ್ದರು. ಇದು ‘ವಕೀಲರ ಸಲಹೆ’ ಮೇರೆಗೆ ನೀಡಿದ ಹೇಳಿಕೆಯಾಗಿತ್ತು ಎಂದು ಕೋರ್ಟ್ ಹೇಳಿದೆ. ವ್ಯಕ್ತಿಯ ಕುರಿತು ಮಾಡಿರುವ ಎಲ್ಲ ಆರೋಪಗಳು ಸುಳ್ಳು. ವ್ಯಕ್ತಿಯು ಈ ಬಗ್ಗೆ ಮೇಲ್ಮನವಿ ಸಲ್ಲಿಸಬಹುದು’ ಎಂದು ಪೀಠ ತನ್ನ ತೀರ್ಪಿನಲ್ಲಿ ಹೇಳಿದೆ.

‘ಘಟನೆ ಸಂದರ್ಭದಲ್ಲಿ ಯುವತಿಗೆ 20 ವರ್ಷವಾಗಿತ್ತು. ಇದನ್ನು ವೈದ್ಯಕೀಯ ಪರೀಕ್ಷೆ ದೃಢಪಡಿಸಿದೆ. ಇಬ್ಬರೂ ಸರ್ಕಾರಿ ಬಸ್‌ನಲ್ಲಿ, ರೈಲಿನಲ್ಲಿ ಬೆಂಗಳೂರು ತಲುಪಿದ್ದಾರೆ. ಅಪಹರಣವಾಗಿದ್ದರೆ, ಯುವತಿ ಗಲಾಟೆ ಮಾಡಬೇಕಿತ್ತು. ಆರು ತಿಂಗಳು ಇಬ್ಬರೂ ಒಟ್ಟಿಗೆ ಇದ್ದರು. ಯುವಕನು ಯುವತಿಯನ್ನು ದೆಹಲಿಯ ಬಸ್ ನಿಲ್ದಾಣವೊಂದರಲ್ಲಿ ಬಿಟ್ಟು ಹೋದ ಬಳಿಕವಷ್ಟೇ ಯುವತಿ ಪೋಷಕರಿಗೆ ಕರೆ ಮಾಡಿದ್ದಾರೆ’ ಎಂದು ಪೀಠ ಹೇಳಿತು.

ಸಂತ್ರಸ್ತೆಯರ ಗುರುತು ಬಹಿರಂಗ ಬೇಡ ಪೊಲೀಸರಿಗೆ ದೆಹಲಿ ಹೈಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ‘ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳಿಗೆ ಸಲ್ಲಿಸುವ ಸ್ಥಿತಿಗತಿ ವರದಿಗಳು ಅಥವಾ ಇತರೆ ಯಾವುದೇ ದಾಖಲೆಗಳಲ್ಲಿ ಸಂತ್ರಸ್ತೆಯರ ಹೆಸರು, ಪೋಷಕರ ಹೆಸರು ಮತ್ತು ಅವರ ಮನೆ ವಿಳಾಸದಂಥ ಮಾಹಿತಿಗಳನ್ನು ಬಹಿರಂಗಪಡಿಸಬಾರದು’ ಎಂದು ದೆಹಲಿ ಹೈಕೋರ್ಟ್ ಪೊಲೀಸರಿಗೆ ಸ್ಪಷ್ಟ ನಿರ್ದೇಶನ ನೀಡಿದೆ.

ಪೋಕ್ಸೊ ಪ್ರಕರಣವೊಂದರ ವಿಚಾರಣೆ ವೇಳೆ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ದೆಹಲಿಯ ಪೊಲೀಸ್ ಕಮಿಷನರ್ ಅವರನ್ನು ನ್ಯಾಯಾಲಯಕ್ಕೆ ಕರೆಸಿ ಈ ನಿರ್ದೇಶನ ನೀಡಿದ್ದಾರೆ. ತಮ್ಮ ವ್ಯಾಪ್ತಿಯ ಎಲ್ಲ ಠಾಣಾಧಿಕಾರಿಗಳು ಮತ್ತು ತನಿಖಾಧಿಕಾರಿಗಳಿಗೆ ಈ ಬಗ್ಗೆ ಸ್ಪಷ್ಟ ಸೂಚನೆ ನೀಡಬೇಕು ಎಂದೂ ತಾಕೀತು ಮಾಡಿದ್ದಾರೆ.

ಪೊಲೀಸರು ತಾವು ಸಲ್ಲಿಸಿದ್ದ ವರದಿಯಲ್ಲಿ ದೂರು ನೀಡಿದ ಸಂತ್ರಸ್ತೆ ಹೆಸರನ್ನು ಉಲ್ಲೇಖಿಸಿದ್ದರು. ವಿಚಾರಣೆ ವೇಳೆ ಇದನ್ನು ಗಮನಿಸಿದ ನ್ಯಾಯಾಲಯವು ಈ ಬಗ್ಗೆ ಕಳವಳ ವ್ಯಕ್ತಪಡಿಸಿತು. ‘ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸಬಾರದು ಎಂದು ಕಾನೂನಲ್ಲಿದೆ. ಇದನ್ನು ಎಲ್ಲರೂ ಪಾಲಿಸಲೇಬೇಕು’ ಎಂದಿತು. ‘ವರದಿಗಳಲ್ಲಿ ಸಂತ್ರಸ್ತೆಯ ಗುರುತು ಬಹಿರಂಗವಾಗದಂತೆ ನೋಡಿಕೊಳ್ಳುವ ಬಗ್ಗೆ ಇರುವ ಕಾನೂನು ಪಾಲಿಸುವಂತೆ ತನಿಖಾಧಿಕಾರಿಗಳಿಗೆ ಸೂಚನೆ ನೀಡಿ. ಈ ಆದೇಶದ ಪ್ರತಿಯನ್ನು ಎಲ್ಲ ಠಾಣಾಧಿಕಾರಿಗಳು ಹಾಗೂ ತನಿಖಾಧಿಕಾರಿಗಳಿಗೆ ತಲುಪಿಸಬೇಕು’ ಎಂದು ದೆಹಲಿಯ ಪೊಲೀಸ್ ಕಮಿಷನರ್ ಮತ್ತು ಡಿಸಿಪಿಗಳಿಗೆ ನ್ಯಾಯಾಲಯ ಆದೇಶಿಸಿತು.

‘ಪದ್ಮವಿಭೂಷಣ ಪ್ರಶಸ್ತಿ ಸ್ವೀಕರಿಸುವುದರಿಂದ ಪಕ್ಷಕ್ಕೆ ಸಮಸ್ಯೆ ಇಲ್ಲ’

ವಿ.ಎಸ್ ಕುಟುಂಬಕ್ಕೆ ಸಿಪಿಎಂ ಅನುಮತಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪದ್ಮವಿಭೂಷಣ ಪ್ರಶಸ್ತಿಯನ್ನು ಸ್ವೀಕರಿಸುವ ಬಗ್ಗೆ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಅವರ ಕುಟುಂಬವೇ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಸಿಪಿಎಂನ ಕೇರಳ ರಾಜ್ಯ ಘಟಕ ಹೇಳಿದೆ.

ಅಚ್ಯುತಾನಂದನ್ ಅವರನ್ನು ಮರಣೋತ್ತರವಾಗಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದರಿಂದ ಪ್ರಶಸ್ತಿ ಸ್ವೀಕರಿಸುವ ಬಗ್ಗೆ ಅವರ ಕುಟುಂಬ ನಿರ್ಧರಿಸುತ್ತದೆ ಎಂದು ಸಿಪಿಎಂ ರಾಜ್ಯ ಮಂಡಳಿ ಕಾರ್ಯದರ್ಶಿ ಎಂ.ವಿ. ಗೋವಿಂದನ್ ಸೋಮವಾರ ಹೇಳಿದ್ದಾರೆ. ಅವರ ಕುಟುಂಬವು ಪ್ರಶಸ್ತಿ ಸ್ವೀಕರಿಸುವುದರಿಂದ ಪಕ್ಷಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದಿದ್ದಾರೆ.

ಇದೇ ವೇಳೆ, ಅಚ್ಯುತಾನಂದನ್ ಅವರ ಪುತ್ರ ವಿ.ಎ ಅರುಣ್‌ಕುಮಾರ್ ಅವರು, ‘ಪಕ್ಷದ ನಾಯಕತ್ವದ ಜತೆ ಸಮಾಲೋಚನೆ ನಡೆಸಿದ ನಂತರ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಭಾನುವಾರ ಅಚ್ಯುತಾನಂದನ್ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಘೋಷಿಸಿದೆ. ಇಂತಹ ಗೌರವ ಸ್ವೀಕರಿಸುವುದು ಸಿಪಿಎಂನ ನಿಲುವಿಗೆ ವಿರುದ್ಧವಾಗಿರುವುದರಿಂದ ಅವರ ಕುಟುಂಬ ಪ್ರಶಸ್ತಿ ಸ್ವೀಕರಿಸುತ್ತದೆಯೇ ಎಂಬ ಚರ್ಚೆಗಳು ನಡೆದಿವೆ.

ಇ.ಎಂ.ಎಸ್ ನಂಬೂದರಿಪಾಡ್ ಸೇರಿದಂತೆ ಸಿಪಿಎಂನ ಹಲವು ನಾಯಕರು ಕೇಂದ್ರ ಸರ್ಕಾರ ನೀಡಿದ್ದ ಗೌರವವನ್ನು ಈ ಹಿಂದೆ ನಿರಾಕರಿಸಿದ್ದರು.

ಕೋಶ್ಯಾರಿಗೆ ಪದ್ಮ ಭೂಷಣ: ರಾವುತ್ ಖಂಡನೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಭಗತ್ ಸಿಂಗ್ ಕೋಶ್ಯಾರಿ ಅವರಿಗೆ ಪದ್ಮ ಭೂಷಣ ನೀಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಶಿವಸೇನಾ (ಉದ್ಧವ್ ಬಣ) ನಾಯಕ ಸಂಜಯ್ ರಾವುತ್ ಖಂಡಿಸಿದರು.

ಸಂಜಯ್ ರಾವುತ್

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ‘ಕೋಶ್ಯಾರಿ ಅವರು, ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಕಗ್ಗೊಲೆ ಮಾಡಿ, ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಆಘಾಡಿ ಸರ್ಕಾರವನ್ನು ಉರುಳಿಸಿದ್ದರು’ ಎಂದು ಆರೋಪಿಸಿದರು. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿಗಳಾದ ಅಜಿತ್ ಪವಾರ್ ಮತ್ತು ಏಕನಾಥ ಶಿಂದೆ ಅವರೂ ಕೇಂದ್ರದ ನಿರ್ಧಾರವನ್ನು ಖಂಡಿಸಬೇಕು. ಕೋಶ್ಯಾರಿ ಅವರು ಛತ್ರಪತಿ ಶಿವಾಜಿ ಮಹಾರಾಜ, ಸಮಾಜ ಸುಧಾರಕರಾದ ಮಹಾತ್ಮ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರನ್ನೂ ಅವಮಾನಿಸಿದ್ದಾರೆ ಎಂದು ಹೇಳಿದರು.

ಕೋಶ್ಯಾರಿ ಅವರು 2019ರಿಂದ 2023ರವರೆಗೆ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದರು.

ಎಸ್‌ಎನ್‌ಡಿಪಿ ಮೈತ್ರಿಯಿಂದ ನಾಯರ್ ಸರ್ವೀಸ್ ಸೊಸೈಟಿ ಹೊರಕ್ಕೆ

ಕೊಟ್ಟಾಯಂ, ಕೇರಳ (ಪಿಟಿಐ): ಶ್ರೀ ನಾರಾಯಣ ಗುರು ಧರ್ಮ ಪರಿಪಾಲನಾ ಯೋಗಂ (ಎಸ್‌ಎನ್‌ಡಿಪಿ) ಜೊತೆಗಿನ ಮೈತ್ರಿಯಿಂದ ಹೊರ ನಡೆಯುವುದಾಗಿ ನಾಯರ್ ಸರ್ವೀಸ್ ಸೊಸೈಟಿ (ಎನ್ ಎಸ್ ಎಸ್) ಘೋಷಿಸಿದೆ. ಆ ಮೂಲಕ ಪ್ರಸ್ತಾವಿತ ಐಕ್ಯ ಹೋರಾಟವು ಆರಂಭದಲ್ಲಿಯೇ ಮುರಿದುಬಿದ್ದಿದೆ.

ಪೆರುನ್ನಾದಲ್ಲಿ ನಡೆದ ಎನ್‌ಎಸ್‌ಎಸ್ ನಿರ್ದೇಶಕರ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಈ ಸಂಬಂಧ ಎನ್‌ಎಸ್‌ಎಸ್‌ನ ಪ್ರಧಾನ ಕಾರ್ಯದರ್ಶಿ ಜಿ.ಸುಕುಮಾರನ್ ನಾಯರ್ ಅವರ ಸಹಿ ಇರುವ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ.

‘ಈ ಹಿಂದೆ ನಿರ್ಧರಿಸಿದ್ದ ಎಸ್‌ಎನ್‌ಡಿಪಿ ಹಾಗೂ ಎನ್‌ಎಸ್‌ಎಸ್ ನಡುವಿನ ಏಕತೆಯು ಹಲವು ಕಾರಣಗಳಿಂದ ಯಶಸ್ವಿಯಾಗುತ್ತಿಲ್ಲ. ಸದ್ಯದ ರಾಜಕೀಯ ಪರಿಸ್ಥಿತಿಯೂ ಅನುಕೂಲಕರವಾಗಿಲ್ಲ’ ಎಂದು ತಿಳಿಸಲಾಗಿದೆ.

ಎನ್‌ಎಸ್‌ಎಸ್ ಸಂಘಟನೆಯು ನಾಯರ್ ಸಮುದಾಯವನ್ನು ಪ್ರತಿನಿಧಿಸಿದರೆ, ಎಸ್‌ಎನ್‌ಡಿಪಿಯು ಈಳವ ಸಮುದಾಯವನ್ನು ಪ್ರತಿನಿಧಿಸುತ್ತದೆ.

‘ಇಂತಹ ಏಕತೆಯು ಅಪ್ರಾಯೋಗಿಕವಾಗಿದೆ. ಎನ್‌ಎಸ್‌ಎಸ್ ಮೊದಲಿನಿಂದಲೂ ಎಲ್ಲ ರಾಜಕೀಯ ಪಕ್ಷಗಳಿಂದಲೂ ಸಮಾನ ಅಂತರ ಕಾಯ್ದುಕೊಂಡಿದೆ. ಎಲ್ಲ ಸಮುದಾಯಗಳ ಜೊತೆಗಿರುವ ಸ್ನೇಹಪರ ಸಂಬಂಧವು ಎಸ್‌ಎನ್‌ಡಿಪಿ ಜೊತೆಗೂ ಮುಂದುವರಿಯಲಿದೆ’ ಎಂದು ತಿಳಿಸಲಾಗಿದೆ.

₹55 ಕೋಟಿ ಮೌಲ್ಯದ ಡ್ರಗ್ ವಶಕ್ಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ ಮೊಬೈಲ್ ಮೆಫೆಡ್ರೋನ್ ಉತ್ಪಾದನಾ ಘಟಕವನ್ನು ಪತ್ತೆ ಮಾಡಿರುವ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ), ಐವರನ್ನು ಬಂಧಿಸಿ, ₹55 ಕೋಟಿ ಮೌಲ್ಯದ ಮಾದಕ ವಸ್ತುವನ್ನು ವಶಕ್ಕೆ ಪಡೆದಿದೆ.

ಖಚಿತ ಮಾಹಿತಿ ಮೇರೆಗೆ ಡಿಆರ್‌ಐ ಅಧಿಕಾರಿಗಳು ಶುಕ್ರವಾರ ‘ಆಪರೇಷನ್ ಸಹ್ಯಾದ್ರಿ ಚೆಕ್‌ಮೇಟ್’ ಕಾರ್ಯಾಚರಣೆಯನ್ನು ಕೈಗೊಂಡಿದ್ದರು ಎಂದು ಅಧಿಕಾರಿಗಳು ತಿಳಿಸಿದರು.

₹11.848 ಕೆ.ಜಿ ದ್ರವರೂಪದ ಡ್ರಗ್ ಮತ್ತು 9.326 ಕೆ.ಜಿ ಅರೆ ದ್ರವ ರೂಪದ ಡ್ರಗ್ ಮತ್ತು 738 ಗ್ರಾಂ ಘನ ರೂಪದ ಮಾದಕ ವಸ್ತುವನ್ನು ಮತ್ತು 71.5 ಕೆ.ಜಿ ಕಚ್ಚಾ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದರು.

ಬ್ರಂಟ್ ಶತಕಕ್ಕೆ ಒಲಿದ ಜಯ

ಆರ್‌ಸಿಬಿಗೆ ಸತತ ಎರಡನೇ ಸೋಲು
ರಿಚಾ ಘೋಷ್ ಹೋರಾಟಕ್ಕೆ ಸಿಗದ ಫಲ

ಇಂದಿನ ಪಂದ್ಯ
ಗುಜರಾತ್ ಜೈಂಟ್ಸ್ Vs ಡೆಲ್ಲಿ ಕ್ಯಾಪಿಟಲ್ಸ್
ಸಮಯ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಮಹಿಳಾ ಪ್ರೀಮಿಯರ್ ಲೀಗ್

ರಿಚಾ ಘೋಷ್

ವಡೋದರ (ಪಿಟಿಐ): ಇಂಗ್ಲೆಂಡ್ ಆಟಗಾರ್ತಿ ನ್ಯಾಟ್ ಶಿವರ್ ಬ್ರಂಟ್ ಅವರು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿ ಮೊದಲ ಶತಕ ಗಳಿಸಿದ ಆಟಗಾರ್ತಿಯೆಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರ ಆಟದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 15 ರನ್‌ಗಳಿಂದ ಮಣಿಸಿತು.

ಈ ಗೆಲುವಿನೊಂದಿಗೆ ಎರಡು ಬಾರಿಯ ಚಾಂಪಿಯನ್ ಮುಂಬೈ ತಂಡವು ಪ್ಲೇ ಆಫ್ ಕನಸನ್ನು ಜೀವಂತವಾಗಿ ಇರಿಸಿಕೊಂಡಿತು. ಈಗಾಗಲೇ ಪ್ಲೇ ಆಫ್‌ಗೆ ಅರ್ಹತೆ ಪಡೆದಿರುವ ಆರ್‌ಸಿಬಿ ತಂಡವು ಸತತ ಎರಡನೇ ಸೋಲು ಅನುಭವಿಸಿತು. ಸ್ಮೃತಿ ಮಂದಾನ ಪಡೆಗೆ ಲೀಗ್‌ನಲ್ಲಿ ಇನ್ನು ಒಂದು ಪಂದ್ಯ (ಯು.ಪಿ ವಾರಿಯರ್ಸ್ ವಿರುದ್ಧ) ಬಾಕಿ ಇದೆ.

ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 33 ವರ್ಷದ ಬ್ರಂಟ್ ಅಜೇಯ 100 ರನ್ (57ಎ, 4x16, 6x1) ಗಳಿಸಿದರು. ಮುಂಬೈ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 199 ರನ್ ಗಳಿಸಿತು. ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿ ತಂಡವು ಆರಂಭದಲ್ಲೇ ಕುಸಿತ ಕಂಡಿತು. ಮಧ್ಯಮ ಕ್ರಮಾಂಕದಲ್ಲಿ ವಿಕೆಟ್ ಕೀಪರ್ ರಿಚಾ ಘೋಷ್ (90;50ಎ, 4x10, 6x6) ಏಕಾಂಗಿ ಹೋರಾಟ ನಡೆಸಿದರೂ ಗೆಲುವಿಗೆ ಸಾಕಾಗಲಿಲ್ಲ. 9 ವಿಕೆಟ್‌ಗೆ 184 ರನ್ ಗಳಿಸಲಷ್ಟೇ ಶಕ್ತವಾಯಿತು.

35 ರನ್ ಗಳಿಸುವಷ್ಟರಲ್ಲಿ ಪ್ರಮುಖ ಐದು ಬ್ಯಾಟರ್‌ಗಳು ಪೆವಿಲಿಯನ್ ಸೇರಿದರು. ರಿಚಾ ಮತ್ತು ನದೀನ್ ಡಿ ಕ್ಲರ್ಕ್ (28) ಆರನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಸೇರಿಸಿ ಚೇತರಿಕೆ ನೀಡಿದರು. ಒಂದೆಡೆ ನಿಯಮಿತವಾಗಿ ವಿಕೆಟ್‌ಗಳು ಉರುಳುತ್ತಿದ್ದರೂ ರಿಚಾ ಮಾತ್ರ ಕೊನೆಯವರೆಗೂ ಹೋರಾಟ ತೋರಿದರು. ಅಮನ್ಜೋತ್ ಕೌರ್ ಹಾಕಿದ 19ನೇ ಓವರ್‌ನಲ್ಲಿ ಸತತ ಮೂರು ಸಿಕ್ಸರ್ ಬಾರಿಸಿದರು. ಶ್ರೇಯಾಂಕಾ ಪಾಟೀಲ ಅವರೊಂದಿಗೆ 9ನೇ ವಿಕೆಟ್ ಜೊತೆಯಾಟದಲ್ಲಿ 55 (18ಎ) ರನ್ ಸೇರಿಸಿದರು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಅಮೇಲಿಯಾ ಕೆರ್‌ಗೆ ವಿಕೆಟ್ ಒಪ್ಪಿಸಿದರು. ಹೇಯಲಿ ಮ್ಯಾಥ್ಯೂಸ್ 3 ವಿಕೆಟ್ ಗಳಿಸಿದರೆ, ಶಬ್ನಿಮ್ ಇಸ್ಮಾಯಿಲ್ ಮತ್ತು ಅಮೇಲಿಯಾ ತಲಾ 2 ವಿಕೆಟ್ ಕಬಳಿಸಿದರು.

ಟಾಸ್ ಗೆದ್ದ ಆರ್‌ಸಿಬಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಆರ್‌ಸಿಬಿ ಬೌಲರ್ ಲಾರೆನ್ ಬೆಲ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಸಜೀವನ್ ಸಜನಾ (7 ರನ್) ಬಿದ್ದರು. ಇನ್ನೊಂದು ಬದಿಯಲ್ಲಿದ್ದ ಹೇಯಲಿ (56;39ಎ, 4x9) ಅವರೊಂದಿಗೆ ಸೇರಿಕೊಂಡ ಬ್ರಂಟ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 131 ರನ್ ಸೇರಿಸಿದರು.

ಲಾರೆನ್ ಬೆಲ್ ಅವರೇ ಈ ಜೊತೆಯಾಟವನ್ನು ಮುರಿಯುವಲ್ಲಿ ಯಶಸ್ವಿಯಾದರು. ಆದರೆ ಕ್ರೀಸ್‌ಗೆ ಬಂದ ನಾಯಕಿ ಹರ್ಮನ್‌ಪ್ರೀತ್ ಕೌರ್ 12 ಎಸೆತಗಳಲ್ಲಿ 20 ರನ್ ಗಳಿಸಿದರು. 19ನೇ ಓವರ್‌ನಲ್ಲಿ ನದೀನ್ ಡಿ ಕ್ಲರ್ಕ್ ಹಾಕಿದ ಎಸೆತದಲ್ಲಿ ಕೌರ್ ಕ್ಯಾಚ್ ಪಡೆದ ಜಾರ್ಜಿಯಾ ವೊಲ್ ಸಂಭ್ರಮಿಸಿದರು. ಅಮನ್ಜೋತ್ ಕೌರ್ ವಿಕೆಟ್ ಕಬಳಿಸುವಲ್ಲಿ ಶ್ರೇಯಾಂಕಾ ಯಶಸ್ವಿಯಾದರು. ಆದರೆ ಬ್ರಂಟ್ ಶತಕ ಗಳಿಸುವುದನ್ನು ತಡೆಯಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 199 (ಹೇಯಲಿ ಮ್ಯಾಥ್ಯೂಸ್ 56, ನ್ಯಾಟ್ ಶಿವರ್ ಬ್ರಂಟ್ ಔಟಾಗದೇ 100, ಲಾರೆನ್ ಬೆಲ್ 21ಕ್ಕೆ2). ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 184 (ರಿಚಾ ಘೋಷ್ 90, ನದೀನ್ ಡಿ ಕ್ಲರ್ಕ್ 28; ಶಬ್ನಿಮ್ ಇಸ್ಮಾಯಿಲ್ 25ಕ್ಕೆ 2, ಹೇಯಲಿ 10ಕ್ಕೆ 3, ಅಮೇಲಿಯಾ ಕೆರ್ 37ಕ್ಕೆ 2). ಪಂದ್ಯದ ಆಟಗಾರ್ತಿ: ನ್ಯಾಟ್ ಶಿವರ್ ಬ್ರಂಟ್

ನ್ಯಾಟ್ ಶಿವರ್ ಬ್ರಂಟ್ ಮತ್ತು ಹೇಯಲಿ ಮ್ಯಾಥ್ಯೂಸ್ 'ಎಕ್ಸ್' ಚಿತ್ರ

ಡಬ್ಲ್ಯುಪಿಎಲ್‌ನಲ್ಲಿ ವೈಯಕ್ತಿಕ ಗರಿಷ್ಠ ರನ್

ರನ್	ಆಟಗಾರ್ತಿ	ತಂಡ	ವಿರುದ್ಧ	ತಾಣ	ವರ್ಷ
100*	ಶಿವರ್ ಬ್ರಂಟ್	ಮುಂಬೈ	ಆರ್‌ಸಿಬಿ	ವಡೋದರ	2026
99*	ಜಾರ್ಜಿಯಾ ವಾಲ್	ಯುಪಿ	ಆರ್‌ಸಿಬಿ	ಲಖನೌ	2025
99	ಸೋಫಿ ಡಿವೈನ್	ಆರ್‌ಸಿಬಿ	ಗುಜರಾತ್	ಬ್ರೆಬೋರ್ನ್	2023
96*	ಅಲೀಸಾ ಹೀಲಿ	ಯುಪಿ	ಆರ್‌ಸಿಬಿ	ಬ್ರೆಬೋರ್ನ್	2023
96*	ಬೆತ್ ಮೂನಿ	ಗುಜರಾತ್	ಯುಪಿ	ಲಖನೌ	2025
96	ಸ್ಮೃತಿ ಮಂದಾನ	ಆರ್‌ಸಿಬಿ	ಡೆಲ್ಲಿ	ನವೀ ಮುಂಬೈ	2026

ಚೆಸ್: ಗೆಲುವಿನ ಹಳಿಗೆ ಗುಕೇಶ್

ಗುಕೇಶ್

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಸತತ ಎರಡು ಸೋಲುಗಳ ಬಳಿಕ ಪುಟಿದೆದ್ದ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಗೆಲುವಿನ ಹಳಿಗೆ ಮರಳಿದರು.

ಭಾರತದ ಗ್ರ್ಯಾಂಡ್‌ಮಾಸ್ಟರ್ ಸೋಮವಾರ ನಡೆದ ಎಂಟನೇ ಸುತ್ತಿನಲ್ಲಿ ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ ಅವರನ್ನು ಮಣಿಸಿದರು. ಕಪ್ಪು ಕಾಯಿಯಲ್ಲಿ ಆಡಿದ ಗುಕೇಶ್ 41 ನಡೆಯಲ್ಲಿ ಆಟವನ್ನು ಮುಗಿಸಿದರು.

ಆರಂಭಿಕ ನಾಲ್ಕು ಡ್ರಾಗಳ ನಂತರ ಐದನೇ ಸುತ್ತಿನಲ್ಲಿ ಗೆಲುವು ಸಾಧಿಸಿದ್ದ ಗುಕೇಶ್, ನಂತರದ ಎರಡು ಸುತ್ತಿನಲ್ಲಿ ಮುಗ್ಗರಿಸಿದ್ದರು. ಒಟ್ಟು 4 ಅಂಕಗಳೊಂದಿಗೆ ಭಾರತದ ಆಟಗಾರರ ಪೈಕಿ ಮುಂಚೂಣಿಯಲ್ಲಿದ್ದಾರೆ. ಟೂರ್ನಿಯು ಒಟ್ಟು 13 ಸುತ್ತುಗಳನ್ನು ಒಳಗೊಂಡಿವೆ.

ಭಾರತದ ಅರ್ಜುನ್ ಇರಿಗೇಶಿ (3.5) ಅವರು ಸ್ವದೇಶದ ಅರವಿಂದ ಚಿದಂಬರಂ (2.5) ಅವರೊಂದಿಗೆ ಡ್ರಾ ಮಾಡಿಕೊಂಡರು. ಆರ್. ಪ್ರಜ್ಞಾನಂದ (3) ಅವರು ಟರ್ಕಿಯ ಯಾಗಿಝ್ ಕಾನ್ ಎರ್ಡೋಗ್ಮಸ್ (4.5) ಅವರೊಂದಿಗೆ ಅಂಕ ಹಂಚಿಕೊಂಡರು.

ಈ ಮಧ್ಯೆ ಸ್ಥಳೀಯ ನೆಚ್ಚಿನ ಆಟಗಾರ ಅನೀಶ್ ಗಿರಿ ಅವರು ಉಜ್ಬೇಕಿಸ್ತಾನ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರಿಗೆ ಆಘಾತ ನೀಡಿದರು. ಈ ಸೋಲಿನ ಹೊರತಾಗಿಯೂ ನಾದಿರ್ಬೆಕ್ 5.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಉಜ್ಬೇಕಿಸ್ತಾನದ ಮತ್ತೊಬ್ಬ ಆಟಗಾರ ಜಾವೊಖಿರ್ ಸಿಂದರೋವ್ (5) ಎರಡನೇ ಸ್ಥಾನದಲ್ಲಿದ್ದಾರೆ.

ನಾಯಕತ್ವ ಕಳೆದುಕೊಂಡ ಮಯಾಂಕ್ ಅಗರವಾಲ್
ರಾಜ್ಯ ತಂಡಕ್ಕೆ ದೇವದತ್ತ ನಾಯಕ

ಪ್ರಜಾವಾಣಿ ವಾರ್ತೆ

ದೇವದತ್ತ ಪಡಿಕ್ಕಲ್

ಕೆ.ಎಲ್ ರಾಹುಲ್

ಪ್ರಸಿದ್ಧ ಕೃಷ್ಣ

ಬೆಂಗಳೂರು: ಮಯಂಕ್ ಅಗರವಾಲ್ ಅವರನ್ನು ಕರ್ನಾಟಕ ಕ್ರಿಕೆಟ್ ತಂಡದ ನಾಯಕತ್ವದಿಂದ ಕೆಳಗಿಳಿಸಲಾಗಿದೆ. ಅವರ ಸ್ಥಾನಕ್ಕೆ ದೇವದತ್ತ ಪಡಿಕ್ಕಲ್ ಅವರನ್ನು ನೇಮಕ ಮಾಡಲಾಗಿದೆ. 15 ಆಟಗಾರರ ತಂಡದಲ್ಲಿ ಕೆ.ಎಲ್. ರಾಹುಲ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ ಕೂಡ ಇದ್ದಾರೆ.

ಇದೇ 29ರಿಂದ ಮೊಹಾಲಿಯಲ್ಲಿ ಕರ್ನಾಟಕ ತಂಡವು ರಣಜಿ ಟ್ರೋಫಿ ಟೂರ್ನಿಯ ಬಿ ಗುಂಪಿನ ಕೊನೆಯ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದೆ. ನಾಕೌಟ್ ಹಂತಕ್ಕೆ ಅರ್ಹತೆ ಪಡೆಯಲು ಕರ್ನಾಟಕ ತಂಡವು ಈ ಪಂದ್ಯದಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ. ಕರ್ನಾಟಕ ತಂಡವು 21 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಟೂರ್ನಿಯ ಮೊದಲ ಹಂತದಲ್ಲಿ ಅಗ್ರಸ್ಥಾನದಲ್ಲಿತ್ತು.

ಭಾನುವಾರ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಮಧ್ಯಪ್ರದೇಶ ಎದುರು ಕರ್ನಾಟಕ ತಂಡವು ಸೋತಿತ್ತು. ಅಮಿತ್ ವರ್ಮಾ ನೇತೃತ್ವದ ಆಯ್ಕೆ ಸಮಿತಿಯು ಸೋಮವಾರ ತಂಡವನ್ನು ಪ್ರಕಟಿಸಿದೆ.

ಭಾರತ ತಂಡದ ಆಟಗಾರರಾದ ಕೆ.ಎಲ್. ರಾಹುಲ್ ಮತ್ತು ಪ್ರಸಿದ್ಧ ಎಂ ಕೃಷ್ಣ ಕೂಡ ತಂಡದಲ್ಲಿದ್ದಾರೆ. ಮೊಹಾಲಿಯ ಪಂದ್ಯದಲ್ಲಿ ಅವರು ಆಡುವುದು ಬಹುತೇಕ ಖಚಿತವಾಗಿದೆ.

ಭಾರತ ತಂಡದಲ್ಲಿ ಆಡಿರುವ ಅನುಭವಿ 34 ವರ್ಷದ ಮಯಂಕ್ ನಾಯಕತ್ವದಲ್ಲಿ ತಂಡವು ಈಚೆಗೆ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತಿತ್ತು. ಅದಕ್ಕೂ ಮುಂಚೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಏಳು ಪಂದ್ಯಗಳಿಂದ ಕೇವಲ ಎರಡರಲ್ಲಿ ಜಯಿಸಿತ್ತು. ಮಯಂಕ್ ಅವರು ಬ್ಯಾಟಿಂಗ್‌ನಲ್ಲಿ ಕೂಡ ಸ್ಥಿರ ಪ್ರದರ್ಶನ ನೀಡಿರಲಿಲ್ಲ.

ಮಧ್ಯಪ್ರದೇಶ ಎದುರು ಪಂದ್ಯದಲ್ಲಿ ಗಾಯಗೊಂಡಿದ್ದ ಕರುಣ್ ನಾಯರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಆರ್. ಸ್ಮರಣ್ ಬಳಗಕ್ಕೆ ಮರಳಿದ್ದಾರೆ.

'ನಾಯಕತ್ವದ ಹೊರೆಯು ಮಯಂಕ್ ಅವರ ಬ್ಯಾಟಿಂಗ್ ಮೇಲೆ ಪರಿಣಾಮ ಬೀರುತ್ತಿದೆ. ಅವರಿಂದ ನಮಗೆ ಬಹಳಷ್ಟು ನಿರೀಕ್ಷೆಗಳಿವೆ. ಮಹತ್ವದ ಪಂದ್ಯಗಳಲ್ಲಿ ನಿರ್ಣಾಯಕ ಆಟ ಆಡಬಲ್ಲ ಸಮರ್ಥ ಬ್ಯಾಟರ್ ಮಯಂಕ್. ಆದ್ದರಿಂದ ಅವರ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ನಾಯಕತ್ವದ ಹೊರೆ ಇಳಿಸಲಾಗಿದೆ. ಅವರು ಈಗಲೂ ಉತ್ತಮ ಸ್ಥಾನದಲ್ಲಿದ್ದಾರೆ' ಎಂದು ಅಮಿತ್ ವರ್ಮಾ ತಿಳಿಸಿದ್ದಾರೆ.

ಈ ವಿಷಯದ ಕುರಿತು ಮಯಂಕ್ ಅವರೊಂದಿಗೆ ಸಮಿತಿಯು ಚರ್ಚೆ ಮಾಡಿದೆ ಎಂದೂ ವರ್ಮಾ ಹೇಳಿದ್ದಾರೆ.

ಪಡಿಕ್ಕಲ್ 50 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದಾರೆ. ಎಡಗೈ ಬ್ಯಾಟರ್ ಏಳು ಶತಕ ಹೊಡೆದಿದ್ದು, ಒಟ್ಟು 3199 ರನ್ ಗಳಿಸಿದ್ದಾರೆ. 25 ವರ್ಷದ ಪಡಿಕ್ಕಲ್ ಅವರು ಭಾರತ ತಂಡದಲ್ಲಿ ಎರಡು ಟೆಸ್ಟ್ ಮತ್ತು 2 ಟಿ20 ಪಂದ್ಯಗಳಲ್ಲಿಯೂ ಆಡಿದ್ದಾರೆ.

ತಂಡ: ದೇವದತ್ತ ಪಡಿಕ್ಕಲ್ (ನಾಯಕ), ಮಯಂಕ್ ಅಗರವಾಲ್, ಕೆ.ಎಲ್. ರಾಹುಲ್, ಕೆ.ವಿ. ಅನೀಶ್, ಆರ್.ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ವಿಕೆಟ್‌ಕೀಪರ್), ಎಂ. ವೆಂಕಟೇಶ್, ವಿದ್ಯಾಧರ್ ಪಾಟೀಲ, ವಿದ್ವತ್ ಕಾವೇರಪ್ಪ, ಪ್ರಸಿದ್ಧ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಕೆ.ಎಲ್. ಶ್ರೀಜಿತ್ (ವಿಕೆಟ್‌ಕೀಪರ್), ಧ್ರುವ ಪ್ರಭಾಕರ್. ಕೋಚ್: ಯರೇಗೌಡ, ಬೌಲಿಂಗ್ ಕೋಚ್: ಮನ್ಸೂರ್ ಅಲಿ ಖಾನ್, ಫೀಲ್ಡಿಂಗ್ ಕೋಚ್: ಶಬರೀಶ್ ಪಿ ಮೋಹನ್, ಮ್ಯಾನೇಜರ್: ಪಿ.ವಿ. ಸುಮಂತ್, ಸ್ಟ್ರೆಂತ್–ಕಂಡಿಷನಿಂಗ್: ಇರ್ಫಾನುಲ್ಲಾ ಖಾನ್, ಫಿಸಿಯೊ: ಅಭಿಷೇಕ್ ಕುಲಕರ್ಣಿ, ಪರ್ಫಾರ್ಮೆನ್ಸ್ ಅನಾಲಿಸ್ಟ್: ಗಿರಿಪ್ರಸಾದ್, ಮಸಾಜ್: ಸಿ.ಎಂ. ಸೋಮಸುಂದರ್, ಸೈಡ್ ಆರ್ಮ್ ಪರಿಣತ: ವಿ. ಅಶೋಕ್.

ರಣಜಿ: ಎಲೀಟ್ ಗುಂಪಿಗೆ ಮರಳಿದ ಬಿಹಾರ

ಪಿಯೂಷ್

ಪಾಟ್ನಾ (ಪಿಟಿಐ): ಬಿಹಾರ ಕ್ರಿಕೆಟ್ ತಂಡವು ಸೋಮವಾರ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪ್ಲೇಟ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಎಲೀಟ್ ಗುಂಪಿಗೆ ಬಡ್ತಿ ಪಡೆಯಿತು.

ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಬಿಹಾರ ತಂಡವು ಮಣಿಪುರದ ಎದುರು 568 ರನ್ ಗಳ ಅಂತರದಿಂದ ಜಯಿಸಿತು. ಅದರೊಂದಿಗೆ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

14ರ ಪೋರ ವೈಭವ್ ಸೂರ್ಯವಂಶಿಯ ಗೈರು ಹಾಜರಿಯಲ್ಲಿ ಬಿಹಾರ ತಂಡದ ಗೆಲುವಿಗೆ ಪಿಯೂಷ್ ಸಿಂಗ್ (216; 322ಎ, 4X20) ಅವರು ಬಲ ತುಂಬಿದರು. ಖಾಲೀದ್ ಆಲಂ (81ರನ್), ಬಿಪಿನ್ ಸೌರಭ್ (52 ರನ್) ಮತ್ತು ರಘುವೇಂದ್ರ ಪ್ರತಾಪ್ ಸಿಂಗ್ (90 ರನ್) ಅವರೂ ತಮ್ಮ ಕಾಣಿಕೆ ನೀಡಿದರು. ಬಿಹಾರವು ಮಣಿಪುರ ತಂಡಕ್ಕೆ 764 ರನ್‌ಗಳ ಕಡುಕಠಿಣ ಗುರಿಯೊಡ್ಡಿತು. ಮಣಿಪುರ ತಂಡಕ್ಕೆ 195 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

2022–23ರ ಋತುವಿನ ನಂತರ ಬಿಹಾರವು ಎಲೀಟ್‌ನಿಂದ ಪ್ಲೇಟ್ ಗುಂಪಿಗೆ ಜಾರಿತ್ತು. ಈ ಬಾರಿ ಮತ್ತೆ ಎಲೀಟ್ ಗುಂಪಿಗೆ ಮರಳಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಿಹಾರ: 135.5 ಓವರ್‌ಗಳಲ್ಲಿ 522. ಮಣಿಪುರ: 89.1 ಓವರ್‌ಗಳಲ್ಲಿ 264. ಎರಡನೇ ಇನಿಂಗ್ಸ್: ಬಿಹಾರ: 119.3 ಓವರ್‌ಗಳಲ್ಲಿ 6ಕ್ಕೆ505 ಡಿ. (ಪಿಯೂಷ್ ಸಿಂಗ್ 216, ಮಂಗಲ್ ಮೆಹರೋರ್ 31, ಖಾಲೀದ್ ಆಲಂ 81, ಬಿಪಿನ ಸೌರಭ್ 52, ರಘುವೇಂದ್ರ ಪ್ರತಾಪ್ ಸಿಂಗ್ 90, ಫಿರೊಜ್ಯಾಮ್ ಜೊತಿನ್ 85ಕ್ಕ3) ಮಣಿಪುರ: 56.1 ಓವರ್‌ಗಳಲ್ಲಿ 195 (ಫಿರೊಜ್ಯಾಮ್ ಜೊತಿನ್ 74, ಕಿಶನ್ ಸಿಂಘಾ 30, ಪ್ರಶಾಂತ್ ಸಿಂಗ್ 51ಕ್ಕೆ2, ಸೂರಜ್ ಕಶ್ಯಪ್ 32ಕ್ಕೆ3, ಹಿಮಾಂಶು ಸಿಂಗ್ 49ಕ್ಕೆ3) **ಫಲಿತಾಂಶ:** ಬಿಹಾರ ತಂಡಕ್ಕೆ 568 ರನ್ ಜಯ. ಪಂದ್ಯದ ಆಟಗಾರ: ಸಕೀಬುಲ್ ಗಣಿ. ಸರಣಿಶ್ರೇಷ್ಠ: ಫಿರೊಜ್ಯಾಮ್ ಜೊತಿನ್.

ಚಿಟಿಕೆ ಸುದ್ದಿ

ಏಷ್ಯಾ ಒಲಿಂಪಿಕ್ ಕೌನ್ಸಿಲ್ ಅಧ್ಯಕ್ಷರಾಗಿ ಜೋಹಾನ್ ಆಯ್ಕೆ

ತಾಷ್ಕೆಂಟ್ (ಉಜ್ಬೇಕಿಸ್ತಾನ) (ಎಪಿ): ಕತಾರ್‌ನ ಶೇಖ್ ಜೋಹಾನ್ ಬಿನ್ ಹಮದ್ ಅಲ್ ಥಾನಿ ಅವರು ಏಷ್ಯಾ ಒಲಿಂಪಿಕ್ ಕೌನ್ಸಿಲ್ (ಏಒಸಿ) ಅಧ್ಯಕ್ಷರಾಗಿ ಸೋಮವಾರ ಅವಿರೋಧವಾಗಿ ಆಯ್ಕೆಯಾದರು. ಅವರು 2028ರವರೆಗೆ ಈ ಸ್ಥಾನದಲ್ಲಿರಲಿದ್ದಾರೆ.

ಜೋಹಾನ್ ಅವರು ಕತಾರ್ ಒಲಿಂಪಿಕ್ ಸಮಿತಿಯ ಅಧ್ಯಕ್ಷರಾಗಿದ್ದು, ರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಗಳ ಜಾಗತಿಕ ಸಮಿತಿಯ ಹಿರಿಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. 2036ರ ಒಲಿಂಪಿಕ್ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸಲು ಭಾರತ ಹಾಗೂ ಕತಾರ್ ಭಾರಿ ಕಸರತ್ತು ನಡೆಸುತ್ತಿವೆ. ಹೀಗಾಗಿ, ಜೋಹಾನ್ ಅವರ ಆಯ್ಕೆಯು ಕತಾರ್‌ಗೆ ಪೂರಕವಾಗಬಹುದು ಎನ್ನಲಾಗಿದೆ.

ಡಾನ್ ಬ್ರಾಡ್ಮನ್ ಕ್ಯಾಪ್ ಹರಾಜು

ಗೋಲ್ಡ್ ಕೋಸ್ಟ್ (ಪಿಟಿಐ): 1947-48ರಲ್ಲಿ ಭಾರತ ವಿರುದ್ಧದ ನಡೆದ ಟೆಸ್ಟ್ ಸರಣಿಯ ಸಂದರ್ಭದಲ್ಲಿ ಆಸ್ಟ್ರೇಲಿಯಾದ ಬ್ಯಾಟಿಂಗ್ ದಂತಕಥೆ ಡಾನ್ ಬ್ರಾಡ್ಮನ್ ಧರಿಸಿದ್ದ ಬ್ಯಾಗಿ ಗ್ರೀನ್ ಕ್ಯಾಪ್ ಅನ್ನು ಸೋಮವಾರ ಇಲ್ಲಿ ಹರಾಜು ಮಾಡಲಾಯಿತು.

ಬ್ರಾಡ್ಮನ್ ನಂತರ ಆ ಕ್ಯಾಪ್ ಅನ್ನು ಎದುರಾಳಿ ತಂಡದ ಆಟಗಾರ ಶ್ರೀರಂಗ ವಾಸುದೇವ್ ಸೊಹೋನಿಗೆ ಉಡುಗೊರೆಯಾಗಿ ನೀಡಿದ್ದರು. ಇಲ್ಲಿ ನಡೆದ ಹರಾಜಿನಲ್ಲಿ ಆ ಕ್ಯಾಪ್ ದಾಖಲೆಯ ₹2.92 ಕೋಟಿ ಮೌಲ್ಯಕ್ಕೆ ಮಾರಾಟವಾಯಿತು. ಸೊಹೋನಿ ಕುಟುಂಬವು ಕಳೆದ 75 ವರ್ಷಗಳಿಂದ ಈ ಕ್ಯಾಪ್ ಅನ್ನು ಸಾರ್ವಜನಿಕವಾಗಿ ಪ್ರದರ್ಶಿಸದೆ ಸಂರಕ್ಷಿಸಿತ್ತು.

ರಾಜ್ಯ ಬಾಲಕಿಯರ ಶುಭಾರಂಭ

ಬೆಂಗಳೂರು: ಕರ್ನಾಟಕ ತಂಡವು ಸೋಮವಾರ ಆರಂಭಗೊಂಡ ಖೇಲೊ ಇಂಡಿಯಾ– ಅಸ್ಮಿತಾ 13 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಲೀಗ್ (ದಕ್ಷಿಣ ವಲಯ) ಪಂದ್ಯದಲ್ಲಿ 19–0ಯಿಂದ ಅಂಡಮಾನ್ ತಂಡವನ್ನು ನಿರಾಯಾಸವಾಗಿ ಮಣಿಸಿತು. ರಾಜ್ಯ ತಂಡದ ಎ. ಸುಭಾತ್ರಾ ಏಳು ಗೋಲುಗಳನ್ನು (2ನೇ, 5ನೇ, 6ನೇ, 20ನೇ, 25ನೇ, 28ನೇ ಹಾಗೂ 46ನೇ ನಿ.) ಹೊಡೆದು ಪಾರಮ್ಯ ಮೆರೆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರಂಭದಿಂದಲೇ ಹಿಡಿತ ಸಾಧಿಸಿದ ಕರ್ನಾಟಕ ತಂಡವು ನಿರಂತರವಾಗಿ ಗೋಲು ಗಳಿಸಿತು. ಚುರುಕಿನ ರಕ್ಷಣಾ ತಂತ್ರದೊಂದಿಗೆ, ಎದುರಾಳಿ ತಂಡವು ಒಂದೂ ಗೋಲು ಗಳಿಸದಂತೆ ನೋಡಿಕೊಂಡಿತು.

ಆಸ್ಟ್ರೇಲಿಯಾ ಓಪನ್: ಹಾಲಿ ಚಾಂಪಿಯನ್ ಮ್ಯಾಡಿಸನ್ ಗೆಲುವಿನ ಓಟಕ್ಕೆ ತಡೆ
ಕ್ವಾರ್ಟರ್ ಫೈನಲ್‌ಗೆ ಸಿನ್ನರ್ ಲಗ್ಗೆ

ಹಾಲಿ ಚಾಂಪಿಯನ್ ಮ್ಯಾಡಿಸನ್ ಕೀಸ್ ಅವರನ್ನು ಮಣಿಸಿದ ಅಮೆರಿಕದ ಜೆಸ್ಸಿಕಾ ಪೆಗುಲಾ ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಎಎಫ್‌ಪಿ): ಸತತ ಎರಡು ಬಾರಿಯ ಚಾಂಪಿಯನ್ ಯಾನಿಕ್ ಸಿನ್ನರ್ ಅವರು ಸೋಮವಾರ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ನೇರ ಸೆಟ್‌ಗಳ ಗೆಲುವಿನೊಡನೆ ಕ್ವಾರ್ಟರ್ ಫೈನಲ್ ತಲುಪಿದರು. ಆದರೆ, ಮಹಿಳೆಯರ ಸಿಂಗಲ್ಸ್ ಹಾಲಿ ಚಾಂಪಿಯನ್ ಮ್ಯಾಡಿಸನ್ ಕೀಸ್ ಅವರ ಗೆಲುವಿನ ಓಟಕ್ಕೆ ತಡೆ ಬಿತ್ತು.

ಪುರುಷರ ಸಿಂಗಲ್ಸ್‌ನಲ್ಲಿ ಐದನೇ ಶ್ರೇಯಾಂಕದ ಲೊರೆಂಝೊ ಮುಸೆಟ್ಟಿ, ಎಂಟನೇ ಶ್ರೇಯಾಂಕದ ಬೆನ್ ಶೆಲ್ಟನ್ ಅವರೂ ಎಂಟರ ಘಟ್ಟಕ್ಕೆ ಮುನ್ನಡೆದರು. ಪೋಲೆಂಡ್‌ನ ತಾರೆ ಇಗಾ ಶ್ವಾಂಟೆಕ್, ಅಮೆರಿಕದ ಅಮಂಡಾ ಅನಿಸಿಮೊವಾ, ಜೆಸ್ಸಿಕಾ ಪೆಗುಲಾ ಅವರು ನೇರ ಸೆಟ್‌ಗಳ ಜಯ ಸಾಧಿಸಿ ಮುನ್ನಡೆದರು.

ಮಾರ್ಗರೇಟ್ ಕೋರ್ಟ್ ಅರೇನಾದಲ್ಲಿ ನಡೆದ ಪಂದ್ಯದಲ್ಲಿ ಎರಡನೇ ಕ್ರಮಾಂಕದ ಸಿನ್ನರ್ 6-1, 6-3, 7-6 (7/2)ರಿಂದ ಸ್ವದೇಶದ ಲುಸಿಯಾನೊ ದರ್ದೆರಿ ಅವರನ್ನು ಹಿಮ್ಮೆಟ್ಟಿಸಿದರು. ಅವರು ಮುಂದಿನ ಸುತ್ತಿನಲ್ಲಿ ಅಮೆರಿಕದ ಶೆಲ್ಟನ್ ಅವರನ್ನು ಎದುರಿಸುವರು. ಶೆಲ್ಟನ್ 12ನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್ ಅವರನ್ನು ಸೋಲಿಸಿದರು. ಸಿನ್ನರ್ ಈ ಸವಾಲನ್ನು ಗೆದ್ದರೆ ಸರ್ಬಿಯಾ ದಿಗ್ಗಜ ನೊವಾಕ್ ಜೊಕೊವಿಚ್ ಅವರೊಂದಿಗೆ ಹೈವೋಲ್ಟೇಜ್ ಸೆಮಿಫೈನಲ್ ಪಂದ್ಯಕ್ಕೆ ವೇದಿಕೆ ಸಿದ್ಧವಾಗಲಿದೆ.

ಮೆಲ್ಬರ್ನ್ ಪಾರ್ಕ್‌ನಲ್ಲಿ ಇಟಲಿಯ ಆಟಗಾರ ಹ್ಯಾಟ್ರಿಕ್ ಕಿರೀಟ ಜಯಿಸಿದಲ್ಲಿ ಓಪನ್ ಯುಗದಲ್ಲಿ (1968ರ ಬಳಿಕ) ಈ ಸಾಧನೆ ಮಾಡಿದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗುವರು. 10 ಬಾರಿಯ ಚಾಂಪಿಯನ್ ಜೊಕೊವಿಚ್ ಈ ಸಾಧನೆ ಮಾಡಿದ ಮೊದಲ ಆಟಗಾರನಾಗಿದ್ದಾರೆ.

23 ವರ್ಷದ ದರ್ದೆರಿ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ನಾಲ್ಕನೇ ಸುತ್ತು ತಲುಪಿದರು. 22ನೇ ಶ್ರೇಯಾಂಕದ ಅವರು ಮೂರನೇ ಸೆಟ್‌ನಲ್ಲಿ ಪ್ರಬಲ ಪೈಪೋಟಿ ನೀಡಿದರಾದರೂ, ಅವರ ಸ್ನೇಹಿತ 24 ವರ್ಷದ ಸಿನ್ನರ್ ಟೈಬ್ರೇಕರ್‌ನಲ್ಲಿ ಗೆದ್ದುಕೊಂಡರು.

ಸ್ವದೇಶಿ ಆಟಗಾರ್ತಿಯರ ಮತ್ತೊಂದು ಹಣಾಹಣಿಯಲ್ಲಿ ಆರನೇ ಶ್ರೇಯಾಂಕದ ಪೆಗುಲಾ 6-3, 6-4 ಸೆಟ್‌ಗಳಿಂದ ಒಂಬತ್ತನೇ ಶ್ರೇಯಾಂಕದ ಮ್ಯಾಡಿಸನ್ ಅವರನ್ನು ಮಣಿಸಿದರು. ಕಳೆದ ಆವೃತ್ತಿಯಲ್ಲಿ 30 ವರ್ಷದ ಮ್ಯಾಡಿಸನ್ ಅವರು ಬೆಲಾರೂಸ್‌ನ ಅರಿನಾ ಸಬಲೆಂಕಾ ಅವರಿಗೆ ಆಘಾತ ನೀಡಿ, ವೃತ್ತಿಜೀವನದ ಮೊದಲ ಗ್ರ್ಯಾನ್‌ಸ್ಲಾಮ್ ಕಿರೀಟ ಗೆದ್ದಿದ್ದರು.

31 ವರ್ಷದ ಪೆಗುಲಾ ನಾಲ್ಕನೇ ಬಾರಿ ಇಲ್ಲಿ ಎಂಟರ ಘಟ್ಟ ಪ್ರವೇಶಿಸಿದರು. ಆದರೆ, ಈತನಕ ಅವರಿಗೆ ಈ ಹಂತವನ್ನು ದಾಟಲು ಸಾಧ್ಯವಾಗಿಲ್ಲ. ಮುಂದಿನ ಸುತ್ತಿನಲ್ಲಿ ಅವರು ಸ್ವದೇಶದ ಮತ್ತೊಂದು ಆಟಗಾರ್ತಿ ಅನಿಸಿಮೊವಾ ಅವರನ್ನು ಎದುರಿಸುವರು. ನಾಲ್ಕನೇ ಶ್ರೇಯಾಂಕದ ಅನಿಸಿಮೊವಾ 7-6 (7/4), 6-4ರಿಂದ ಚೀನಾದ ವಾಂಗ್ ಕ್ಸಿನ್ಯು ಅವರನ್ನು ಸೋಲಿಸಿದರು.

ಐದನೇ ಶ್ರೇಯಾಂಕದ ಎಲೆನಾ ರಿಬಾಕಿನಾ 6-1, 6-3ರಿಂದ ಬೆಲ್ಜಿಯಂನ ಎಲಿಸ್ ಮೆರ್ಟೆನ್ಸ್ ಅವರನ್ನು ಮಣಿಸಿ, ಎರಡನೇ ಶ್ರೇಯಾಂಕದ ಶ್ವಾಂಟೆಕ್ ಅವರೊಂದಿಗೆ ಹಣಾಹಣಿಗೆ ವೇದಿಕೆಯನ್ನು ಸಜ್ಜುಗೊಳಿಸಿದರು. ಶ್ವಾಂಟೆಕ್ 6-0, 6-3ರಿಂದ ಆಸ್ಟ್ರೇಲಿಯಾದ ಕ್ವಾಲಿಫೈಯರ್ ಆಟಗಾರ್ತಿ ಮ್ಯಾಡಿಷನ್ ಇಂಗ್ಲಿಸ್ ಅವರನ್ನು ಪರಾಭವಗೊಳಿಸಿದರು. 168ನೇ ರ್‍ಯಾಂಕ್‌ನ ಇಂಗ್ಲಿಸ್ ಪ್ರಮುಖ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದ್ದರು.

ಮುಸೆಟ್ಟಿ ಮುನ್ನಡೆ: ಇಟಲಿಯ ಆಟಗಾರ ಮುಸೆಟ್ಟಿ 6-2, 7-5, 6-4ರಿಂದ ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಸೋಲಿಸಿದರು. 23 ವರ್ಷದ ಮುಸೆಟ್ಟಿ ಇಲ್ಲಿ ಪ್ರಥಮ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು ಮುಂದಿನ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಜೊಕೊವಿಚ್ ಅವರನ್ನು ಎದುರಿಸುವರು. ಈ ಹಿಂದಿನ ಹತ್ತು ಮುಖಾಮುಖಿಯಲ್ಲಿ ಜೊಕೊವಿಚ್ ಒಂಬತ್ತರಲ್ಲಿ ಗೆದ್ದಿದ್ದಾರೆ.

ಕಳೆದ ಆವೃತ್ತಿಯಲ್ಲಿ ಸೆಮಿಫೈನಲ್ ತಲುಪಿದ್ದ 23 ವರ್ಷದ ಶೆಲ್ಟನ್ 3-6, 6-4, 6-3, 6-4ರಿಂದ ನಾರ್ವೆಯ ರೂಡ್ ಅವರನ್ನು ಹಿಮ್ಮೆಟ್ಟಿಸಿ, ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸುವತ್ತ ದಾಪುಗಾಲಿಟ್ಟರು.

ಭಾಂಬ್ರಿ–ಆ್ಯಂಡ್ರೆ ಜೋಡಿಗೆ ನಿರಾಸೆ

ಮೆಲ್ಬರ್ನ್ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ಅವರ ಸ್ವೀಡನ್‌ನ ಜೊತೆಗಾರ ಆ್ಯಂಡ್ರೆ ಗೊರಾನ್ಸನ್ ಅವರು ಆಸ್ಟ್ರೇಲಿಯಾ ಓಪನ್‌ನ ಪುರುಷರ ಡಬಲ್ಸ್‌ನ ಮೂರನೇ ಸುತ್ತಿನಲ್ಲಿ ಹೊರಬಿದ್ದರು.

ಬ್ರೆಜಿಲ್‌ನ ಶ್ರೇಯಾಂಕರಹಿತ ಜೋಡಿಯು ಒರ್ಲಾಂಡೊ ಲುಜ್ ಮತ್ತು ರಫೆಲ್ ಮ್ಯಾಟೋಸ್ 6-7(7), 3-6ರಿಂದ 10ನೇ ಶ್ರೇಯಾಂಕದ ಭಾಂಬ್ರಿ– ಆ್ಯಂಡ್ರೆ ಅವರಿಗೆ ಆಘಾತ ನೀಡಿತು.

ಭಾಂಬ್ರಿ ನಿರ್ಗಮನದೊಂದಿಗೆ ಋತುವಿನ ಮೊದಲ ಗ್ರ್ಯಾನ್‌ಸ್ಲಾಮ್‌ನಲ್ಲಿ ಭಾರತದ ಅಭಿಯಾನ ಕೊನೆಗೊಂಡಿದೆ. ಭಾಂಬ್ರಿ ಅವರು ಮಿಶ್ರ ಡಬಲ್ಸ್‌ನಿಂದ ಮೊದಲೇ ನಿರ್ಗಮಿಸಿದ್ದರೆ, ಶ್ರೀರಾಮ್ ಬಾಲಾಜಿ ಪುರುಷರ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ನಿರಾಸೆ ಅನುಭವಿಸಿದ್ದರು.

ಲ್ಯಾನ್ಸರ್ಸ್ ಚಾಂಪಿಯನ್

ಎಕ್ಸ್ ಚಿತ್ರ
ವೇದಾಂತ ಕಳಿಂಗ ಲ್ಯಾನ್ಸರ್ಸ್ ತಂಡವು ಪುರುಷರ ಹಾಕಿ ಇಂಡಿಯಾ ಲೀಗ್‌ನ ಏಳನೇ ಆವೃತ್ತಿಯ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಫೈನಲ್‌ನಲ್ಲಿ ಲ್ಯಾನ್ಸರ್ ತಂಡವು 3–2 ಗೋಲುಗಳಿಂದ ರಾಂಚಿ ರಾಯಲ್ಸ್ ತಂಡವನ್ನು ಮಣಿಸಿತು

ಗಾಲ್ಫ್: ನೀರಜ್ ಶೆಟ್ಟಿ, ಕ್ರಿಶಾ ಚಾಂಪಿಯನ್

ಬೆಂಗಳೂರು: ನೀರಜ್ ಶೆಟ್ಟಿ ಮತ್ತು ಕ್ರಿಶಾ ನಿಚಾನಿ ಅವರು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಸೋಮವಾರ ನಡೆದ ರಿಪಬ್ಲಿಕ್ ಡೇ ಕಪ್ ಟೂರ್ನಿಯಲ್ಲಿ ಕ್ರಮವಾಗಿ ಮುಕ್ತ ಪುರುಷರ ಮತ್ತು ಮಹಿಳೆಯರ ಪ್ರಶಸ್ತಿಯನ್ನು ಗೆದ್ದರು.

ಫಲಿತಾಂಶ: ಪುರುಷರು: **ಮುಕ್ತ ವಿಭಾಗ:** ಗ್ರಾಸ್ ವಿಜೇತರು– ನೀರಜ್ ಶೆಟ್ಟಿ (38 ಅಂಕ); ರನ್ನರ್ ಅಪ್– ಸುಂದರ್ ಅಡಿಗೆ (36)
ಹ್ಯಾಂಡಿಕ್ಯಾಪ್ 0–9: ಗ್ರಾಸ್ ವಿಜೇತರು– ಶ್ರೀರಾಗ್ ಜಯರಾಮನ್ (37); ರನ್ನರ್ ಅಪ್– ಅಭಿನವ್ ಭಾಸ್ಕರ್ (36).
ಹ್ಯಾಂಡಿಕ್ಯಾಪ್ 10–18: ನೆಟ್ ವಿಜೇತರು–ರವಿಕುಮಾರ್ ರಾಜು (42); ರನ್ನರ್ ಅಪ್– ವೈಭವ್ ಗುಪ್ತಾ (42)
ಹ್ಯಾಂಡಿಕ್ಯಾಪ್ 19–24: ನೆಟ್ ವಿಜೇತರು–ರುದ್ರಪ್ರಸಾದ್ ಆರ್. (43); ರನ್ನರ್ ಅಪ್– ದೀಪಕ್ ರಮೇಶ್ (40)
ಸೀನಿಯರ್ಸ್ 65+: ಗ್ರಾಸ್ ವಿಜೇತರು– ರಂಗನಾಥ್ ವಿ (29); ನೆಟ್ ವಿಜೇತರು– ಸತೀಶ್ ಕುಮಾರ್ ಮಿತ್ತಲ್ (41).
ಸೀನಿಯರ್ಸ್ 65+: ಗ್ರಾಸ್ ವಿಜೇತರು– ಅಜಿತ್ ರಾಣಾ (27); ನೆಟ್ ವಿಜೇತರು– ಬಿ.ಕೆ. ಸುಭಾಷ್ ಚಂದ್ರ (36).
ಮಹಿಳೆಯರು: ಮುಕ್ತ ವಿಭಾಗ: ಗ್ರಾಸ್ ವಿಜೇತರು– ಕ್ರಿಶಾ ನಿಚಾನಿ (31).
ಹ್ಯಾಂಡಿಕ್ಯಾಪ್ 0–16: ನೆಟ್ ವಿಜೇತರು: ಲತಾ ಶಿವಣ್ಣ (41)
ಹ್ಯಾಂಡಿಕ್ಯಾಪ್ 17–24: ನೆಟ್ ವಿಜೇತರು: ಅನುಪ ರೊಂಗಲ (42).

ಕರ್ನಾಟಕ ಬುಲ್ಡೋಜರ್ಸ್ ತಂಡದ ಆಟಗಾರರ ಸಂಭ್ರಮ

ಸೆಮಿಗೆ ಕರ್ನಾಟಕ ಬುಲ್ಡೋಜರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಬುಲ್ಡೋಜರ್ಸ್ ತಂಡವು ಹ್ಯಾಟ್ರಿಕ್ ಗೆಲುವಿನೊಂದಿಗೆ ಸೆಲೆಬ್ರಿಟಿ ಕ್ರಿಕೆಟ್ ಲೀಗ್ (ಸಿಸಿಎಲ್) ಟಿ20 ಟೂರ್ನಿಯಲ್ಲಿ ಭಾನುವಾರ ಸೆಮಿ ಫೈನಲ್ ಪ್ರವೇಶಿಸಿತು. ಸಿನಿಮಾ ತಾರೆಯರ ನ್ನೊಳಗೊಂಡ 8 ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸುತ್ತಿದ್ದು, ಟೂರ್ನಿಯ ಪಂದ್ಯಗಳು ಮದುರೈ, ವಿಶಾಖಪಟ್ಟಣ ಹಾಗೂ ಹೈದರಾಬಾದ್‌ನಲ್ಲಿ ನಡೆಯುತ್ತಿವೆ.

ಭಾನುವಾರ ಲೀಗ್ ಪಂದ್ಯದಲ್ಲಿ ಕಿಚ್ಚ ಸುದೀಪ್ ನೇತೃತ್ವದ ಬುಲ್ಡೋಜರ್ಸ್ 18 ರನ್‌ಗಳಿಂದ ಭೋಜ್‌ಪುರಿ ದಬಂಗ್ಸ್ ತಂಡವನ್ನು ಮಣಿಸಿತು.

ಮೊದಲಿಗೆ ಬ್ಯಾಟ್ ಮಾಡಿದ ಬುಲ್ಡೋಜರ್ಸ್ ತಂಡವು ರಾಜೀವ್ ಹನು (62; 29ಎ) ಹಾಗೂ ಡಾರ್ಲಿಂಗ್ ಕೃಷ್ಣ (53; 29ಎ) ಅವರ ಅರ್ಧಶತಕ ಗಳ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 202 ರನ್ ಗಳಿಸಿತು. ಗುರಿ ಬೆನ್ನಟ್ಟಿದ ದಬಂಗ್ಸ್ ತಂಡವು 20 ಓವರ್‌ಗಳಲ್ಲಿ 184 ರನ್‌ಗಳಿಗೆ ಆಲೌಟ್ ಆಯಿತು.

6 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಬುಲ್ಡೋಜರ್ಸ್ ತಂಡವು ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಇದೇ 31ರಂದು ನಡೆಯಲಿರುವ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ವೇಲ್ಸ್ ಚೆನ್ನೈ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಮತ್ತೊಂದು ಸೆಮಿ ಫೈನಲ್‌ನಲ್ಲಿ ಬೆಂಗಾಲ್ ಟೈಗರ್ಸ್ ಮತ್ತು ಕೇರಳ ಸ್ಟ್ರೈಕರ್ಸ್ ತಂಡಗಳು ಸೆಣಸಲಿವೆ. ಫೈನಲ್ ಪಂದ್ಯವು ಫೆಬ್ರುವರಿ 1ರಂದು ನಡೆಯಲಿದೆ.

ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟಕ್ಕೆ ತೆರೆ
ಕರ್ನಾಟಕ ತಂಡಕ್ಕೆ ನಾಲ್ಕು ಪದಕ

ಲೇಹ್‌ನಲ್ಲಿ ನಡೆದ ಸ್ಪೀಡ್ ಸ್ಕೇಟಿಂಗ್ ಲಾಂಗ್ ಟ್ರ್ಯಾಕ್ 1000 ಮೀಟರ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಕರ್ನಾಟಕದ ಶ್ರೀವತ್ಸ ಎಸ್‌.ರಾವ್

ಲೇಹ್ (ಲಡಾಕ್): ಕರ್ನಾಟಕದ ಸ್ಪರ್ಧಿಗಳು ಇಲ್ಲಿ ಸೋಮವಾರ ಮುಕ್ತಾಯಗೊಂಡ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟದಲ್ಲಿ ಒಂದು ಚಿನ್ನ ಸೇರಿದಂತೆ ನಾಲ್ಕು ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ ಐದನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದರು.

ಕರ್ನಾಟಕಕ್ಕೆ ಐದೂ ಪದಕಗಳು ಸ್ಪೀಡ್ ಸ್ಕೇಟಿಂಗ್‌ನಲ್ಲೇ ಲಭಿಸಿದವು. ಲಾಂಗ್ ಟ್ರ್ಯಾಕ್ 1000 ಮೀಟರ್ ಸ್ಪರ್ಧೆಯಲ್ಲಿ ರಾಜ್ಯದ ಶ್ರೀವತ್ಸ ಎಸ್.ರಾವ್ ಚಿನ್ನದ ಸಾಧನೆ ಮೆರೆದರು. ಲಾಂಗ್ ಟ್ರ್ಯಾಕ್ 500 ಮೀಟರ್ ಸ್ಪರ್ಧೆಯಲ್ಲಿ ಹರ್ಷಿತ್ ಬಿ.ಟಿ. ಕಂಚಿನ ಪದಕ ಗೆದ್ದರು. ಪುರುಷರ ಮತ್ತು ಮಹಿಳೆಯರ ರಿಲೆನಲ್ಲಿ ಕರ್ನಾಟಕ ತಂಡಗಳು ತಲಾ ಬೆಳ್ಳಿ ಪದಕ ಗೆದ್ದವು. ರಾಜ್ಯದ ಮಿಶ್ರ ರಿಲೆ ತಂಡವು ಕಂಚಿನ ಸಾಧನೆ ಮಾಡಿತು.

ಹರಿಯಾಣ ತಂಡವು ಒಟ್ಟಾರೆ 7 (4 ಚಿನ್ನ, 1 ಬೆಳ್ಳಿ ಹಾಗೂ 2 ಕಂಚು) ಪದಕಗಳನ್ನು ಗೆದ್ದು ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಆತಿಥೇಯ ಲಡಾಖ್ (2 ಚಿನ್ನ, 5 ಬೆಳ್ಳಿ ಹಾಗೂ 4 ಕಂಚು) ಹಾಗೂ ಮಹಾರಾಷ್ಟ್ರ (2 ಚಿನ್ನ, 3 ಬೆಳ್ಳಿ ಹಾಗೂ 2 ಕಂಚು) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರೆ, ನಂತರದ ಸ್ಥಾನವನ್ನು ತೆಲಂಗಾಣ (ತಲಾ 2 ಚಿನ್ನ, ಬೆಳ್ಳಿ ಹಾಗೂ ಕಂಚು) ಗಳಿಸಿತು.

ಅಂತಿಮ ದಿನ ನಡೆದ ಪುರುಷರ ಐಸ್–ಹಾಕಿ ಸ್ಪರ್ಧೆಯ ಫೈನಲ್‌ನಲ್ಲಿ ಭಾರತೀಯ ಸೇನಾ ತಂಡವು 3–2ರಿಂದ ಚಂಡೀಗಢ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. 2000 ಮೀ. ಶಾರ್ಟ್ ಟ್ರ್ಯಾಕ್ ಮಿಶ್ರ ರಿಲೆ ಸ್ಪರ್ಧೆಯಲ್ಲಿ ಮಹಾರಾಷ್ಟ್ರ (3 ನಿ., 22.47ಸೆ.) ಸ್ವರ್ಣ ಜಯಿಸಿತು. ಲಡಾಖ್ (3ನಿ., 29.34ಸೆ) ಬೆಳ್ಳಿ ಗೆದ್ದರೆ, ಕರ್ನಾಟಕ (3ನಿ., 57.01ಸೆ.) ಕಂಚಿಗೆ ಕೊರಳೊಡ್ಡಿತು.

ಚೆಸ್: ಮಂದಾರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಗೋವಾದ ಮಂದಾರ್ ಪ್ರದೀಪ್

ಹುಬ್ಬಳ್ಳಿ: ಗೋವಾದ ಮಂದಾರ್ ಪ್ರದೀಪ್ ಲಾಡ್ (ರೇಟಿಂಗ್: 2194) ಅವರು ಸೋಮವಾರ ಕೊನೆಗೊಂಡ ಅಖಿಲ ಭಾರತ ಮುಕ್ತ ಫಿಡೆ ರೇಟೆಡ್ ಚೆಸ್ ಟೂರ್ನಿಯ ರ್‍ಯಾಪಿಡ್ ಹಾಗೂ ಬ್ಲಿಟ್ಜ್ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದರು.

ಗಣರಾಜ್ಯೋತ್ಸವದ ಪ್ರಯುಕ್ತ ಇಲ್ಲಿನ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ ಟೂರ್ನಿಯಲ್ಲಿ ಮಂದಾರ್ ಅವರು ಒಟ್ಟು ಒಂಬತ್ತು ಸುತ್ತುಗಳಲ್ಲಿ ರ್‍ಯಾಪಿಡ್ ವಿಭಾಗದಲ್ಲಿ ತಮಿಳುನಾಡಿನ ಅಯ್ಯಪ್ಪನ್ ಪಿ ಸಂತಾನಪ್ರಭು ವಿರುದ್ಧ ಆರನೇ ಸುತ್ತಿನಲ್ಲಿ ಡ್ರಾ ಸಾಧಿಸಿದರು. ಉಳಿದ 8 ಸುತ್ತುಗಳಲ್ಲಿ ಗೆಲುವು ಸಾಧಿಸಿ 8.5 ಅಂಕ ಪಡೆದು, ವಿಜೇತರಾದರು.

ಬ್ಲಿಟ್ಜ್ ವಿಭಾಗದಲ್ಲಿ ಸತತ ಎಂಟು ಸುತ್ತುಗಳಲ್ಲಿ ಜಯ ಗಳಿಸಿ, ಕೊನೆಯ ಸುತ್ತಿನಲ್ಲಿ ಬೆಳಗಾವಿಯ ಶ್ರೀಕರ ದರ್ಭಾ ವಿರುದ್ಧ ಡ್ರಾ ಸಾಧಿಸಿಒಟ್ಟು 8.5 ಅಂಕ ಪಡೆದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ರ್‍ಯಾಪಿಡ್ ವಿಭಾಗದಲ್ಲಿ ಮಹಾರಾಷ್ಟ್ರದ ಋಷಿಕೇಶ್ ಕಬ್ನೂರಕರ (ರೇಟಿಂಗ್: 2027), ಅಯ್ಯಪ್ಪನ್ ಪಿ ಸಂತಾನಪ್ರಭು (ರೇಟಿಂಗ್: 1898) ಹಾಗೂ ಬ್ಲಿಟ್ಜ್ ವಿಭಾಗದಲ್ಲಿ ಧಾರವಾಡದ ಆದಿತ್ಯ ಕಲ್ಯಾಣಿ (ರೇಟಿಂಗ್: 1933), ಶ್ರೀಕರ ದರ್ಭಾ (ರೇಟಿಂಗ್: 1785) ಅವರು ತಲಾ ಎಂಟು ಅಂಕ ಗಳಿಸಿ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದರು.

ಮೊದಲ ಮೂರು ಸ್ಥಾನ ಪಡೆದವರಿಗೆ ರ್‍ಯಾಪಿಡ್ ವಿಭಾಗದಲ್ಲಿ ಕ್ರಮವಾಗಿ ₹40 ಸಾವಿರ, ₹30 ಸಾವಿರ, ₹20 ಸಾವಿರ ಹಾಗೂ ಬ್ಲಿಟ್ಜ್ ವಿಭಾಗದಲ್ಲಿ₹10 ಸಾವಿರ, ₹8 ಸಾವಿರ, ₹6 ಸಾವಿರ ನಗದು ಹಾಗೂ ಬಹುಮಾನ ವಿತರಿಸಲಾಯಿತು. ರ್‍ಯಾಪಿಡ್ ವಿಭಾಗದಲ್ಲಿ ಒಟ್ಟು 45 ಸ್ಥಾನ ಹಾಗೂ ಬ್ಲಿಟ್ಜ್ ವಿಭಾಗದಲ್ಲಿ ಒಟ್ಟು 30 ಸ್ಥಾನಗಳಿಗೆ ಪ್ರಶಸ್ತಿ ನೀಡಲಾಯಿತು.

ರಾಜ್ಯದ ವಿವಿಧ ಜಿಲ್ಲೆಗಳೊಂದಿಗೆ ಗೋವಾ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ರಾಜ್ಯ ಹಾಗೂ ಮಲೇಷ್ಯಾ, ಅಮೆರಿಕ ದೇಶ ಸೇರಿದಂತೆ ಒಟ್ಟು 300 ಆಟಗಾರರು ಭಾಗವಹಿಸಿದ್ದರು.